SAPTHAGIRI(KANNADA)
ILLUSTRATED MONTHLY
Volume:01,Issue:03,Pages:56
October-2021, Price Rs. 5/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ
ಅಕ್ಟೋಬರ್ 2021
ಬೆಲೆ ರೂ. 5/-



11-10-2021
ಸೋಮವಾರ
ರಾತ್ರಿ:
ಗರುಡವಾಹನ

ತಿರುಮಲೆ
ಶ್ರೀವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
2021 ಅಕ್ಟೋಬರ್ 07 ರಿಂದ 15 ರ ವರೆಗೆ



## ತಿರುಮಲೆ
## ಶ್ರೀವೇಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು
## 2021 ಅಕ್ಟೋಬರ್ 07 ರಿಂದ 15 ರ ವರೆಗೆ



07-10-2021
ಗುರುವಾರ
ಹಗಲು :
ಧ್ವಜಾರೋಹಣ



07-10-2021
ಗುರುವಾರ
ರಾತ್ರಿ : ದೊಡ್ಡಶೇಷವಾಹನ



08-10-2021
ಶುಕ್ರವಾರ
ಹಗಲು : ಚಿಕ್ಕಶೇಷವಾಹನ



# ಭಗವದ್ಗೀತೆ

**ನಿಮಿತ್ತಾನಿ ಚ ಪಶ್ಯಾಮಿವಿಪರೀತಾನಿ ಕೇಶವ**
**ನ ಚ ಶ್ರೇಯೋನು ಪಶ್ಯಾಮಿ ಹತ್ವಾ ಸ್ವಜನ ಮಾಹವೇ**

(ಶ್ರೀಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 30)

ಕೃಷ್ಣ, ಕೆಟ್ಟ ಅಪಶಕುನಗಳನ್ನು ಕಾಣುತ್ತಿದ್ದೇನೆ, ಯುದ್ಧದಲ್ಲಿ ನನ್ನವರನ್ನು ಕೊಂದರೆ ಒಳ್ಳೆಯದಾದೀತೆಂದು ನನಗೆ ಅನ್ನಿಸುವುದಿಲ್ಲ.

ನೋಡು ನೋಡು ಗರುಡಗಮನನೆ
ಮಾಡು ದಯವನು ವೇಗದಿ
ಪಾಡುವೆ ಆನಂದದಲಿ
ಕೊಂಡಾಡುವೆನು ನಿನ್ನ ಮೂರ್ತಿಯಾ

ಮಂಗಳಾಂಗನೆ ಮನ್ಮಥನ ಪಿತ
ಸಂಗೀತ ಸುರಲೋಲನೆ
ಕಂಗಳುಬ್ಬರ ತೀರುವಂತೆ ಚರ
ಣಂಗಳನೆ ತೋರೋ ವಿನಯದಿ

ಪರಮ ಪುರುಷನೆ ಪುಣ್ಯಶ್ಲೋಕನೆ
ದುರುಳ ದೈತರ ದಲ್ಲಣ್ಣ
ಮರಿಯಲೀಸದೆ ನಿನ ಚರಣ
ಸ್ಮರಣೆ ಒದಗಿಸುವುದಕ್ಕೆ

ವಂದನೆಯು ಗೋವಿಂದ ಗೋಪಾಲ
ಮಂದರಧರ ಮಾಧವಾ
ಇಂದು ವಿಜಯವಿಠಲ ನಿನ್ನ
ಸಂದರುಶನವ ತೋರುತಾ



(ಏಳನೆಯ ದಶಕ)

# ದಯಾ ಶತಕಮ್

- ಎನ್. ನರಸಿಂಹಾಚಾರ್ಯ



ಅಕೂಪಾರ್ರೈ ರೇಕೋದಕಸಮಯವೈತಂಡಿಕಜವೈಃ
ಅನಿರ್ವಾಪ್ಯಾಂ ಕ್ಷಿಪ್ರಂ ಕ್ಷಪಯಿತುಮವಿದ್ಯಾಖ್ಯಬಡಬಾಮ್।
ಕೃಪೇ ತ್ವಂ ತತ್ತಾದೃಕ್ರಥಿಮ ವೃಷಪೃಥ್ವೀಧರ ಪತಿ
ಸ್ವರೂಪದ್ವೈಗುಣನಿಜಬಿಂದುಃ ಪ್ರಭವಸಿ ॥ ೬೧॥

ಹಿಂದಿನ ದಶಕದಲ್ಲಿ ಅಂಗಗಳೊಡನೆ ಕೂಡಿದ ಪ್ರಪತ್ತಿಗೆ ನಿರೂಪಿಸಲ್ಪಟ್ಟಿತು. ಈ ದಶಕದಲ್ಲಿ ಪ್ರಪತ್ತಿ ಮಾಡುವವನಿಗೆ ಪ್ರಪತ್ತಿ ಮಾಡಿದ ಮೇಲೆ ದಯಾದೇವಿಯಿಂದುಂಟಾಗುವ ಅನುಕೂಲಗಳು ತಿಳಿಸಲ್ಪಡುವುವು. ಹಿಂದಿನ ದಶಕದ ಕೊನೆಯ ಪದ್ಯದಲ್ಲಿ ದಯೆಯ ಪ್ರವಾಹದ ವಿಚಾರವು ಸೂಚಿಸಲ್ಪಟ್ಟಿತು. ಆ ಪ್ರವಾಹದ ಕಾರ್ಯಗಳೇ ಈ ದಶಕದಲ್ಲಿ ಅಲ್ಲಲ್ಲಿ ನಿರೂಪಿಸಲ್ಪಡುತ್ತವೆ..

ಹಿಂದಿನ ಪದ್ಯದಲ್ಲಿ ನನ್ನ ಪಾಪಗಳನ್ನು ನಿರ್ಮೂಲ ಮಾಡುವಂತಹ ಪ್ರವಾಹವನ್ನು ನನ್ನ ಮೇಲೆ ಪ್ರವಹಿಸುವಂತೆ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ. ಆದರೆ, ಚೇತನರ ಪಾಪಗಳು ಪ್ರಳಯಕಾಲದಲ್ಲಿಯೂ ನಾಶವಾಗದಂತಹವು ಅವುಗಳನ್ನು ಹೋಗಲಾಡಿಸುವುದಕ್ಕೆ ತನಗೆ ಶಕ್ತಿಯುಂಟೇ ಎಂದು ದಯೆಗೆ ಸಂದೇಹವುಂಟಾದರೆ ದಯಾಪ್ರವಾಹವು ದಯೆಗಿಂತಲೂ ಅತ್ಯಂತ ಮಿಗಿಲಾದುದೆಂದು ದಯೆಯ ಪ್ರಭಾವವನ್ನು ಈ ಪದ್ಯದಲ್ಲಿ ನಿರೂಪಿಸುತ್ತಾರೆ.

ಪ್ರಳಯಕಾಲದಲ್ಲಿ ಎಲ್ಲ ಸಮುದ್ರಗಳೂ ಒಂದಾಗಿ ಸೇರಿ ಅತ್ಯಧಿಕವೇಗದಿಂದ ಜಗತ್ತನ್ನು ಕಬಳಿಸುವಂತೆ ಪ್ರವಹಿಸುವುವು. ಆ ಕಾಲದಲ್ಲಿ ಆ ಮಹಾಸಮುದ್ರಗಳ ವೇಗವು ಹೇಗಿದೆ ಎಂದರೆ, ವಿತಂಡಾವಾದಿಯ ವಾದದ ವೇಗದಂತಿದೆಯೆಂದು ಆಚಾರ್ಯರು ಬಹು ಸ್ವರಸವಾದ ಹೋಲಿಕೆಯನ್ನು ಕೊಟ್ಟಿರುತ್ತಾರೆ. ವಿತಂಡಾವಾದಿಗೆ ವಾದದಲ್ಲಿ ತನ್ನದು ಇಂತಹ ಪಕ್ಷವೆಂದೂ, ಅದನ್ನು ವಾದದಿಂದ ಸ್ಥಾಪಿಸ ಬೇಕೆಂಬುದೂ ಯಾವ ನಿಯಮವೂ ಇಲ್ಲ. ಯಾರು ಯಾವುದನ್ನು ಹೇಳಿದರೂ ಅದನ್ನು ತನ್ನ ಆಡಂಬರದಿಂದ ಕೂಡಿದ ಶಬ್ದಜಾಲಗಳಿಂದ ಅಡಗಿಸುವುದಷ್ಟೇ ಉದ್ದೇಶ.ಅದೇ ಆತನ ಪ್ರಭಾವ ಅದರಂತೆಯೇ ಪ್ರಳಯ ಕಾಲದ ಸಮುದ್ರಗಳೂ ಯಾವುದನ್ನು ರಕ್ಷಿಸಬೇಕು.ಯಾವುದನ್ನು ನಾಶಮಾಡಬೇಕೆಂಬ ವಿಭಾಗ ವಿಲ್ಲದೆ ಎಲ್ಲವನ್ನೂ ಕಬಳಿಸುವುವು.ಅಂತಹ ಪ್ರಳಯ ಕಾಲದ ಸಮುದ್ರಗಳಿಂದಲೂ ಶಮನ ಗೊಳಿಸಲಾರದಂತಹ ಬಡಬಾಗ್ನಿಯೆಂತಹವು ಅವಿದ್ಯ ಎಂದು ಕರೆಯಲ್ಪಡುವ ಚೇತನರ ಕರ್ಮಗಳು,ಅಗ್ನಿಗೆ "ಆಶ್ರಯಾಶ" ವೆಂಬ ಮತ್ತೊಂದು ಹೆಸರುಂಟು. ಅಂದರೆ ತಾನು ಯಾವುದನ್ನು ಆಶ್ರಯಿಸಿರುವುದೋ ಅದನ್ನೇ ನಾಶಮಾಡುವುದೆಂದು ಅದು ಅರ್ಥ. ಬಡಬಾಗ್ನಿಯೂ ಅಂತಹುವೇ. ಅದರಂತೆಯೇ ಈ ಕರ್ಮಗಳೂ ಕೂಡ ತಮಗೆ ಆಶ್ರಯವಾದ ಜೀವರನ್ನು ನಾಶಪಡಿಸುವುವು. ಅಂತಹ ಪ್ರಳಯ ಕಾಲದ ಸಮುದ್ರಗಳು ಒಂದು ವೇಳೆ ಪ್ರಸಿದ್ಧವಾದ ಬಡಬಾಗ್ನಿಯನ್ನು ಶಮನ ಗೊಳಿಸಿದರೂ ಕರ್ಮರೂಪವಾದ ಬಡ ಬಾಗ್ನಿಯನ್ನು ನಾಶಪಡಿಸಲಾರವು ಅಂದರೆ ಜೀವರ ಕರ್ಮಗಳು ಪ್ರಳಯ ಕಾಲದಲ್ಲಿ ನಾಶವಾಗಲಾರವೆಂಬುದೇ ಇದರ ಅಭಿಪ್ರಾಯ, ಅಂತಹ ಕರ್ಮ ರೂಪವಾದ ಬಡಬಾಗ್ನಿಯನ್ನು ಒಂದು ಕ್ಷಣದಲ್ಲಿಯೇ ನಾಶಮಾಡಲು ನಿನ್ನ (ದಯೆಯ) ಪ್ರವಾಹವೊಂದೇ ಸಮರ್ಥವಾದುದು. ಪರ ಮಾತ್ಮನ ಆತ್ಮ ಸ್ವರೂಪವು ವಿಭುವಾದುದು. ಅಂದರೆ, ಎಲ್ಲ ಕಡೆಯಲ್ಲಿ ವ್ಯಾಪಿಸಿ ತನಗಿಂತಲೂ ದೊಡ್ಡದಾದುದು ಇನ್ನೊಂದಿಲ್ಲವೆಂದು ಪ್ರಕಾಶಿಸುವಂಥಹದು. ಅಂತಹ ಪರಮಾತ್ಮ ಸ್ವರೂಪಕ್ಕೆ ನಾಲಕ್ಕುರಷ್ಟು ದೊಡ್ಡದಾದುದು ನಿನ್ನ (ದಯೆಯ) ಸ್ವರೂಪವೆಂದು ಆಚಾರ್ಯರು ನಿರೂಪಿಸಿರುತ್ತಾರೆ.ಹೀಗೆ ಪರಮಾತ್ಮಸ್ವರೂಪಕ್ಕಿಂತಲೂ ನಾಲ್ಕುರಷ್ಟು ದೊಡ್ಡದೆಂದು ಹೇಳಿದರೆ ಆ ದಯಾ ಪ್ರವಾಹದ ಸ್ವರೂಪವನ್ನು ನಾವು ಮನಸ್ಸಿನಲ್ಲಿ ಕಲ್ಪಿಸುವುದಾದರೂ ಹೇಗೆ? ಆದ್ದರಿಂದ ನಿನ್ನ (ದಯೆಯ ಪ್ರವಾಹವು ಅಷ್ಟೊಂದು ದೊಡ್ಡದಾದರಿಂದಲೇ ಜೀವರ ಕರ್ಮಗಳು ಎಷ್ಟೇ ಪ್ರಬಲವಾಗಿದ್ದರೂ, ಪ್ರಳಯ ಕಾಲದಲ್ಲಿಯೇ ನಾಶವಾಗದಂತಹವೇ ಆಗಿದ್ದರೂ ಒಂದು ಕ್ಷಣದಲ್ಲಿ ನಶಿಸುವುದೆಂದು ಭಾವವು. ದಯಾ ಪ್ರವಾಹವು ಪರಮಾತ್ಮ ಸ್ವರೂಪವನ್ನು ಮುಳುಗಿಸುವುದು. ಅಂದರೆ, ದಯೆಯ ಸಂಪರ್ಕ ವಿಲ್ಲದ ಪರಮಾತ್ಮ ಸ್ವರೂಪವೇ ಇಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಪ್ರಪತ್ತಿ ಮಾಡಿದವನ ವಿಷಯದಲ್ಲಿ ಭಗವದ್ದಯೆಯು ಪ್ರವಾಹವು ಏರ್ಪಟ್ಟು, ಸಂಚಿತ, ಪ್ರಾರಬ್ಧವೆಂಬ ಅನೇಕ ವಿಧವಾದ ಪಾಪಗಳನ್ನು ನಾಶ ಮಾಡವುದು. ಪ್ರಪನ್ನನಿಗೆ ಪ್ರಪತ್ತಿ ಮಾಡಿದ ಕೂಡಲೇ ಉಂಟಾಗುವ ಮೊದಲನೆಯ ಅನುಕೂಲವು ಇದೇ ಎಂಬ ಶಾಸ್ತ್ರಾರ್ಥವೂ ಇಲ್ಲಿ ವಿವಕ್ಷಿತವಾದುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಪ್ಲವನಾಮ ಸಂವತ್ಸರ
ಭಾದ್ರಪದ - ಆಶ್ವಯುಜ
ಮಾಸ ಸಂಚಿಕೆ

ಸಂಪುಟ - 01 ಅಕ್ಟೋಬರ್ 2021 ಸಂಚಿಕೆ -03



**ಗೌರವ ಸಂಪಾದಕರು**
ಡಾ ॥ ಕೆ. ಎಸ್. ಜವಹರ್ ರೆಡ್ಡಿ , ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು ,ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 6 |
| ಶ್ರೀವೆಂಕಟೇಶ್ವರ ಸ್ತವರಾಜ | -ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 7 |
| ತಿರುಪತಿಯ ಭಾಗ್ಯಪ್ರದ ಶ್ರೀನಿವಾಸ ದೇವರು | -ಶ್ರೀಧರ ರಾಯಸಂ | 9 |
| ಹಿರಿಯರ ತೃಪ್ತಿ ಪಡಿಸುವ ಪಕ್ಷ | -ಶ್ರೀಮತಿ. ಕೆ.ವಿ. ಲತಾ | 12 |
| ಬ್ರಹ್ಮೋತ್ಸವದಿ ಹರಿದಾಸರು ಕಂಡ ಶ್ರೀನಿವಾಸ | -ಡಾ॥ ರಾಮಚಂದ್ರ ದಾಸ್ ಸಿ.ಜೆ. | 15 |
| ಬಿಂಡಿಗನವಿಲೆ ಪ್ರಸನ್ನಕೇಶವದೇವಾಲಯ | - ಕೆಂಗೇರಿ ಚಕ್ರಪಾಣಿ | 19 |
| ಯುಗ ಯುಗಗಳಲ್ಲಿ ವೆಂಕಟಗಿರಿ | - ಎಂ.ಎಸ್.ಜಿ. | 21 |
| ಶ್ರೀ ವೆಂಕಟೇಶ್ವರ ಸ್ವಾಮಿ ಆಲಯ | - ದಿ॥ ಬಿ.ಎನ್.ಶ್ರೀನಿವಾಸನ್ | 25 |
| ನವರಾತ್ರಿ ಸಂಭ್ರಮ | -ಶ್ರೀಮತಿ. ಮೀರಾ . ಪ್ರ. ಜೋಷಿ | 31 |
| ತುಂಬುರು ತೀರ್ಥ ಮಹಿಮೆ | - ಎಸ್. ವಾದಿರಾಜ | 34 |
| ಶ್ರೀನಿವಾಸನ ಅಲಂಕಾರವನ್ನು ವರ್ಣಿಸಿದ ಅಂದ ಭಕ್ತ | - ಶ್ರೀಮತಿ.ಸೂರ್ಯವಂಶಿ | 36 |
| ಸಪ್ತಮಾತೃಕೆಯರು | - ಡಾ॥ ಎಸ್. ನಂಜುಂಡಸ್ವಾಮಿ | 41 |
| ಇಂದೆನಗೆ ಗೋವಿಂದನ ದರುಶನಾ | - ಡಾ॥ ಸುಭಾಸ ಕಾಖಂಡಕಿ | 46 |
| ಕಾವೇರಿ ಸಂಕ್ರಮಣ | - ಹನುಮಂತ ಮ. ದೇಶಕುಲಕರ್ಣಿ | 41 |
| ಶ್ರೀನಿವಾಸ ಕಲ್ಯಾಣ | -ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ | 51 |
| ಚಿತ್ರಕಥೆ - ಗರುಡವಾಹನ | -ಡಿ. ಶ್ರೀನಿವಾಸ ದೀಕ್ಷಿತರು | 52 |
| ಕ್ವಿಜ್ | | 54 |

ಮುಖಚಿತ್ರ - ಗರುಡ ವಾಹನದ ಮೇಲೆ ಶ್ರೀಮಲೆಯಪ್ಪಸ್ವಾಮಿ, ತಿರುಮಲೆ
ಹಿಂಬದಿಚಿತ್ರ - ಚಕ್ರಸ್ನಾನ, ತಿರುಮಲೆ

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು www.tirumala.org ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂ
ಪಾ
ದ
ಕೀ
ಯ

# ಏಳು ಬೆಟ್ಟದೊಡೆಯನ ಬ್ರಹ್ಮೋತ್ಸವ

ಕಲಿಯುಗದ ವೈಕುಂಠವಾದ ತಿರುಮಲೆ ಕ್ಷೇತ್ರದಲ್ಲಿ ಸ್ವಯಂಭುವಾಗಿ ನೆಲೆಸಿ ಅರ್ಚನೆಗಳನ್ನು ಸ್ವೀಕರಿಸುತ್ತಾ ಇರುವ ಸಾಕ್ಷಾತ್ತು ಶ್ರೀಮನ್ನಾರಾಯಣನೇ ಶ್ರೀವೆಂಕಟೇಶ್ವರಸ್ವಾಮಿ.

ಏಳು ಬೆಟ್ಟದೊಡೆಯನಿಗೆ ವರ್ಷ ಪೂರ್ತಿ ಎಷ್ಟೋ ಉತ್ಸವಗಳು ನಡೆಯುತ್ತದೆ. ಆ ಉತ್ಸವಗಳಲ್ಲಿ ಪ್ರತ್ಯೇಕವಾದುದು ಬ್ರಹ್ಮೋತ್ಸವಗಳು. ಶ್ರೀನಿವಾಸನ ಸನ್ನಿಧಿಯಲ್ಲಿ ನಿತ್ಯವೂ ಹಬ್ಬವೇ! ನಿತ್ಯವೂ ಪರಮಾನ್ನವೇ!!ಆದ್ದರಿಂದಲೇ "ನಿತ್ಯಕಲ್ಯಾಣ ಪಚ್ಚತೋರಣ" ಎಂಬ ಮಾತು ಶ್ರೀವೆಂಕಟಾಚಲಕ್ಕೆ ಅಕ್ಷರಃ ಸತ್ಯವಾದ ಮಾತು. ಆದರೆ ಅವುಗಳೆಲ್ಲದರಲ್ಲೂ ವರ್ಷಕ್ಕೊಮ್ಮೆ ನಡೆಯುವ ಬ್ರಹ್ಮೋತ್ಸವ ವೈಭವ ಮಾತ್ರ "ನ ಭೂತೋ ನ ಭವಿಷ್ಯತಿ" ಚತುರ್ಮುಖ ಬ್ರಹ್ಮದೇವನೆ ಮೊಟ್ಟ ಮೊದಲು ನಿರ್ವಹಿಸಿದರಿಂದ ಇದಕ್ಕೆ ಬ್ರಹ್ಮೋತ್ಸವಗಳು ಎಂಬ ಹೆಸರು ಪ್ರಸಿದ್ಧವಾಯಿತು. ಬ್ರಹ್ಮೋತ್ಸವದಲ್ಲಿ ಪ್ರತಿದಿನ ಉತ್ಸವದ ಭಾಗವಾಗಿ ಪ್ರತಿದಿನ ವೈಭವವಾಗಿ ನಡೆಯುವ ಹತ್ತು ದಿನದ ಈ ಉತ್ಸವದಲ್ಲಿ ಸಮಸ್ತ ಲೋಕದಲ್ಲಿರುವ ದೇವತೆಗಳು ಪಾಲುಗೊಳ್ಳುತ್ತಾರೆ. ಸಪ್ತಗಿರಿಗಳೆಲ್ಲ ಶೋಭಾಯಮಾನವಾಗಿ ಪ್ರಕಾಶಿಸುತ್ತದೆ.

ಒಂದು ಆಲಯದ ಘನತೆಯಾಗಲೀ, ಪ್ರಾಮುಖ್ಯತೆಯಾಗಲಿ, ಆ ಆಲಯದ ಉತ್ಸವಗಳ ಆರಂಭ, ಅದು ಆಕರ್ಷಿಸುವ ಯಾಂತ್ರಿಕ ಸಂಖ್ಯಾಸಮುದಾಯ, ಅವುಗಳ ರೀತಿಗಳ ಬಗೆಗೆ ಆಧಾರಗೊಂಡಿರುತ್ತದೆ. ಇದು ಸರ್ವೇಸಾಧಾರಣವಾದ ವಿಷಯ.ಆ ದೃಷ್ಟಿಯಿಂದ ನೋಡಿದರೆ ತಿರುಮಲೆಯ ಶ್ರೀವೆಂಕಟೇಶ್ವರ ಸ್ವಾಮಿಯ ಬ್ರಹ್ಮೋತ್ಸವಗಳು ಆ ಸ್ವಾಮಿಯ ಪ್ರಸಿದ್ಧಿಗೆ ತಕ್ಕಂತೆ ಅನೇಕ ತಲೆಮಾರುಗಳಿಂದ ನೆರವೇರಿಸಲ್ಪಡುತ್ತಿದೆ ಎಂದೇ ಹೇಳಬಹುದು. ಈ ಬ್ರಹ್ಮೋತ್ಸವದಲ್ಲಿ ಶಾಶ್ವತವಾಗಿ ನಿಂತಿರುವ ಶ್ರೀವೆಂಕಟೇಶ್ವರನು ಇಂದಿಗೂ ಅಷ್ಟೇ ವೈಭವದಿಂದ ಈ ಉತ್ಸವಗಳನ್ನು ನಡೆಸಿಕೊಳ್ಳುತ್ತಿದ್ದಾನೆಂದರೆ ಅದು ಅತ್ಯಂತ ಅಪರೂಪವೂ, ವಿಶೇಷವು ವಿಶಿಷ್ಟವೂ ಆಗಿದೆ. ಆ ರೀತಿ ಅಂದಿನಿಂದ ಇಂದಿನವರೆಗೂ ಶ್ರೀನಿವಾಸನ ಎಲ್ಲಾ ಉತ್ಸವಗಳಿಗಿಂತಲೂ ಈ ಬ್ರಹ್ಮೋತ್ಸವಗಳಿಗೆ ಅತ್ಯಂತ ಪ್ರಾಮುಖ್ಯತೆ ಇದೆ.

ಎಲ್ಲೆಡೆ ಕರೋನ ವೈರಸ್ ಸಾಂಕ್ರಾಮಿಕದ ಎರಡನೇ ತರಂಗವು ಜೀವನವನ್ನು ಅಸ್ತವ್ಯಸ್ತಗೊಳಿಸಿದ ಕಾರಣ ತಿ.ತಿ.ದೇ.ಯು ಭಕ್ತರುಗಳ ಆರೋಗ್ಯದ ದೃಷ್ಟ್ಯಾ ಎಲ್ಲಾ ಉತ್ಸವಗಳನ್ನು ಏಕಾಂತವಾಗಿ ನಡೆಸಬೇಕೆಂದು ತಿ.ತಿ.ದೇ ನಿರ್ಧರಿಸಿದೆ. ಆದಷ್ಟು ಬೇಗ "ಭವರೋಗ ವೈದ್ಯನಾದ, ಧನ್ವಂತರೀ ರೂಪಿಯಾದ ಆ ಶ್ರೀಹರಿ"ಯೇ ಈ ರೋಗವನ್ನು ನಾಶಮಾಡಿ ನಮ್ಮ ಇಡೀ ಪ್ರಪಂಚವನ್ನೇ ಕಾಪಾಡಬೇಕೆಂದು, ಆ ಗೋವಿಂದನನ್ನು ಪ್ರಾರ್ಥಿಸೋಣ.

ಗೋವಿಂದಾ ! ಗೋವಿಂದಾ! ಗೋವಿಂದಾ!!

# ಶ್ರೀ ವೆಂಕಟೇಶ್ವರ ಸ್ತವರಾಜ

ವೇಂಕಟೇಶ ಸ್ತವರಾಜನನ್ನು ಸ್ತವನಗಳ ರಾಜ ಎನ್ನುತ್ತಾರೆ. ಏಕೆಂದರೆ ಮಹಾಮಹಿಮನಾದ, ಆದಿ ಅಂತ್ಯ ವಿಲ್ಲದ, ಅಣುತೃಣುವಿನಲ್ಲಿ ವ್ಯಾಪಿಸಿರುವ ಅಪೌರುಷೇಯ ನಾದ, ಭಕ್ತರ ದೊರೆಯಾದ ವೇಂಕಟಾಚಲ ಪತಿಯಾದ ವೇಂಕಟೇಶನ ಗುಣವರ್ಣನೆ ಮಾಡುವ ಸ್ತುತಿಯಾಗಿದೆ. ಹಾಗೇ ತಿಮ್ಮಪ್ಪನಿಲ್ಲದೇ ನಮ್ಮ ಅಸ್ತಿತ್ವವಿಲ್ಲವೆಂದು ಲೋಕ ಪಾಲಕನ ಜೊತೆ ಅಪ್ಪತೆಯಲ್ಲಿ ಪ್ರೀತಿಯಿಂದ ತಂದೆ ಮಗನ ಜೊತೆ ಮಾತಾಡುವ ರೀತಿಯಲ್ಲಿ ಆರ್ತರಾಗಿ ಮೊರೆ ಹೋಗಿದ್ದಾರೆ.

ಈ ವೇಂಕಟೇಶ ಸ್ತವರಾಜವನ್ನು ಗುರು ಜಗನ್ನಾಥ ದಾಸರು ರಚಿಸಿದರು. ಇವರು ಮೂಲತಃ ಅದವಾನಿಯ ಹತ್ತಿರದ ಕೌಶಿಕ ಕ್ಷೇತ್ರದ ಕೋಶಗಿ ಗ್ರಾಮದಲ್ಲಿ ವೇಂಕಟಗಿರಿ ಮತ್ತು ಸೀತಮ್ಮ ದಂಪತಿಗಳಲ್ಲಿ ಮಾರ್ಗಶಿರ ಶುದ್ಧ ಪಂಚಮಿ ಸ್ವಾಮಿ ರಾಯ ಮಗನಾಗಿ ಜನಿಸಿದರು. ಇವರು ಕೌತಾಳದ ಸಮೀಪದ ವ್ಯಾಸರಾಜ ಪ್ರತಿಷ್ಠಿತ ಪ್ರಾಣದೇವರ ದೇವೆ ಮತ್ತು ಇಬ್ರಾಮಪುರ ಅಪ್ಪಾರವರ ಸೇವೆ ಮಾಡಿ ವಿಶೇಷ ಜ್ಞಾನ ಪಡೆದರು.

ಗೋಪಾಲದಾಸರ ಅಪ್ಪಣೆ ಮೇರೆಗೆ ಅವರ ತಮ್ಮನಾದ "ತಂದೆ ಗೋಪಾಲವಿಠಲ್ ಅಂಕಿತ ಪಡೆದ ಕೃಷ್ಣದಾಸರಿಂದ" ಗುರುಜಗನ್ನಾಥ ವಿಠಲ್ ಅಂಕಿತ ಪಡೆದು ಗುರುಜಗನ್ನಾಥದಾಸರು ಎಂದು ಪ್ರಖ್ಯಾತರಾದವರು.ಇವರು ಹಲವಾರು ದೀರ್ಘ ಕೃತಿಗಳಾದ ವೇಂಕಟೇಶ ಸ್ತವರಾಜ, ಲಕ್ಷ್ಮೀ ಹೃದಯ ಧೃವಚರಿತೆ,ರಾಘವೇಂದ್ರ ರಕ್ಷಾಕವಚ ಹೀಗೆ ಕೃತಿಗಳನ್ನು ಮತ್ತು ಸ್ತೋತ್ರಗಳನ್ನು ರಚಿಸಿದ್ದಾರೆ.

ಮೂಲತಃ ಇದು ಸಂಸ್ಕೃತದಲ್ಲಿ ಇರುವ ಲಕ್ಷ್ಮಿಹೃದಯ ಮತ್ತು ನಾರಾಯಣ ಹೃದಯ ಸಾರವೇ ಈ ವೇಂಕಟೇಶ ಸ್ತವರಾಜ. ಇದರ ಅನುಷ್ಟಾನದಿಂದ ಪಠನೆ ಮಾಡಿದರೆ ಮಂತ್ರಸಿದ್ಧಿಯಿದೆ. ಆದರೆ ಇದಕ್ಕೆ ಕಠಿಣ ನಿಯಮಗಳುಂಟು.



ಆದರೆ ಗುರುಜಗನ್ನಾಥದಾಸರು "ವೇಂಕಟೇಶ ಸ್ತವರಾಜ"ಎಂಬ ೧೯ ನುಡಿಗಳ್ಳುಳ್ಳ ಪದ್ಯವನ್ನು ಜನ ಸಾಮಾನ್ಯರಿಗೆ ತಿಳಿಯುವ ಹಾಗೆ,

ಸುಲಭವಾಗಿ ಪಠನೆಮಾಡಲು ಬರುವ ಹಾಗೇ ದಾಸರು ರಚಿಸಿದ್ದಾರೆ. ದಾಸರು ಪದ್ಯದ ಮೊದಲ ನುಡಿಯಲ್ಲಿ ಮೊದಲ ಸಾಲಲ್ಲಿ "ಶ್ರೀರಮಣ ಸರ್ವೇಶ ಸರ್ವಗ ಉಪಯೋಗಿಸಿದ್ದಾರೆ.

ಏಕೆಂದರೆ ನಾವುಗಳು ಲಕ್ಷ್ಮಿ ಸಹಿತ ವೇಂಕಟೇಶನ ಪೂಜೆ ಮಾಡಬೇಕು.

ಎಂದು ತೋರಿಸಿ ಕೊಟ್ಟಿದ್ದಾರೆ. "ಶ್ರೀ" ಎಂದರೆ ಸಿರಿ ಮತ್ತು ಮಂಗಳಕರ "ಲಕ್ಷ್ಮಿ" ಲಕ್ಷ್ಮಿಗೆ ಪತಿಯಾದ ಮತ್ತು ಸಮಸ್ತ ಲೋಕಕ್ಕೆ ಒಡೆಯನಾದ ಭಗವಂತನ ಜೊತೆ ಲಕ್ಷ್ಮಿಯನ್ನು ಪೂಜಿಸಬೇಕು ಎಂದಿದ್ದಾರೆ. ಹಾಗೇ ನಮ್ಮಂತ ಪಾಮರರು ಅರಿತು ಅಥವಾ ಅರಿಯದೆ ಮಾಡಿದ ತಪ್ಪುಗಳು ಮತ್ತು ಅಹಂಕಾರ ಮನ್ನಿಸು ಎಂದು ಕರುಣೆಯಿಂದ ಬೇಡಿದ್ದಾರೆ.ಹಾಗೇ ನಿನ್ನ ಹೊರತು ಅನ್ಯ ದೇವರಿಲ್ಲ ಯಾರು ಗತಿಯಿಲ್ಲ ಎಂದು ಶ್ರದ್ಧಾ ಭಕ್ತಿಯಿಂದ ಬಂದ ಭಕ್ತರ ಕಾಪಾಡು ಎಂದಿದ್ದಾರೆ.

ಲಕ್ಷ್ಮಿ, ಬ್ರಹ್ಮರುದ್ರಾದಿಗಳು ಭಕ್ತಿಯಿಂದ ನಿನ್ನ ಸ್ತೋತ್ರ ಮಾಡಿಸಿಕೊಳ್ಳುವ ಸರ್ವೋತ್ತಮನಾದ ನೀನು ಎಲ್ಲರನ್ನು ಕರುಣೆಯಿಂದ ರಕ್ಷಿಸಿದವ, ಭೂಮಿಯ ಪಾಮರರನ್ನು ರಕ್ಷಿಸು. ನಿನ್ನ ಪಾದದ ಮೇಲೆ ನಿರಂತರ ಭಕುತಿ ಕೊಡು ನನ್ನಲ್ಲಿ ಭಕುತಿ ಕೊಡದಿದ್ದರೆ ನಿನಗೆ ಅಪಕೀರ್ತಿ ಬಂದಿತು ಎಂದು

"ಭಕುತಿ ನೀ ಎನಗೀಯಲು,
ವ್ಯಕುವಾಗ್ಯಪಕೀರ್ತಿ ಬಪ್ಪದು"

ಎಂದು ಪ್ರೀತಿಯಿಂದ ವೇಂಕಟೇಶನಲ್ಲಿ ದೂರಿದ್ದಾರೆ.

ಇನ್ನು ಮುಂದೆ ಭಗವಂತನು ನೀನು ಅನುಗ್ರಹದಿಂದ ನಮ್ಮನ್ನು

–ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ
8050436752

ರಕ್ಷಿಸಲಿಲ್ಲವೆಂದರೆ ನಮ್ಮ ಸ್ಥಿತಿ ಡೋಂಬೆಗಾರನ ಪರಿಸ್ಥಿತಿಯಂತೆ ನಮ್ಮ ಸ್ಥಿತಿಯು ಸಹ ಅತಂತ್ರ ಆಗುತ್ತದೆ ಎಂದು ಹೇಳಿದ್ದಾರೆ. ನೀನು ಎಲ್ಲರ ಬಿಂಬ ಮೂರತಿಯಲ್ಲಿರುವ ವಾತ ನೀನು ಹೀಗಾಗಿ ಈ ವಿಶ್ವವೇ ನಿನ್ನ ಕುಟುಂಬ ನೀನು ಕೈಬಿಡಬೇಡ ಕಂಬುವರವೇ ಗತಿಯು ವಿಶ್ವ ಕುಟುಂಬ ಸಲಹೋ ಎಂದಿದ್ದಾರೆ. ಆರನೇ ನುಡಿಯಲ್ಲಿ ಎಲ್ಲ ದಶಾವತಾರದ ಬಗ್ಗೆ ಹೇಳಿ, ಯಾವ ಅವತಾರವೆತ್ತಿದರು ಭಕ್ತರ ಉದ್ಧಾರ ಸಲುವಾಗಿ ಹೀಗಾಗಿ ನಿನ್ನ ನಾ ಬಿಡೇನು ಎಂದಿದ್ದಾರೆ.

ನೀರಮುಳಗಿ ಬಾರಹೊತ್ತು ಧಾರುಣಿ ತಳವಗೆದು ಸಿಟ್ಟಿಲಿ
ಕ್ರೂರನುದುರವ ಸೀಳಿ ಕರುಳಿನ ಮ್ಯಾಲೆ ಧರಿಸಿದರು
ಘೋರ ವಿಪ್ರ ಕುಠಾರಿ ವನವನ
ಚಾರಿ ಗೋಪ ಏರಿ ಘೋದರು ನಿನ್ನ ಬಿಡೆನು


ಎಂದು ಹೇಳಿದ್ದಾರೆ.

ಇಲ್ಲಿ ಭಗವಂತನು ಯಾವುದೇ ಅವತಾರವೆತ್ತಿರಲಿ ಯಾರಲ್ಲಿಯೂ ಯಾವ ಸಮಯದಲ್ಲಿಯೂ ಪಕ್ಷಪಾತ ಮಾಡದೇ ರಕ್ಷಣೆ ಮಾಡಿದ್ದರ ಬಗ್ಗೆ ವರ್ಣಿಸಿದ್ದಾರೆ.

ಕೃಷ್ಣಾವತಾರದಲ್ಲಿ ದ್ರೌಪದಿಗೆ ವಸನವನ್ನು ಅಕ್ಷಯ ಮಾಡಿ ದುಷ್ಟರಿಗೆ ಶಿಕ್ಷಿಸಿದೆ. ಕುರುಕ್ಷೇತ್ರ ಯುದ್ಧದಲ್ಲಿ ಕೌರವರ ಜೊತೆ ಎಲ್ಲ ಗುರುಗಳು ಇದ್ದರು ಕಪಟ ನಾಟಕ ಸೂತ್ರನಾದ ನೀನು ಪಾಂಡವರ ರಕ್ಷಣೆ ಮಾಡಿದೆ. ಹಾಗೇ ಪುಟ್ಟ ಬಾಲಕನಾದ ಪ್ರಲ್ಹಾದನ ಭಕ್ತಿಗೆ ಮೆಚ್ಚಿ ಮತ್ತು ತಂದೆ ತಾಯಿಗಳ ಬಿಟ್ಟ



ಭಗವಂತ ನಿನ್ನನ್ನು ಹುಡುಕಿಬಂದ ಧ್ರುವನ ಭಕ್ತಿಗೆ ಮೆಚ್ಚಿ ಇವರಿಬ್ಬರ ನಿಷ್ಕಾಮ ಭಕ್ತಿಗೆ ಒಲಿದು ಅವರಿಗೆ ಶ್ರೇಷ್ಠ ಪದವಿ ಕೊಟ್ಟಿರುವ ಬಗ್ಗೆ ಅವಿರ್ಭೂತವಾಗಿ ವರ್ಣಿಸಿದ್ದಾರೆ.



## ಧ್ವಜಾರೋಹಣ

ಪ್ರತಿ ದೇವಸ್ಥಾನಕ್ಕೂ ಧ್ವಜಸ್ಥಂಭವಿರುತ್ತದೆ. ಧ್ವಜಸ್ತಂಭವನ್ನು ನೋಡಿ ದೇವಸ್ಥಾನದ ಒಳಗೆ ಇರುವ ದೇವರು ಯಾರೆಂದು ಗುರುತಿಸಬಹುದು. ಧ್ವಜಸ್ಥಂಭಕ್ಕೆ ನಮಿಸಿದರೆ ಸ್ವಾಮಿಗಳ ಪಾದಗಳಿಗೆ ನಮಸ್ಕರಿಸಿದಂತೆಯೇ.

## ಧ್ವಜ ಸ್ಥಂಭವೆಂದರೆ ಪತಾಕ ಧ್ವಜ

ವೈಷ್ಣವ ದೇವರಿಗೆ ಗರುಡಪತಾಕವಿದ್ದರೆ, ಶೈವ ದೇವರುಗಳಿಗೆ ವೃಷಭ (ನದಿ) ಪತಾಕವಿರುತ್ತದೆ. ಶಕ್ತಿ ದೇವತೆಗಳಿಗೆ ಸಿಂಹ ಅಥವಾ ವ್ಯಾಘ್ರ ಪತಾಕವಿರುತ್ತದೆ.

ತಿರುಮಲೇಶ್ವರನು ವಿಷ್ಣುವಿನ ಅವತಾರವಾಗಿರುವುದರಿಂದ ಮೂರು ಅಡಿ ಉದ್ದ, ಮೂರು ಅಡಿಗಳ ಅಗಲವಿರುವ ಹೊಸ ಬಿಳಿಯ ವಸ್ತ್ರದ ಮೇಲೆ ಗರುಡ ಚಿತ್ರವನ್ನು ಬಿಡಿಸಿ ಧ್ವಜಸ್ಥಂಭದ ಮೇಲೆ ಹಾರಿಸಲು ನೂಲಿನ ಹಗ್ಗವನ್ನು ಸಿದ್ಧಪಡಿಸಿ ಶ್ರೀದೇವಿ ಭೂದೇವಿ ಸಹಿತ ಮಲೆಯಪ್ಪ ಸ್ವಾಮಿಗಳ ಸಮಕ್ಷಮದಲ್ಲಿ ಗರುಡ ಧ್ವಜವನ್ನು ಅದೃಶ್ಯದಿಂದ ಸಂಚರಿಸುವ ಸಮಸ್ತ ದೇವತೆಗಳಿಗೆ ಇದೇ ಬ್ರಹ್ಮೋತ್ಸವಗಳ ಆಹ್ವಾನ.ಬ್ರಹ್ಮೋತ್ಸವಗಳ ಮೊದಲನೇ ದಿನ ಬೆಳಗ್ಗೆ ಈ ಕಾರ್ಯಕ್ರಮ ನಡೆಯುತ್ತದೆ.

ಪ್ರತಿಯೊಂದು ಚಿಕ್ಕ ಚೊಕ್ಕವಾಗಿ ಬಹಳ ಚಂದದ ದೃಷ್ಟಾಂತವನ್ನು ಕೊಟ್ಟು ದಾಸರು ಅನನ್ಯ ಭಕ್ತಿ ಪರವಶತೆಯಲ್ಲಿ ಸ್ತುತಿಸಿದ್ದಾರೆ.

ಆನೆಯ ಮೊರೆಯ ಕೇಳಿ ಪತ್ನಿಯ ಮಾತು ಲೆಕ್ಕಿಸದೇ ಬಂದು ರಕ್ಷಿಸಿದವನು, ಮತ್ತು ಸುಧಾಮನು ಕೊಟ್ಟ ಹಿಡಿ ಅವಲಕ್ಕಿಗೆ ಪ್ರೀತಿ ಭಕ್ತಿಯಲ್ಲಿ ಬಂದ ಅವನನ್ನು ಉದ್ಧರಿಸಿದೆ.

ಹೀಗೆ ಅನೇಕ ದಶಾವತಾರ ಮತ್ತು ಭಾಗವತದ ಪ್ರಸಂಗ ಕೊಟ್ಟು ಇಂತಹ ಅಂತರಂಗದ ಭಕ್ತರನ್ನು ಸಲುಹಿದ ಏಕದೇವ ನೀನು ಎಂದಿದ್ದಾರೆ ಹೀಗಾಗಿ ನನ್ನ ಬಿಂಬ ಮೂರುತಿಯಲ್ಲಿ ನಿನ್ನ ವಾಸ ಸದಾ ಇರಲಿ ಹಾಗೇ ಜ್ಞಾನಿಗಳ ಸಂಗವಿದ್ದು ನಿನ್ನ ನಾಮಸ್ಮರಣೆ ಜ್ಞಾನ ಚಿಂತನೆ ಜೊತೆ ವಿನಯ ವಿರುವ ಹಾಗೇ ಮಾಡಿ ಜ್ಞಾನ ಭಕ್ತಿ ವೈರಾಗ್ಯ ಪಾಲಿಸು ಮದ, ಮತ್ಸರ, ಲೋಭ, ಮೋಹ ಎಂದು ಸುಳಿಯದ ಹಾಗೇ ರಕ್ಷಿಸು ಎಂದಿದ್ದಾರೆ. ಮದವು ಮೋಹ ಲೋಭ ಮೋಹವು,ಒದಗಬಾರದು, ಪದಮನಾಭನೇ ಜ್ಞಾನ ಭಕ್ತಿ ವಿರಕ್ತಿ ನೀನುತ್ತು ಎಂದಿದ್ದಾರೆ.

ನನ್ನ ನಾಲಿಗೆ ಮೇಲೆ ನಿನ್ನ ನಾಮದ ಸಿಹಿ ಇದು ಎಂದು ನಿನ್ನ ನಾಮಸ್ಮರಣೆಗೆ ಕುಂದು ಬಾರದ ಹಾಗೇ ಈ ಕಂದನನ್ನು ಸಲಹು ವೇಂಕಟೇಶ ದೇವ. ಭಗವಂತ ನಿನ್ನಲ್ಲಿ ನಾ ಏನಂತ ಬೇಡಲಿ ಅನಂತ ಗುಣಸಾಗರನಾದ ನೀನು ಈಶ,ನಾನು ದಾಸ ಹೀಗಾಗಿ ನನಗೆ ಏನು ಕೊರತೆಯಿಲ್ಲ ಮತ್ತು ಈ ಜಗತ್ತಿನಲ್ಲಿ ಯಾರು? ಹಿತವರು ಯಾರು? ದ್ವೇಷಿಗಳು, ಸ್ನೇಹಿತರಾರು ಯಾರು ಗೊತ್ತಿಲ್ಲ ಆದರೆ ನೀನು ನನ್ನ ಜೊತೆ ಇದ್ದಿಯಾ ನೀನೇ ನನ್ನ ಕ್ರೂರರಿಂದ ರಕ್ಷಿಸುತ್ತಿಯಾ ಎಂದಿದ್ದಾರೆ. ಎಲ್ಲ ಕಾಲದಲ್ಲಿಯೂ ನಿನ್ನ ಗುಣ ಸ್ತವನ ಮಾಡುವ ಜ್ಞಾನ ಮತ್ತು ಭಕ್ತಿ ಕೊಡು ಎಂದಿದ್ದಾರೆ.

ಹೀಗೆ ಕೊನೆಯಲ್ಲಿ ಮತ್ತೇ ದಶಾವತಾರದ ಅವತಾರವೆತ್ತಿದ್ದ ಭಗವಂತನಿಗೆ ಜಯವೆನ್ನುತ್ತಾ,ಎಲ್ಲ ಅವತಾರದಲ್ಲಿಯೂ ಕರುಣೆಯಿಂದ ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸಿದ್ದಿಯಾ ಹೀಗೆ ನಮ್ಮಂತಹ ನಿನ್ನ ನಂಬಿ ಬಂದ ಪಾಮರನನ್ನು ಪ್ರೇಮದಿ ನೋಡು ಎಂದಿದ್ದಾರೆ.

ಈ ಸ್ತವರಾಜದಲ್ಲಿ ದಾಸರು ಭಗವಂತನಲ್ಲಿ ನಿಶ್ಚಲ ಭಕ್ತಿ, ದಶಾವತರಾದ ಮತ್ತು ಭಾಗವತದ ದೃಷ್ಟಾಂತದ ಜೊತೆ ಬಹಳ ಸರಳ ಸುಂದರವಾಗಿ ವರ್ಣಿಸಿದ್ದಾರೆ ಹಾಗೇ ಮನಸ್ಸಿನ ಅಷ್ಟದಳ ಕಮಲದಲ್ಲಿ ಬಿಂಬಮೂರತಿ ಭಗವಂತನಲ್ಲಿ ಬೇಡಿಕೊಂಡಿದ್ದಾರೆ.

ಈ ಸ್ತವನದಲ್ಲಿ ಮನುಜ “ನಾನೇ ಎಲ್ಲ ನಾನೇ ಬಲ್ಲ” ಅಹಂಕಾರದಿಂದ ಮೆರೆವವನು.ಕಲಿಯುಗದಲ್ಲಿ ಇಂತಹ ಸತ್ವಸಾರವಿರುವ ವೇಂಕಟೇಶ ಸ್ತವರಾಜ ಪಠಣದಿಂದ ಎಲ್ಲ ಮದ ಇಳಿದು ಭಕ್ತಿರಸ ಹೊಮ್ಮುವಂತಹ ಸ್ತೋತ್ರ ಮಾಲಿಕಾ.



## ದೊಡ್ಡ ಶೇಷವಾಹನ

ಶ್ರೀ ವೇಂಕಟೇಶ್ವರನಿಗೆ ಆದಿಶೇಷನೇ ಸುಖದ ಸುಪ್ಪತ್ತಿಗೆ, ಆದಿಶೇಷನ ಹೆಡೆಯೇ ಸ್ವಾಮಿಗೆ ಛತ್ರ. ಆದ್ದರಿಂದ ಶೇಷನ ಮೇಲೆ ಪ್ರೀತಿ ಜಾಸ್ತಿ, ಶೇಷನಿಗೂ ಸ್ವಾಮಿಗಳ ಮೇಲೆ ಭಕ್ತಿ ಜಾಸ್ತಿ. ಈ ಕಾರಣದಿಂದ ಶ್ರೀನಿವಾಸನು ಮೊದಲನೆಯ ದಿನದ ಬ್ರಹ್ಮೋತ್ಸವದ ರಾತ್ರಿ ಆದಿಶೇಷನ ವಾಹನದ ಮೇಲೆ ಕುಳಿತು ತಿರುಮಲೆ ಬೀದಿಯಲ್ಲಿ ಮೆರೆಯುತ್ತಾನೆ.

## ಚಿಕ್ಕಶೇಷವಾಹನ

ಎರಡನೆಯ ದಿನದ ಬೆಳಗ್ಗೆ ಶ್ರೀನಿವಾಸನು ಶ್ರೀದೇವಿ ಭೂದೇವಿಯರ ಜೊತೆಗೆ ಚಿಕ್ಕಶೇಷವಾಹನದ ಮೇಲೆ ತಿರುಬೀದಿಗಳಲ್ಲಿ ಮಂಗಳ ವಾದ್ಯಗಳೊಂದಿಗೆ ಅಭಯ ಹಸ್ತವನ್ನು ತೋಲಿಸುತ್ತಾ ಸಂಚರಿಸುತ್ತಾನೆ.ಗೋವಿಂದ ನಾಮಸ್ಮರಣೆಗಳಿಂದ ತಿರುಬೀದಿಗಳು ಪ್ರತಿಧ್ವನಿಸುತ್ತವೆ.





# ತಿರುಪತಿಯ ಭಾಗ್ಯಪ್ರದ ಶ್ರೀನಿವಾಸ ದೇವರು

- ಶ್ರೀಧರ ರಾಯಸಂ
98453 27129

ದೇವರೆಂದರೆ ಭೂ ವೈಕುಂಠ ಎಂದೇ ಹೆಸರಾಗಿರುವ ತಿರುಮಲೆಯಲ್ಲಿ ನೆಲೆಸಿರುವ ಶ್ರೀನಿವಾಸ ದೇವರು ಸಜ್ಜನರಿಗೆ ಸಕಲ ಅಭೀಷ್ಟೆ ನೆರವೇರಿಸುವ ಭಾಗ್ಯ ಪ್ರದ ದೇವರು.ಗುರು ಎಂದರೆ ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳು. ತಿರುಪತಿ ತಿಮ್ಮಪ್ಪ, ಮಂತ್ರಾಲಯದ ರಾಘಪ್ಪ ಎಂದೇ ಜನರು ಕರೆಯುವುದು ವಾಡಿಕೆ.

ಸಪ್ತಗಿರಿಯಲ್ಲಿ ಪಾಪನಾಶಕವಾದ ವೆಂಕಟಾದ್ರಿ ಎಂಬ ಶೋಭಾಯಮಾನವಾದ ಬೆಟ್ಟದಲ್ಲಿ ನೆಲೆಸಿರುವ ದೇವತೆಗಳನ್ನೂ ದಾಸರನ್ನಾಗಿ ಮಾಡಿಕೊಂಡಿರುವ ಶ್ರೀನಿವಾಸನೆಂಬ ಕಲ್ಪವೃಕ್ಷವು ತನ್ನ ನೆರಳಿನಿಂದ ಯಾವಾಗಲೂ ಭಕ್ತರನ್ನು ಕಾಪಾಡುವನು. ಎರಡು ಬಾಹುಗಳಲ್ಲಿ, ಶಂಖ, ಚಕ್ರ, ಚಿಹ್ನೆಗಳಿಂದ ಶೋಭಿತರಾಗಿ ವೆಂಕಟೇಶನ ಪಾದವನ್ನು ಪೂಜಿಸುತ್ತಾರೋ ಅಂತಹ ಭಕ್ತರಿಗೆ ಈ ಸಂಸಾರ ಸೊಂಟ ಮಟ್ಟದಾಗುತ್ತದೆ. ಅರ್ಥಾತ್ ಸಂಸಾರ ಸಾಗರ ದಾಟಲು ಸುಲಭವಾಗುತ್ತದೆ. ಗರುಡನ ಹೆಗಲೇರಿ, ಶ್ರೀದೇವಿ ಭೂದೇವಿಯಿಂದ ಆಲಂಗಿತನಾಗಿ, ನಮಿಸುವವರಿಗೆ ಸರ್ವಸ್ವ ಸ್ವರೂಪನಾಗಿ ಭಜಿಸುವವರಿಗೆ ಭಾಗ್ಯಪ್ರದ ವೆಂಕಟೇಶನು ಅನುಗ್ರಹ ಮಾಡುವನು. ಅದೇ ರೀತಿ ಶ್ರೀನಿವಾಸ ದೇವರು ಶೇಷನನ್ನು ಹಾಸಿಗೆ ಮಾಡಿಕೊಂಡು ಮಲಗಿ ಭಕ್ತರಿಗೆ ಅನುಗ್ರಹಿಸುವನು.ಗರುಡ ಶೇಷದೇವರು ಶ್ರೀನಿವಾಸ ದೇವರಿಗೆ ಭಕ್ತರಲ್ಲಿ ಅತ್ಯಂತ ಶ್ರೇಷ್ಠರು.

ತಿರುಪತಿಯ ವೆಂಕಟೇಶನ ದರ್ಶನಕ್ಕೆ ಉಡುಪಿ ಸೋದೆ ಮಠದ ಶ್ರೀವಾದಿರಾಜ ಗುರುಸಾರ್ವಭೌಮರು ಹೊರಟಾಗ ತಿರುಪತಿ ಬೆಟ್ಟದ ದಾರಿ ಶಾಲಿಗ್ರಾಮದಂತೆ ಭಾಸವಾಯಿತು. ತಮ್ಮ ಪಾದ ಊರಲು ಮನಸ್ಸಾಗದೆ. ಮೊಣಕಾಲನ್ನು ಊರುತ್ತಾ ಕಡಿದಾದ ತಿರುಪತಿ ಬೆಟ್ಟವನ್ನು ಏರಿ ದೇವರ ತಾಣ ತಲುಪಿದ್ದು ಇತಿಹಾಸವಾಯಿತು. ದರ್ಶನ ಭಾಗ್ಯ ಶ್ರೀ ವಾದಿರಾಜರಿಗೆ ಸುಲಭವಾಗಿ ದೊರಕದೆ, ಹೊರಗಿನ ಆವರಣದ ಉತ್ತರ ಭಾಗದ ದೇಗುಲದ ಗೋಪುರದಲ್ಲಿ ವಿಮಾನ ಶ್ರೀನಿವಾಸ ದೇವರು ತನ್ನ ಸಾನಿಧ್ಯ ತೋರಿಸಿ, ಅನುಗ್ರಹಿಸಿದ ಭಕ್ತರು ಮೂಲ ದೇವರ ದರ್ಶನವಾದ ಮೇಲೆ, ಹೊರ ಆವರಣದಲ್ಲಿ ಗೋಪುರದಲ್ಲಿರುವ - ವಿಮಾನ ಶ್ರೀನಿವಾಸ ಎಂಬ ಹೆಸರಿನ ಚಿಕ್ಕ ಪ್ರತಿಮೆಯನ್ನು ನೋಡಿ ದರ್ಶಿಸುವುದು ಈಗಲೂ ವಾಡಿಕೆ!!! ಶ್ರೀ ವಾದಿರಾಜರ ಅಪಾರ ಮಹಿಮೆಗಳನ್ನು ತಿಳಿದ ದೇಗುಲದ ಆಡಳಿತ ಮಂಡಳಿಯವರು ಆಗ ಶ್ರೀವಾದಿರಾಜರಿಗೆ ಆದರಾತಿಥ್ಯ ಮಾಡಿ, ದೇವರ ದರ್ಶನ ಮಾಡಿಸಿ, ಧನ್ಯತೆ ಪಡೆದರು. ತಿರುಪತಿಯ ಶ್ರೀನಿವಾಸ ದೇವರ ದರ್ಶಿಸಿದ ಶ್ರೀವಾದಿರಾಜರು, ಭಕ್ತಿಯಿಂದ ಸಾಲಿಗ್ರಾಮ ಸರವನ್ನು ದೇವರಿಗೆ ಸಮರ್ಪಿಸಿದರು. ಈಗಲೂ ಶ್ರೀನಿವಾಸದೇವರ ಕೊರಳನ್ನು ಸಾಲಿಗ್ರಾಮ ಸರ ಅಲಂಕರಿಸಿದೆ. ದೇಗುಲದ ಅಧಿಕಾರಿಗಳು ಸ್ವಪ್ನಾದೇಶದಂತೆ, ಭೂಗತವಾಗಿದ್ದ ಶ್ರೀದೇವಿ ಭೂದೇವಿ ಸಹಿತ ಸ್ವರ್ಣ ಶ್ರೀನಿವಾಸದೇವರ ಪ್ರತಿಮೆಗಳನ್ನು ಶ್ರೀವಾದಿರಾಜರಿಗೆ ನೀಡಿ ಗೌರವಿಸಿದರು. ಸೋದೆ ವಾದಿರಾಜ ಮಠದ ಸಂಸ್ಥಾನ ಪೂಜೆಯಲ್ಲಿ ತಿರುಪತಿ ಶ್ರೀನಿವಾಸ ದೇವರ ಪ್ರತಿಮೆಗಳು ಇನ್ನಿತರ ದೇವರ ಪ್ರತಿಮೆಗಳೊಂದಿಗೆ ನಿತ್ಯವೂ ಪೂಜಿಸಲ್ಪಡುತ್ತಿವೆ.

ತೌಲವ ಬ್ರಾಹ್ಮಣ ಕುಲದವರಾದ ಅತ್ಯಂತ ನೇಮ ನಿಷ್ಠೆ ಆಚರಿಸುತ್ತಿದ್ದ ಉಡುಪಿ



ಹತ್ತಿರ ಹೂವಿನಕೆರೆಯ ರಾಮಾಚಾರ್ಯರ ಪತ್ನಿ ಸರಸ್ವತೀ ದೇವಿ ಪುತ್ರ ಸಂತಾನದ ಬಯಕೆಯಿಂದ ತಿರುಪತಿಯ ಶ್ರೀನಿವಾಸದೇವರಿಗೆ "ಲಕ್ಷಾಲಂಕಾರ ಸೇವೆ" ಮಾಡುವುದಾಗಿ ಹರಕೆ ಹೊತ್ತಳು. ಕಾಲಾನಂತರದಲ್ಲಿ ಸರಸ್ವತಿ ದೇವಿಗೆ ಗಂಡು ಮಗು ಅವತಾರವಾಯಿತು. ಭೂವರಾಹ ಎಂಬ ಹೆಸರಿನಿಂದ ಮುಂದೆ ವಾದಿಗಳನ್ನು ಜಯಿಸಿ,"ವಾದಿರಾಜ ತೀರ್ಥರೆಂಬ" ಹೆಸರಿನೊಂದಿಗೆ ಗುರುಸಾರ್ವಭೌಮರಾದರು.ಶ್ರೀವೇದ ವ್ಯಾಸರ ಆದೇಶದಂತೆ, ಶ್ರೀ ವಾದಿರಾಜರು ಲಕ್ಷ ಶ್ಲೋಕಾತ್ಮಕ ಮಹಾಭಾರತ ಗ್ರಂಥದ ಕಠಿಣ ಶಬ್ದಗಳಿಗೆ ಟೀಕೆ ಬರೆದು, ಲಕ್ಷಾಭರಣ ಮಾಡಿ,ತಾಯಿಯ ಹರಕೆಯಂತೆ ಬದರಿಯಲ್ಲಿ ಶ್ರೀವೇದ ವ್ಯಾಸ ದೇವರಿಗೆ ಸಮರ್ಪಿಸಿದರು.ಸ್ವಪ್ನದಲ್ಲಿ ತಾಯಿಯೂ ಶ್ರೀನಿವಾಸ ದೇವರ ಹರಕೆ ಸಮರ್ಪಿಸಿದ್ದು ಕಂಡು,ಮುದಗೊಂಡಳು.

ಶ್ರೀವಾದಿರಾಜ ಗುರುಸಾರ್ವಭೌಮರು ತೀರ್ಥಕ್ಷೇತ್ರಗಳ ಮಹಿಮೆಯ "ತೀರ್ಥ ಪ್ರಬಂಧ" ಕೃತಿ ರಚಿಸಿ, ಅದರಲ್ಲಿ ತಿರುಪತಿಯ ಶ್ರೀನಿವಾಸದೇವರನ್ನು ಅತಿ ಹೆಚ್ಚು, 11 ಶ್ಲೋಕಗಳಿಂದ ವರ್ಣಿಸಿರುವುದು ವಿಶೇಷ!!! ಶ್ರೀ ವಾದಿರಾಜರು, ಈ ರೀತಿ ಸ್ತೋತ್ರ ಮಾಡಿದ್ದಾರೆ.

ಶ್ರೀವೇಂಕಟಚಲಸಚ್ಛೈಲವಾಸಿ ದಾಸೀ ಕೃತಾಮರಃ
ಛಾಯಾಯಾ ಪಾತು ಮಾಂ ನಿತ್ಯಂ ಶ್ರೀನಿವಾಸ ಸುರದ್ರುಮಃ
(ತೀರ್ಥಪ್ರಬಂಧ ಪೂರ್ವಪ್ರಬಂಧ . 19 ನೇ ಶ್ಲೋಕ)

ದೇವತೆಗಳಿಗೆ ಪ್ರಿಯನಾದ ವೆಂಕಟೇಶನು ಭಕ್ತರ ಮನೆಗೇ ಹೋಗಿ ಸಂಪತ್ತು ನೀಡುತ್ತಾ, ಅವರ ಇಷ್ಟಾರ್ಥಗಳನ್ನು ಪೂರೈಸುತ್ತಾನೆ. ಪ್ರತಿದಿನ ಧನವನ್ನು ಸಂಪಾದಿಸಿ, ಆ ಧನವನ್ನು ಭಕ್ತರ ಮನೆಯಲ್ಲಿ ಸಾವಿರ ಪಾಲು ಅಭಿವೃದ್ಧಿ ಮಾಡಿ, ಅದನ್ನು ನೋಡಿ ಭಾಗ್ಯಲಕ್ಷ್ಮಿ ಭಕ್ತರ ಮನೆಯಲ್ಲಿಯೇ ಇರುವುದನ್ನು ಕಂಡು ಭಗವಂತ ಆನಂದಿಸುತ್ತಾನೆ. ನಿರಂತರ ಭಕ್ತರ ಮನೆಯಲ್ಲಿ ವಾಸಮಾಡುತ್ತಾನೆ.ವೆಂಕಟೇಶನು ಭಕ್ತರಿಗೆ ಅಭೀಷ್ಟವನ್ನು ನೀಡಿ, ಶ್ರೀಲಕ್ಷ್ಮೀ ಸಾವಿರ ಮಡಿಯಾಗಿ ಭಕ್ತರ ಮನೆಯಲ್ಲಿ ಅಭಿವೃದ್ಧಿಯಾಗುವಳು. ವೆಂಕಟೇಶನ ಅನುಗ್ರಹದಿಂದ ಲಕ್ಷ್ಮೀ ಕಟಾಕ್ಷಕ್ಕೆ ಪಾತ್ರರಾಗಿ,ಲಕ್ಷ್ಮೀ ವೆಂಕಟೇಶನ ಪ್ರತಿಮೆಯನ್ನು ತಮ್ಮ ಮನೆಯಲ್ಲಿ ಪೂಜಿಸಿ, ಧನ್ಯತೆ ಪಡೆಯುವರು.

ಧನುರ್ಮಾಸ ಮುಕ್ಕೋಟಿ ದ್ವಾದಶೀ ಅರುಣೋದಯದಲ್ಲಿ ಗಂಗಾದಿ ಸಕಲ ತೀರ್ಥಗಳ ಅಭಿಮಾನಿ ದೇವತೆಗಳು ಅದರಲ್ಲೂ ಸರಸ್ವತಿ ದೇವಿಯ ಸನ್ನಿಧಾನವಿರುವ ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ ಮಾಡಿ ವರಾಹ ದೇವರ ದರ್ಶನದೊಂದಿಗೆ, ಎಲ್ಲಾ ಜನರ ಆಶ್ರಯದಾತನಾಗಿರುವ ದೋಷರಹಿತನಾದ ಸಮಸ್ತ ಗುಣ ಪೂರ್ಣನಾದ ಶ್ರೀನಿವಾಸ ದೇವರನ್ನು ದರ್ಶಿಸಿದರೆ, ಎಲ್ಲಾ ಇಷ್ಟಾರ್ಥಗಳು ಈಡೇರುವುವು.

ಶ್ರೀವ್ಯಾಸರಾಜರೂ 12 ವರ್ಷ ಕಾಲ ತಿರುಪತಿ ಶ್ರೀನಿವಾಸ ದೇವರುನ್ನು ಪೂಜಿಸಿದ್ದು ಇತಿಹಾಸ.

**॥ಕೃಷ್ಣಂ ವಂದೇ ಜಗದ್ಗುರುಂ॥**



**ಹಂಸವಾಹನ:** ಹಂಸ ವಿಜ್ಞಾನದ ಪ್ರತೀಕ. ವಿವೇಕ ಶಕ್ತಿಗೆ ಗುರುತು. ಆದ್ದರಿಂದಲೇ ವಿದ್ಯಾದೇವಿಯಾದ ಶಾರದಾಮಾತೆ ತನ್ನ ವಾಹನವಾಗಿ ಮಾಡಿಕೊಂಡಿದ್ದಾಳೆ. ಎರಡನೇ ದಿನದ ರಾತ್ರಿ ಶ್ರೀನಿವಾಸಸ್ವಾಮಿ ಹಂಸವಾಹನದ ಮೇಲೆ ವಿರಾಜಿತನಾಗಿ ಭಕ್ತ ಜನರಿಗೆ ವಿವೇಕ ಪ್ರಜ್ಞೆಯನ್ನು ಬೋಧಿಸುತ್ತಾನೆ. ಮನುಷ್ಯರಿಗೆ ಧನ ಕನಕಗಳಿದ್ದರೆ ಮಾತ್ರ ಸಾಲದು. ವಿವೇಕತೆಯೂ ಇರಬೇಕು ಜ್ಞಾನವೂ ಇರಬೇಕು ಎಂಬ ಸೂಚನೆ ಇದು. ಅದಕ್ಕೇ ಶ್ರೀನಿವಾಸನು ವೀಣಾಪಾಣಿಯಾಗಿ ಬಿಳಿಯ ವಸ್ತ್ರ ಧರಿಸಿ ಶಾರದಾ ಮಾತೆಯನ್ನು ನೆನಪಿಸುತ್ತಾನೆ.

## ಸಿಂಹವಾಹನ



ಮೂರನೆಯ ದಿನ ಶ್ರೀ ವೇಂಕಟಪತಿ ಸಿಂಹವಾಹನದ ಮೇಲೆ ಕುಳಿತು ತಿರುಮಲೆ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾನೆ. ಮೃಗಗಳಲ್ಲಿ ಸಿಂಹಕ್ಕೆ ಶಕ್ತಿ ಜಾಸ್ತಿ,ಆನೆಯನ್ನು ಸಹ ಸಿಂಹವು ಸುನಾಯಾಸವಾಗಿ ಕೊಲ್ಲುತ್ತದೆ. ಆದ್ದರಿಂದ ಸಿಂಹವನ್ನು ಶಕ್ತಿ ಸಂಕೇತವಾಗಿ ಭಾವಿಸುತ್ತಾರೆ. ಶ್ರೀನಿವಾಸನು ಸಿಂಹದ ಮೇಲೆ ಕುಳಿತು ಭಕ್ತರಿಗೆ ದರ್ಶನ ನೀಡುವುದರಲ್ಲಿ ಒಂದು ಸಂದೇಶವಿದೆ. ಮಾನವರಲ್ಲಿ ಮೃಗತ್ವ ದೈವತ್ವಗಳೆರಡೂ ಇವೆ. ಮೃಗತ್ವವನ್ನು ತುಳಿದಿಟ್ಟಿದ್ದರೆ ಮಾತ್ರ ದೈವತ್ವ ವೃದ್ಧಿಯಾಗಲು ಸಾಧ್ಯವಿದೆ ಎಂಬ ದಿವ್ಯ ಸಂದೇಶವಿದೆ.



# ಹಿರಿಯರ ತೃಪ್ತಿಪಡಿಸುವ ಪಕ್ಷ

– ಶ್ರೀಮತಿ. ಕೆ.ವಿ. ಲತಾ

"ಮಹಾಲಯ ಅಮಾವಾಸ್ಯೆ" ಪಿತೃಋಣ ತೀರಿಸುವ ಒಂದು ಮಹತ್ವದ ಸಂದರ್ಭ. ನಮ್ಮ ಜನನಕ್ಕೆ ಕಾರಣನಾದ ಮಾತಾಪಿತೃಗಳನ್ನು ವರ್ಷಕ್ಕೊಮ್ಮೆ ಸ್ಮರಿಸಿ, ಪಿಂಡ, ತಿಲ, ತರ್ಪಣಗಳನ್ನು ಸಮರ್ಪಿಸಿ ಆರಾಧಿಸುವ ಪರಮ ಪವಿತ್ರ ವಿಧಿಯಿದು. ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಮಹಾಲಯ ಅಮಾವಾಸ್ಯೆಗೊಂದು ಮಹತ್ವದ ಸ್ಥಾನವಿದ್ದು, ಅದು ಪಿತೃ ಪಕ್ಷವೆಂದು ಹೆಸರಾಗಿದೆ."

ಲೋಕವೆನ್ನುವ ಸಂತೆಯಲ್ಲಿ ನೂರಾರು ಜೀವಿಗಳು, ಶ್ರಮಿಕ, ವಣಿಕ, ಧನಿಕ ಹೀಗೆ ಹತ್ತಾರು ಮುಖಗಳು, ಹಲವು ವ್ಯವಹಾರಗಳು, ಆದರೆ ಅವರವರ ಕರ್ಮಕ್ಕೆ ತಕ್ಕಂತೆ ಗಳಿಸುತ್ತಾರೆ. ಗಳಿಸಿದ್ದಕ್ಕೆ ಕ್ಷಣಿಕ ತೃಪ್ತಿ ಪಡುತ್ತಾರೆ. ಬೇಕು, ಬೇಡುಗಳ ಬಯಕ್ಕೆಯಲ್ಲೇ ಮಿಂದೇಳುತ್ತಾರೆ. ಕೊನೆ ಗೊಮ್ಮೆ ಇಹ ಲೋಕದ ವ್ಯಾಪಾರ ಮುಗಿಯಿತೆಂದು ಶಾಶ್ವತವಾಗಿ ಹೊರಟು ಬಿಡುತ್ತಾರೆ. ಇಲ್ಲೊಂದು ಸಂಗತಿ ಹುಟ್ಟು, ಸಾವು, ಬದುಕು, ಹುಡುಕು, ಕೆದಕು ಯಾವುದೂ ನಮ್ಮದಲ್ಲ. ನಮ್ಮಿಚ್ಚೆಯಂತೆ ಯಾವುದೂ ನಡೆಯುತ್ತಿಲ್ಲ, ನಡೆಯುವುದೂ ಇಲ್ಲ, ಆದಾಗ್ಯೂ ದೇಹಭಾವವೇಕೆ? ಅದರೊಂದಿಗಿನ ಸಂಬಂಧಗಳೆಂಬ ಕುಣಿಕೆಗಳೇಕೆ? ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳುವಂತೆ ಪ್ರತಿಯೊಂದು ಹುಟ್ಟಿಗೂ ಒಂದು ಕಾರಣವಿದೆ. ಕೆಲವೊಂದು ಕಾರಣಗಳು ಆ ಕ್ಷಣದಲ್ಲೇ ವ್ಯಕ್ತವಾಗಬಹುದು ಮತ್ತೆ ಕೆಲ ಕಾರಣಗಳು ಮುಂದಿನ ದಿನಗಳಲ್ಲಿ ಸಂಬಂಧಗಳ ಕುಣಿಕೆಗಳಲ್ಲಿ ಪ್ರಕಟವಾಗಬಹುದು. ಪ್ರಕಟವಾಗುವಿಕೆಗೊಂದು ವೇದಿಕೆ ಸಜ್ಜಾಗಬೇಕು. ಆದರೆ ಅದ್ಯಾವುದೂ ನಮ್ಮಿಚ್ಚೆಗೆ ನಿಲುಕುವುದಿಲ್ಲ. ಎಲ್ಲ ಭಗವಂತನ ಪ್ರೇರಣೆಯೇ.

### ವಿರಕ್ತತೆಯಲ್ಲೇ ಅನುರಕ್ತತೆಯಿದೆ

ಹುಟ್ಟು ಸಾವು ಬದುಕಿನ ಎರಡು ಘಟ್ಟಗಳಾದರೂ ಅದರೆ ನಡುವಿನ ಅಂತರ ಚಿಕ್ಕದೋ, ದೊಡ್ಡದೋ ನಮಗೆ ಗೊತ್ತಿಲ್ಲ. ಆದರೂ ಪ್ರಯಾಣ ಮುಂದುವರಿಸುತ್ತೇವೆ. ಪ್ರಯಾಣದಲ್ಲಿ ಒಂದಿಷ್ಟು ಜ್ಞಾನವನ್ನು ಸಂಪಾದಿಸುತ್ತೇವೆ. ಕಲಿತ, ತಿಳಿದ ಜ್ಞಾನವನ್ನು ಕರ್ಮಾನುಗುಣ್ಯವಾದ ವಿವೇಚನೆಗೆ ತಕ್ಕಂತೆ ವಿನಿಯೋಗಿಸಿದ್ದೇವೆ ಎಂದು ಕೊಳ್ಳುತ್ತೇವೆ. ಎಲ್ಲಿಯವರೆಗೆ ಜೀವಭಾವ ದೇಹದೊಳಗೆ ಇರುತ್ತದೆಯೋ ಅಲ್ಲಿಯವರೆಗೆ ಎಲ್ಲವೂ ನನ್ನದು. ಒಮ್ಮೆ ಆ ಭಾವ ತೊರೆದು ಹೋದರೆ ನನ್ನದೆನ್ನುವುದು ಏನೂ ಇಲ್ಲ ಬಹುಶಃ ಆ ಕಾರಣಕ್ಕೇ ಮಹಾತ್ಮರು ಹೇಳುವುದು 'ಹೇ' ಮೂಢ, ದೇಹವನ್ನು ಪ್ರೀತಿಸಬೇಡ. ಆದರೊಳಗಿನ ಜೀವವನ್ನು ಪ್ರೀತಿಸು ಹೌದಲ್ಲವಾ ಎಷ್ಟು ಪ್ರಜ್ಞಾವಂತಿಕೆಯ ನುಡಿಗಟ್ಟುಗಳು.

ಅಂತಹ ಪ್ರಜ್ಞಾವಂತಿಕೆಯಲ್ಲೇ ಒಂದಿಷ್ಟು ಚಿಂತನ ಮಂಥನ ನಡೆಸೋಣ. ಈ ಶರೀರದ ಹುಟ್ಟಿಗೆ ಪಿತೃಗಳು ಕಾರಣವಾಗಿದ್ದಾರೆ. ಅಸ್ತಿತ್ವಕ್ಕೆ ದೇವತೆಗಳು ಕಾರಣರಾಗಿದ್ದಾರೆ. ಜ್ಞಾನದ ಬೆಳಕು ಕಾಣಲಿಕ್ಕೆ ಋಷಿಗಳು ಕಾರಣರಾಗಿದ್ದಾರೆ. ಜೀವರ ಕಾರಣದಿಂದ ಶರೀರದ ಹುಟ್ಟಾಗಿದೆ. ಅವರ ಉಪಕೃತತೆಯ ಕಾರಣ ಪಡೆದ ಶರೀರವಿರುವ ತನಕ ನಾವು ಅವರಿಗೆ ಋಣಿಯಾಗಿರಬೇಕು. ಇನ್ನು ಶರೀರ ಪೋಷಣೆಗೆ, ಅಸ್ತಿತ್ವಕ್ಕೆ ಅಗತ್ಯವಾದ ಮಳೆ, ಬೆಳೆ ಫಲವನ್ನು ಆ ದೈವವು ಕೊಟ್ಟಿದೆ. ಅಂತಹ ದೈವವನ್ನು ನೆನೆಯಬೇಕು. ಆಹಾರ ದೊರೆತರೆ ಮಳೆ ಬಂದರೆ ಬೆಳಕು ಕಂಡರಷ್ಟೇ ಬದುಕಿನ ಯಾನ ಮುಂದುವರೆಯುವುದಿಲ್ಲ. ಪಾಲನೆ - ಪೋಷಣೆಗೆ ಅಗತ್ಯವಾದ ಜ್ಞಾನ ಸಂಪತ್ತನ್ನು ಅಲೌಕಿಕ ವಿಚಾರ ಧಾರೆಗಳನ್ನು, ವೇದ ಭಂಡಾರವನ್ನು, ಔಷಧೀಯ ಜ್ಞಾನವನ್ನು ನೀಡಿದ ಋಷಿ ಮುನಿಗಳಿಗೆ ನಾವು ಸ್ಪಂದಿಸಬೇಕು. ಜೀವನ ಪರ್ಯಂತ ಈ ಋಣಭಾರವನ್ನು ಕಡಿಮೆ ಮಾಡಿಕೊಳ್ಳುವ ನಿಟ್ಟಿನಲ್ಲೇ ನಮ್ಮ ನಡೆಸಾಗಬೇಕು. ಈ ಪ್ರಕ್ರಿಯೆಯಲ್ಲಿ ಮೂಡಿ ಬಂದದ್ದೇ ತರ್ಪಣ ವಿಧಾನ.

ಯಾವ ಕಾರ್ಯವನ್ನು ಮಾಡಿದರೂ ಶ್ರದ್ದೆಯಿಂದ ಮಾಡಬೇಕು. ಅದರಲ್ಲೂ ಜೀವ ಸೃಷ್ಟಿಗೆ ಕಾರಣವಾದ ಪಿತೃಗಳನ್ನು ಉದ್ದೇಶಿಸಿ ಮಾಡುವ ಯಜ್ಞವೇ ಶ್ರಾದ್ಧ, ಆ ಕಾರಣದಿಂದಲೇ 'ಶ್ರದ್ಧಾಯಾ ದಧಾತಿ ಇತಿ ಶ್ರಾದ್ಧಮ್' ಎನ್ನುವ ಮಾತು ಬಂದಿರುವುದು. ನಮ್ಮೆಲ್ಲಾ ಕರ್ಮಾಚರಣೆ, ಸಂಸ್ಕಾರಗಳ ಪಾಲನೆಯ ಹಿಂದೆ ಸದಾಶಯವಿದೆ. ಲೋಕ ಕಲ್ಯಾಣ ಭಾವನೆಯಿದೆ. ಸಂಸ್ಕಾರಗಳನ್ನು ಪೂರ್ವ ಸಂಸ್ಕಾರ ಮತ್ತು ಉತ್ತರ (ಅಪರ) ಸಂಸ್ಕಾರ ಎಂದು ಗುರುತಿಸಬಹುದು. ಪೂರ್ವ ಸಂಸ್ಕಾರ ಗರ್ಭಾದಾನದಿಂದ ಪ್ರಾರಂಭವಾಗಿ ವಿವಾಹದೊಂದಿಗೆ ಮುಕ್ತಾಯವಾಗುತ್ತದೆ. ಅಪರ ಸಂಸ್ಕಾರ ವ್ಯಕ್ತಿಯ ಮೃತಾನಂತರ ಮಾಡುವ ಕ್ರಿಯೆಗಳನ್ನು ಒಳಗೊಂಡಿದೆ. ಪೂರ್ವ ಸಂಸ್ಕಾರ ಮನುಷ್ಯ ಜನ್ಮದ ಶ್ರೇಯಸ್ಸಿಗೆ ಪೂರಕವಾಗಿದ್ದರೆ ಅಪರ ಸಂಸ್ಕಾರದಿಂದ ದೇಹ ತೊರೆದ ಜೀವಾತ್ಮನಿಗೆ ಸದ್ಗತಿ ದೊರೆಯುತ್ತದೆ. ಹಾಗಾಗಿ ಅಪರ ಸಂಸ್ಕಾರವನ್ನು ಎಲ್ಲರೂ ಮಾಡಬಹುದು ಎನ್ನುವುದು ವಿದ್ವಾಂಸರ ಅಭಿಮತ.

ಪರಮ ದುರ್ಲಭವಾದ ಮನುಷ್ಯ ಜನ್ಮದ ಸಾಫಲ್ಯತೆಯು ಅದನ್ನು ಪಡೆದ ನಮ್ಮ ಆಚರಣೆಗಳ ಮೇಲೆ ಅವಲಂಬಿತವಾಗಿರುತ್ತದೆ.



ಪರಮಾತ್ಮ ನಮಗೆ ಈ ಜನ್ಮವನ್ನು ಏತಕ್ಕಾಗಿ ನೀಡಿದ್ದಾನೆ ಎಂದರೆ ಹಿಂದಿನ ಜನ್ಮದ ಪಾಪ ಶೇಷಗಳನ್ನು ಅನುಭವಿಸಿ ಮುಗಿಸಿ ಮತ್ತೆ ಇನ್ನೂ ಹೆಚ್ಚಿನದಾದ ಪುಣ್ಯಸಂಪಾದನೆ ಮಾಡಿ ಮೋಕ್ಷವನ್ನು ಪಡೆಯಲಿ ಎಂದು ಆಚಾರ್ಯ ಶಂಕರರು ನುಡಿದಂತೆ "ಪುನರಪಿ ಜನನಂ ಪುನರಪಿ ಮರಣಂ'' ಹೀಗೆ ಎಷ್ಟು ಜನ್ಮತಾಳಿದರೂ ಸಹ ಮುಗಿಸಲಾಗದಷ್ಟು ಪಾಪವನ್ನು ಒಂದೇ ಜನ್ಮದಲ್ಲಿ ಸಂಪಾದಿಸಿ ಬಿಡುತ್ತೇವೆ. ಈ ಕಠಿಣ ಸಮಸ್ಯೆಗೆ ನಮ್ಮ ಶಾಸ್ತ್ರಗಳು ಸುಲಭ ಪರಿಹಾರ ನೀಡುತ್ತವೆ. ಶಾಸ್ತ್ರಗಳ ಪ್ರಕಾರ ಮೃತರ ಆತ್ಮಗಳಿಗೆ ಶಾಶ್ವತ ಪಿತೃಲೋಕ ಪ್ರಾಪ್ತಿಯಾಗುವಂತೆ ಮಾಡುವುದು ಅವರ ಮಕ್ಕಳ ಕರ್ತವ್ಯ ಗರುಡ ಪುರಾಣದಲ್ಲಿ ಭಗವಂತನು ನುಡಿಯುತ್ತಾನೆ. 'ಯಾವನು ಪುತ್ ಎಂಬ ನರಕದಿಂದ ಪಿತೃಗಳನ್ನು ಪಾರುಮಾಡುತ್ತಾನೋ ಅವನೇ ಪುತ್ರ ಆದುದರಿಂದ ಯಾವುದೇ ಜಾತಿಬೇಧವಿಲ್ಲದೆ ಕರ್ಮಾಧಿಕಾರ ಇದ್ದಲ್ಲಿ ಪಿತೃಗಳಿಗೆ ಶ್ರಾದ್ಧ, ತರ್ಪಣ ಹಾಗೂ ದಾನಗಳನ್ನು ಮಾಡಿ ತಮ್ಮ ಋಣ ತೀರಿಸಲೇಬೇಕು.

ಪಿತೃಗಳಿಗೆ ನಾವು ಸಲ್ಲಿಸುವ ವಂದನಾರ್ಪಣೆಯೇ ಪಿತೃಪಕ್ಷದ ವಿಶೇಷ ನಾವು ಏನೇ ಸಾಧನೆ ಮಾಡಲಿ ನಮ್ಮ ಜನ್ಮಕ್ಕೆ ಇಂದಿನ ಜೀವನಕ್ಕೆ ನಮ್ಮ ಪಿತೃಗಳ ಕೊಡುಗೆ ಅಪಾರ. ಆದುದರಿಂದ ವರ್ಷಕ್ಕೊಮ್ಮೆ ಅವರೆಲ್ಲರನ್ನೂ ನೆನೆದು ನಮ್ಮ ಕೃತಜ್ಞತೆ ಸಲ್ಲಿಸಬೇಕಾಗುತ್ತದೆ. ಈ ಕರ್ಮಾಂಗಕ್ಕೆ ಯಾವುದೇ ಜಾತಿ – ಧರ್ಮಗಳ ಭೇದವಿಲ್ಲ! ಪಿತೃಪಕ್ಷವು ಸರ್ವರಿಗೂ ಅನ್ನ ಯಿಸುವ ಆಚರಣೆಯಾಗಿದೆ.

ಇಂಥ ವಿಶೇಷ ಕರ್ತವ್ಯವನ್ನು ಪಾಲಿಸಬೇಕಾದ ಸಂದರ್ಭದಲ್ಲಿ ಗಮನಿಸಬೇಕಾದ ಅಂಶ ಕಾಲ. ಯಾವ ಕಾಲದಲ್ಲಿ ಪಿತೃಗಳಿಗೆ ಸದ್ಗತಿ ನೀಡುವ ಕಾರ್ಯಗಳನ್ನು ಮಾಡಬೇಕು? ಸಾಮಾನ್ಯವಾಗಿ ವಾರ್ಷಿಕ ಶ್ರಾದ್ಧ ರೂಢಿಯಲ್ಲಿ ಇಟ್ಟುಕೊಂಡವರು ಮೃತರ ಶ್ರಾದ್ಧವನ್ನು ಅವರ ಮೃತಮಾಸದ ಆ ತಿಥಿಯಂದು ಪಿಂಡಗಳನ್ನು ಸಮರ್ಪಿಸಿ ಆಚರಿಸುತ್ತಾರೆ. ಆದರೆ ಅಂಥ ಸಮಯದಲ್ಲಿ ಶ್ರಾದ್ಧ ಮಾಡುವವರು ಪಿತೃ, ಪಿತಾಮಹಾ, ಪ್ರಪಿತಾಮಹ ಅಂದರೆ ತಂದೆ, ಅಜ್ಜ ಹಾಗೂ ಮುತ್ತಜ್ಜನಿಗೆ ಅಥವಾ ತಾಯಿ, ಅಜ್ಜಿ ಹಾಗೂ ಮುತ್ತಜ್ಜಿಗೆ ಪಿಂಡಾದಿಗಳನ್ನಿಟ್ಟು ಶ್ರಾದ್ಧ ಮಾಡುತ್ತಾರೆ. ಆದರೆ ಭಾದ್ರಪದ ಮಾಸದ ಕೃಷ್ಣಪಕ್ಷದಲ್ಲಿ ಮಾತ್ರ ಕುಟುಂಬದಲ್ಲಿ ಮೃತರಾದ ಪ್ರತಿಯೊಬ್ಬರಿಗೂ ಪಿಂಡಪ್ರದಾನ ಮಾಡಿ ತರ್ಪಣ ಕೊಡಬೇಕು. ಕಾರಣ ಮಾಸಗಳಲ್ಲಿ ಅತ್ಯಂತ ಭದ್ರಮಾಸ ಎಂದು ಕರೆಯಲ್ಪಡುವುದು ಈ ಭಾದ್ರಪದ. ಅದರಲ್ಲಿಯೂ ಕೃಷ್ಣಪಕ್ಷ ಪ್ರಾರಂಭಗೊಳ್ಳುವುದು ಉತ್ತರಭಾದ್ರಾನಕ್ಷತ್ರದಿಂದ. ಅಂದರೆ ಮನುಷ್ಯಜನ್ಮ ಮುಗಿಸಿದ ಉತ್ತರದಲ್ಲಿ ಆ ಆತ್ಮಕ್ಕೆ ಶಾಶ್ವತ ಭದ್ರ ಸ್ಥಾನವನ್ನು ಪಿತೃಲೋಕದಲ್ಲಿ ಸ್ಥಾಪಿಸಲು ಹಾಗೂ ಅವರಿಗೆ ತರ್ಪಣಾದಿಗಳನ್ನು ಕೊಟ್ಟು ಶುಭವನ್ನು ಪಡೆಯಲು ಈ ಪಕ್ಷವು ಸೂಕ್ತ ಸಮಯ. ವರ್ಷಕ್ಕೊಮ್ಮೆ ಏಕೆ ಎಂಬುದು ಸಾಮಾನ್ಯರ ಅನುಮಾನ. ಶಾಸ್ತ್ರಗಳ ಪ್ರಕಾರ ಭೂಲೋಕದಲ್ಲಿ ವಾಸ ಮಾಡುವ ನಮ್ಮ ಒಂದು ವರ್ಷ ಪಿತೃಲೋಕದವರಿಗೆ ಒಂದು ದಿವಸ. ಹೀಗಾಗಿ ವರ್ಷಕ್ಕೊಮ್ಮೆ ಪಿತೃ ಪಕ್ಷದಲ್ಲಿ ಪೂರ್ವಿಕರನ್ನು ಆರಾಧಿಸಿದರೆ ಪ್ರತಿದಿನ ಪಿತೃಗಳನ್ನು ಆರಾಧಿಸಿದಂತೆ. ಇನ್ನು ಭಾದ್ರಪದ ಮಾಸದ ಕೃಷ್ಣಪಕ್ಷದಲ್ಲಿಯೇ ಏಕೆ? 'ನಿರ್ಣಯಸಿಂಧು' ಗ್ರಂಥದಲ್ಲಿ ತಿಳಿಸಿದಂತೆ 'ಆಷಾಢ ಮಾಸದ ಹುಣ್ಣಿಮೆಯ ನಂತರ ಐದನೆಯ ಪಕ್ಷದಲ್ಲಿ ಪಿತೃಗಳು ಪ್ರತಿದಿನ ಅನ್ನ ಹಾಗೂ ನೀರನ್ನು ಬಯಸುತ್ತಾರೆ. ಇಲ್ಲಿ ಪಕ್ಷ ಎಂದರೆ 15 ತಿಥಿಗಳು. ಅಲ್ಲಿಗೆ ಆಷಾಢ ಮಾಸದ ಹುಣ್ಣಿಮೆಯ ನಂತರ ಐದನೆಯ ಪಕ್ಷ ಈ ಭಾದ್ರಪದ ಕೃಷ್ಣಪಕ್ಷ.ಆದ್ದರಿಂದ ಈ ಪಕ್ಷವನ್ನು ಪಿತೃಪಕ್ಷ ಎಂದು ಕರೆದಿದ್ದಾರೆ. ಆದುದರಿಂದ ಪಿತೃಗಳನ್ನು ತೃಪ್ತಿಪಡಿಸಲು ಅವರು ಬಯಸುವ ಅನ್ನವನ್ನು ಪಿಂಡಗಳ ಸಮರ್ಪಣೆ ಮೂಲಕ ಹಾಗೂ ಅವರು ಬಯಸುವ ನೀರನ್ನು ತರ್ಪಣಗಳ ಮೂಲಕ ನೀಡಿ ಪಿತೃಗಳ ಆಶೀರ್ವಾದಕ್ಕೆ ಪಾತ್ರರಾಗಬೇಕು.

ಮನೆಯಲ್ಲಿ ತಿಲತರ್ಪಣ ನೀಡುವುದನ್ನು ಶಾಸ್ತ್ರಗಳು ನಿಷೇಧಿಸಿವೆ. ಭಾನುವಾರ, ಶುಕ್ರವಾರ, ಭರಣಿ, ಕೃತ್ತಿಕಾ ಹಾಗೂ ಮಘಾ ನಕ್ಷತ್ರಗಳಿರುವ ದಿನಗಳಲ್ಲಿ ಕೂಡ ತಿಲ ತರ್ಪಣವನ್ನು ನಿಷೇಧಿಸಲಾಗಿದೆ. ಆದರೆ ಪಿತೃಪಕ್ಷದಲ್ಲಿ ಮಾತ್ರ ಯಾವುದೇ ನಿಷಿದ್ಧ ತಿಥಿ-ವಾರ ನಕ್ಷತ್ರಗಳಿದ್ದರೂ ತಿಲತರ್ಪಣ ಮಾಡಬಹುದು.

ತರ್ಪಣಕ್ಕೆ ಉತ್ತಮ ಸ್ಥಳಗಳೆಂದರೆ ಪವಿತ್ರ ನದೀ ತೀರಗಳು ಹಾಗೂ ಗೋಕರ್ಣಾದಿ ತೀರ್ಥಕ್ಷೇತ್ರಗಳು. ಪಿತೃಪಕ್ಷದಲ್ಲಿ ಅವಶ್ಯವಾಗಿ ತರ್ಪಣದ ಅಧಿಕಾರವುಳ್ಳವರು ಗೋಕರ್ಣ, ಶ್ರೀರಂಗಪಟ್ಟಣ ಮುಂತಾದ ಕ್ಷೇತ್ರಗಳು ಅಥವಾ ಕಾವೇರಿ, ಗಂಗಾ ಇಂಥ ಪವಿತ್ರ ನದೀತೀರಗಳಲ್ಲಿ ಪಿತೃಗಳಿಗೆ ಪಿಂಡಪ್ರದಾನ, ತರ್ಪಣಾದಿಗಳನ್ನು ಅರ್ಪಿಸುವುದು ಉತ್ತಮ. ಜೀವವು ತನ್ನ ಕರ್ಮಾನುಸಾರ ತಾನು ಹೋಗಬೇಕಾದಲ್ಲಿ ಹೋಗುತ್ತದೆ. ನಾವು ಪಿಂಡ ಹಾಕುವುದು ಪಿತೃದೇವತೆಗಳಿಗೆ, ಇದೊಂದು ದೇವತಾಗಣ, ಅದರಲ್ಲಿ ಒಟ್ಟು ನೂರು ದೇವತೆಗಳು, ಅದರಲ್ಲಿ ಮೂರು ಪ್ರದಾನ ಪಿತೃಗಳು . ಜೀವಿತ ಕಾಲದಲ್ಲಿ ತತ್ವಾಭಿಮಾನಿ ದೇವತೆಗಳನ್ನು ಹೇಗೆ ಪೂಜಿಸುತ್ತೇವೋ ಹಾಗೆಯೇ ಸತ್ತ ನಂತರ,ಈ ಸ್ಥೂಲ ಶರೀರದಿಂದ ಈಚೆ ಬಂದ ಮೇಲೆ, ಜೀವವನ್ನು ರಕ್ಷಿಸುವ ದೇವತಾಗುಣ-ಪಿತೃಗಣ. ಈ ಪಿತೃಗಳನ್ನು ನಿಯಂತ್ರಿಸುವವರು ವಸು-ರುದ್ರ-ಆದಿತ್ಯರು. ಈ ಪಿತೃದೇವತೆಗಳನ್ನು ನಮ್ಮ ಪೂರ್ವಜರು ತೀರಿಕೊಂಡ ದಿನದಂದು ಆರಾಧಿಸುವುದು ಸಂಪ್ರದಾಯ.ಇಲ್ಲಿ ಪಿತೃಗಳಿಗೆ ಪಿಂಡಪ್ರದಾನ ಮಾಡುವ ಕಾರಣವೇನೆಂದರೆ, ಒಂದು ವೇಳೆ ನಮ್ಮ ಹಿರಿಯರಿಗೆ ಅವರ ದಾರಿಯಲ್ಲಿ ಬಾಧಕವಾಗಿದ್ದರೆ, ಅದನ್ನು ಪರಿಹರಿಸಿ ಎನ್ನುವ ಪ್ರಾರ್ಥನೆಯೇ ಪಿಂಡಪ್ರದಾನ.'ಪ್ರಾರಬ್ಧ ಕರ್ಮದಿಂದ

ಅವರನ್ನು ಕಾಪಾಡಿ ಎನ್ನುವ ಪಿತೃ-ದೇವತೆಗಳ ಪೂಜೆ. ಇನ್ನು ಕಾಗೆ ಮುಟ್ಟುವುದು ಎಂದರೆ ಪಿತೃದೇವತೆಗಳು ನಮ್ಮ ಪೂಜೆಯನ್ನು ಸ್ವೀಕರಿಸಿದ ಶಕುನ ಸಂಕೇತ.

ಪ್ರಾಚೀನ ಋಷಿಗಳು - ನಮ್ಮ ಉದ್ಧಾರಕ್ಕೆ ಅನೇಕ ವಿಷಯಗಳನ್ನು ಹೇಳಿದ್ದಾರೆ. ಪುತ್ರರಿರಬೇಕು. ಅವರಿಗೆ ಸಂಸ್ಕಾರ ಕೊಟ್ಟು ದೇವತಾ - ಪಿತೃ ಕಾರ್ಯದಲ್ಲಿ ಅಧಿಕಾರ ಬರುವಂತೆ ಮಾಡಬೇಕು. ಅವರವರ ಯೋಗ್ಯತಾನುಸಾರ ಶಾಸ್ತ್ರವಿಧಿಯಂತೆ ಪಕ್ಷ ಮಾಸ ಆಚರಿಸಬೇಕು.

ಒಂದು ಬಾರಿಯಾದರೂ ಕಾಶಿ-ಗಯಾಕ್ಕೆ ಹೋಗಿ ಮೃತ ತಂದೆ ತಾಯಿಯನ್ನು ಉದ್ದೇಶಿಸಿ ವಿಷ್ಣುಪಾದದಲ್ಲಿ ಪಿಂಡಪ್ರದಾನ ಮಾಡುವುದು, ಇಂಥ ಸತ್ಕಾರ್ಯದಲ್ಲಿ ತೊಡಗಿ, ಇತರರಿಗೂ ಅನು ಕೂಲ ಮಾಡುವುದು. ಇಂಥವರು ಪುತ್ರರೂ ಎನಿಸುವರು. ತಂದೆ ತಾಯಿಗಳ ಶ್ರಾದ್ಧ ಮಾಡುವ ಅಧಿಕಾರ ಪುತ್ರನಿಗೆ (ಮಗನಿಗೆ) ಮಾತ್ರ ಶೃತಿ-ಸ್ಮೃತಿಗಳು ಅಧಿಕಾರವನ್ನು ನೀಡಿದೆ, ಪ್ರತಿಯೊಂದು ದಾನ ಕೊಡುವಾಗಲೂ, ಶ್ರಾದ್ಧದಲ್ಲಿ ಯವೋದಕ, ತಿಲೋದಕಗಳನ್ನು ಬಿಡುವಾಗಲೂ, ದತ್ತಮಾಡುವಾಗಲೂ, ತಾಂಬೂಲ ದಕ್ಷಿಣೆ ಕೊಡುವಾಗಲೂ 'ತುಳಸಿದಳ' ವನ್ನು ಸೇರಿಸಿಕೊಂಡೇ ಕೊಡಬೇಕು. ಪರಮಾತ್ಮನಿಗೆ ಅರ್ಪಿಸಿರುವ ತುಳಸಿಯ ವಾಸನೆಯಿಂದ ಮಾತ್ರವೇ ಪಿತೃಗಳು ಸಂತೋಷವನ್ನು ಹೊಂದುತ್ತಾರೆ. ಚಕ್ರಪಾಣಿಯಾದ ಮಹಾವಿಷ್ಣುವಿನ ಲೋಕವನ್ನು ಮುಕ್ತಿ ಮಾರ್ಗವನ್ನು ಹೋಗಿ ಸೇರುತ್ತಾರೆ. ಶ್ರಾದ್ಧಕಾಲದಲ್ಲಿ ಕರ್ತೃವು ತುಳಸಿ ಯನ್ನು ಕೊಟ್ಟು, ಅದನ್ನು ತಲೆಯಲ್ಲಿ ಧರಿಸುವುದರಿಂದ ಕರ್ತೃ, ಕರ್ತೃವಿನ ತಂದೆ ಅಥವಾ ತಾಯಿ ಭೋಜನ ಮಾಡಿದವರೂ ಮೂವರೂ ಮುಂದೆ ವಿಷ್ಣುಲೋಕದಲ್ಲಿ ಪ್ರಕಾಶಿತರಾಗುತ್ತಾರೆ. ಶ್ರಾದ್ಧ ಕರ್ಮದಲ್ಲಿ ಬ್ರಾಹ್ಮಣರಿಗೆ ಯಾವನು ಉತ್ತಮವಾದ ಹೊಸ ವಸ್ತ್ರವನ್ನು ಕೊಡುತ್ತಾನೆಯೋ ಅವನು ನಿಶ್ಚಯವಾಗಿಯೂ ದೀರ್ಘಕಾಲದ ಆಯುಷ್ಯವನ್ನೂ, ಸಂಪತ್ತನ್ನೂ, ತನ್ನ ಇಷ್ಟವಾದ ಧನಕನಕಾದಿ ಸಕಲ ಐಶ್ವರ್ಯಗಳನ್ನೂ ತೇಜಸ್ಸಿನಿಂದ ಕೂಡಿದ ಒಳ್ಳೆಯ ರೂಪವನ್ನು ಹೊಂದುತ್ತಾನೆ. ಧರ್ಮವನ್ನರಿತವನು ಎಲ್ಲ ವಿಪ್ರರನ್ನು ಶುದ್ಧಿಗೊಳಿಸುವ ಯಜ್ಞೋಪವೀತವನ್ನು ಶ್ರಾದ್ಧಕಾಲದಲ್ಲಿ ಕೊಡಬೇಕು. ಅದರಿಂದ ಸರ್ವವ್ಯಾಪಿಯಾದ ಪರಬ್ರಹ್ಮನಾದ ಶ್ರೀ ಹರಿಯನ್ನೇ ಅಂದರೆ ವಿಶ್ವದಲ್ಲಿರುವ ಎಲ್ಲ ವಸ್ತುಗಳನ್ನೂ ದಾನ ಮಾಡಿದ ಶ್ರೇಷ್ಠ ಫಲ ಉಂಟಾಗುತ್ತದೆ. ಈ ಮೇಲಿನ ಎಲ್ಲ ವಸ್ತುಗಳೂ ಗರುಡ ಪುರಾಣ, ಪದ್ಮ ಪುರಾಣ, ಮಹಾಭಾರತ - ರಾಮಾಯಣ, ನಾರದೀಯ ಪುರಾಣದಲ್ಲಿ ಉಲ್ಲೇಖಿತವಾಗಿದೆ.

ಪಿಂಡ ವಿಸರ್ಜನೆ ಮಾಡುವ ಸ್ಥಳ ಶ್ರಾದ್ಧದ ವಿಸರ್ಜಿತ ಪಿಂಡವನ್ನು ನೆಲದಲ್ಲಿ ಹೂಳಬಹುದು. ನದಿತೀರದಲ್ಲಿ ಮಾಡಿದಾಗ ಹರಿಯುವ ಪ್ರವಾಹದಲ್ಲಿ ಬಿಡಬಹುದು. ಗೋವುಗಳಿಗೆ ಕೊಡಬಹುದು. ಬ್ರಾಹ್ಮಣರ ಎಲೆಗೆ ಬಡಿಸಿದ ಅನ್ನವನ್ನು ನೆಲದಲ್ಲಿಯೇ ಹೂಳಬೇಕು. ಹಸುಗಳಿಗೆ ಕೊಡಬಾರದು. ನದಿಯಲ್ಲಿ ಹಾಕಬಾರದು. ಪಿಂಡದೊಂದಿಗೆ ಬೆರೆಸಬಾರದು. ಪಿಂಡದ ಜೊತೆಯಲ್ಲಿ ಭೂ ಸ್ಥಾಪನೆ ಮಾಡಬಾರದು.


ಈ ಪಕ್ಷದಲ್ಲಿ ಪಿತೃಗಳಿಗೆ ಯಾವ ವಿಧಾನವನ್ನು ಆಚರಿಸಬೇಕೆಂಬುದು ವರ್ಣಕ್ರಮಗಳನ್ನು ಆಧರಿಸಿ ಸ್ವಲ್ಪ ವಿಭಿನ್ನವಾಗಿದೆ. ಇಲ್ಲಿ ಪದ್ಧತಿಗಳ ಭೇದಗಳು ಬಹಳವಾಗಿ ಕಂಡುಬರುವುದು. ಆದರೆ 'ಶಾಸ್ತ್ರಾತ್ ರೂಢಿಃ ಗರೀಯಸೀ' ಎಂಬ ಶಾಸ್ತ್ರವಾಕ್ಯದಂತೆ ಹಿಂದಿನಿಂದ ಆಚರಣೆ ಮಾಡಿಕೊಂಡು ಬಂದದನ್ನು ಬಿಡಬಾರದು. ವೇದಾಧಿಕಾರ ಇಲ್ಲದವರು ಪಿತೃಗಳಿಗೆ ಪ್ರಿಯವಾದ ಭಕ್ಷ್ಯಗಳನ್ನು ತಯಾರಿಸಿ ಮನೆಯ ದೇವರ ಮುಂದೆ ಬಾಳೆ ಎಲೆಗಳನ್ನು ಹರಡಿ ಅದರಲ್ಲಿ ಆ ಭಕ್ಷ್ಯಭೋಜ್ಯಗಳನ್ನು ಸ್ವೀಕರಿಸಿ ತಮ್ಮನ್ನು ಹರಸಬೇಕೆಂದು ಪ್ರಾರ್ಥಿಸಬೇಕು. ಯದ್ಭಾವಂ ತದ್ಭಾವಂ ತದ್ಭವತಿ ಎಂಬಂತೆ ಇದನ್ನೇ ಹಿರಿಯರಿಗೆ ಎಡೆ ನೀಡುವುದು ಎನ್ನುತ್ತಾರೆ. ಇದರಿಂದ ಪಿತೃಗಳು ತೃಪ್ತರಾಗುತ್ತಾರೆ. ತರ್ಪಣಗಳನ್ನು ಕೊಡುವಾಗ ಯಾರ್ಯಾರಿಗೆ ಮತ್ತು ಯಾರಿಗೆ ಮೊದಲು ತರ್ಪಣ ಕೊಡಬೇಕು ಇತ್ಯಾದಿಗಳ ಬಗ್ಗೆ ಶಾಸ್ತ್ರಗಳಲ್ಲಿ ಹೀಗೆ ತಿಳಿಸಲಾಗಿದೆ.

ಕುಟುಂಬದಲ್ಲಿ ಮೃತಪಟ್ಟವರಲ್ಲಿ ಕ್ರಮವಾಗಿ ಮೊದಲು ತಂದೆ, ತಾಯಿ , ಹೆಂಡತಿ , ಅತ್ತೆ, ಮಾವ, ಮಗ, ಸಹೋದರರು, ದೊಡ್ಡಪ್ಪ, ಚಿಕ್ಕಪ್ಪ ಹಾಗೂ ಅವರ ಹೆಂಡತಿ, ತಾಯಿಯ ತಮ್ಮ ಅಥವಾ ಅಣ್ಣ. ಅವರ ಹೆಂಡತಿಯರು ಮಗಳು ಅಕ್ಕ, ತಂಗಿ ಹಾಗೂ ಅವರ ಮಕ್ಕಳಿಗೆ, ಭಾವ, ಮೈದುನ ಮುಂತಾದವರು ಹಾಗೂ ವಿಶೇಷವಾಗಿ ಗುರುಗಳು ಕುಲಪುರೋಹಿತರು ಸೇರಿದಂತೆ ಯಾರು ನಮಗೆ ತಿಳಿದಂತೆ ಮೃತರಾಗಿದ್ದಾರೋ ಅವನಿಗೆ ಹೀಗೆ ಸರ್ವರಿಗೂ ಕ್ರಮವಾಗಿ ತರ್ಪಣಗಳನ್ನು ಕೊಡಬೇಕು. ಇನ್ನೂ ಅನಾರೋಗ್ಯ ವೃದ್ಧಾಪ್ಯ ಇತ್ಯಾದಿ ಕಾರಣಗಳಿಂದಾಗಿ ಇಷ್ಟೆಲ್ಲ ವಿಸ್ತಾರವಾಗಿ ತರ್ಪಣಗಳನ್ನು ಮಾಡಲು ಅಶಕ್ತರಾದವರು ಸಂಕ್ಷಿಪ್ತವಾಗಿಯೂ ಆಚರಿಸಬಹುದು.

ಈ ತರ್ಪಣಾದಿಗಳನ್ನು ಆಚರಿಸುವಾಗ ಶುದ್ಧತೆಗೆ ಪ್ರಾಮುಖ್ಯತೆ ನೀಡಬೇಕು. ಈ ಸಂದರ್ಭದಲ್ಲಿ ದರ್ಭೆಗೆ ಅತ್ಯಂತ ಅವಶ್ಯಕ ಸ್ಥಾನವಿದೆ. ದರ್ಭೆಯಿಂದ ತಯಾರಿಸಿದ ಪವಿತ್ರವನ್ನು ಉಂಗುರದ ಬೆರಳಿಗೆ ಧರಿಸಿಯೇ ತರ್ಪಣಾದಿಗಳನ್ನು ಕೊಡಬೇಕು. ಪಿಂಡ ಹಾಕಿ ಕರ್ಮಾಂಗ ಮಾಡುವವರು ಶುದ್ಧವಾದ ಸ್ಥಳ, ವಸ್ತ್ರ, ನೀರು, ಎಳ್ಳು ಹಾಗೂ ಅಕ್ಕಿಯನ್ನು ಬಳಸಬೇಕು. ಪರಿಶುದ್ಧ ಮನಸ್ಸಿನಿಂದ ತರ್ಪಣಗಳನ್ನು ನೀಡಬೇಕು. ಮನೆಯಲ್ಲಿ ಹಿರಿಯರ ದಿನದ ಆಚರಣೆಯ ಸಂದರ್ಭದಲ್ಲಿ ಅವಾಚ್ಯ ಶಬ್ದಗಳ ಬಳಕೆ, ಕೂಗುವುದು, ಕಿರುಚುವುದು ಮಾಡಬಾರದು. ಈ ಸಂದರ್ಭದಲ್ಲಿ ಘಂಟಾನಾದಕ್ಕೆ ನಿಷೇಧವಿದೆ.

ಈ ಪಕ್ಷದಲ್ಲಿ ಪಿತೃಗಳ ದಾನಗಳಿಗೆ ಮಹತ್ವವಿದೆ. ನಾವು ಕೊಡುವ ದಾನವು, ಅದನ್ನು ಪಡೆದವರು ಸಂತೋಷವಾಗಿ ಬಳಸುವಂತಿರಬೇಕು ಎಂಬುದು ಗಮನಿಸಬೇಕಾದ ಮುಖ್ಯ ಅಂಶ. ಅಶಕ್ತರು ತಮ್ಮ ಸಾಮಾರ್ಥ್ಯಕ್ಕೆ ಅನುಗುಣವಾಗಿ ದಕ್ಷಿಣೆ ಕೊಟ್ಟು ನಮಸ್ಕರಿಸಿದರೂ ಅದು ಶುಭಪ್ರದ.

# ಬ್ರಹ್ಮೋತ್ಸವದಿ ಕಂಡ ಹರಿದಾಸರು ಶ್ರೀನಿವಾಸ



– ಡಾ ।। ರಾಮಚಂದ್ರ ದಾಸ್ ಸಿ.ಜೆ.
94833 84584

ಶ್ರೀನಿವಾಸನ ಬ್ರಹ್ಮೋತ್ಸವ ಎಂದೊಡನೆ ಎಂತಹ ವ್ಯಕ್ತಿಗಾದರೂ ಮೈಮನ ರೋಮಾಂಚನಗೊಳ್ಳುತ್ತದೆ. ಇದಕ್ಕೆ ಪೂರಕವಾಗಿ ತಿರುಮಲೆಯ ಪ್ರಕೃತಿ ಸೌಂದರ್ಯ ಭಗವಂತನ ಸೃಷ್ಟಿಯ ಅದ್ಭುತ




ಕಲಾಕೌಶಲ್ಯ ಮನಸೂರೆ ಗೊಳ್ಳುತ್ತದೆ. ಇದರ ಪಾವಿತ್ರ್ಯತೆಯನ್ನು ಅರಿತ ದೇವತೆಗಳು, ಅಲ್ಲಿ ಮರ, ಗಿಡ, ಬಳ್ಳಿ ಪಕ್ಷಿ ಇತ್ಯಾದಿಗಳ ರೂಪದಲ್ಲಿದ್ದು ಜಗದೊಡೆಯನಾದ ಶ್ರೀನಿ ವಾಸನ ಸೇವೆ ಮಾಡುತ್ತಿದ್ದಾರೆಂದು ಪುರಾಣಾಂತರಗಳಲ್ಲಿ ಹೇಳಲಾಗಿದೆ. ದೇವತೆಗಳು,ಋಷಿಮುನಿಗಳು ಗಂಧರ್ವರು ಮುಂತಾದವರು ಹರಿದಾಸರಾಗಿ ಅವತರಿಸಿದ್ದಾಗ ಶ್ರೀನಿವಾಸನ ಸನ್ನಿಧಿಗೆ ಬಾರದೆ ಇರುವವರು ಬಹಳ ವಿರಳವಾಗಿದ್ದು, ಬಂದ ಹರಿದಾಸರೊಡನೆ ಶ್ರೀನಿವಾಸನು ತೋರಿದ ಲೀಲಾ ವಿನೋದಗಳು ಬಹಳ ಅಪರೂಪವಾದದ್ದಾಗಿವೆ.ಈ ಪರ್ವತಕ್ಕೆ ಕೃತಯುಗದಲ್ಲಿ ವೃಷಭಾಚಲವೆಂತಲೂ, ತ್ರೇತಾಯುಗದಲ್ಲಿ, ಅಂಜನಾ ಚಲವೆಂತಲೂ, ದ್ವಾಪರಯುಗದಲ್ಲಿ ಶೇಷಾಚಲವೆಂತಲೂ,ಪ್ರಸ್ತುತ ಕಲಿಯುಗದಲ್ಲಿ ವೆಂಕಟಾಚಲವೆಂತಲೂ ಹೆಸರಿದೆ ಎಂದು ಭವಿಷ್ಯೋತ್ತರ ಪುರಾಣದಲ್ಲಿ ವರ್ಣಿತವಾಗಿದೆ.

ತಿರುಪತಿಯ ಉತ್ಸವಗಳಲ್ಲಿ ಬ್ರಹ್ಮೋತ್ಸವವು ವಿಶಿಷ್ಟವಾಗಿದೆ. ಇದನ್ನು ಪ್ರಾರಂಭಿಸಿದವರು ಚತುರ್ಮುಖ ಬ್ರಹ್ಮದೇವರು, ಶ್ರೀನಿವಾಸನ ವಿವಾಹವಾದ ಮೇಲೆ ಬೆಟ್ಟವನ್ನೇರದೆ ಶ್ರೀನಿವಾಸ ಮತ್ತು ಪದ್ಮಾವತಿಯರು ಆರು ತಿಂಗಳು ಅಗಸ್ತ್ಯಾಶ್ರಮದಲ್ಲಿ ವಾಸಿಸಿದರು.ನಂತರ ಬೆಟ್ಟವನ್ನೇರಿದ ನೂತನ ದಂಪತಿಗಳನ್ನು ಬ್ರಹ್ಮದೇವರು ಎದುರುಗೊಂಡು ಸ್ವಾಗತಿಸಿ,ವಿಶ್ವಕರ್ಮ ನಿರ್ಮಿತವಾದ ರಥದಲ್ಲಿ ದಂಪತಿಗಳನ್ನು ಕೂಡಿಸಿ ಮೆರವಣಿಗೆ ಮಾಡಿಸಿದರು. ಶ್ರೀನಿವಾಸನ ಆಜ್ಞೆಯಂತೆ, ಧ್ವಜಾರೋಹಣದಿಂದಾರಂಭಿಸಿ ವಿವಿಧ ವಾಹನಗಳ ಉತ್ಸವ ಸಹಿತವಾದ ರಥೋತ್ಸವವನ್ನು ಸೃಷ್ಟಿಕರ್ತರಾದ ಚತುರ್ಮುಖ ಬ್ರಹ್ಮದೇವರು ಮಾಡಿದ್ದರಿಂದ ಈ ಉತ್ಸವವು "ಬ್ರಹ್ಮೋತ್ಸವ" ಎಂದೆ ಪ್ರಖ್ಯಾತಿಯಾಗಿದ್ದು, ಅಂದಿನಿಂದ ಅನೂಚಾನವಾಗಿ ನಡೆದು ಬರುತ್ತಿದೆ. ಕನ್ಯಾಮಾಸದ ಶ್ರವಣ ನಕ್ಷತ್ರವಿದ್ದ ದಿವಸ ಅಂದರೆ, ಪ್ರತಿ ಸಂವತ್ಸರ ಚಾಂದ್ರಮಾನ ರೀತ್ಯ, ವಿಜಯದಶಮಿಯಂದು ಶ್ರವಣ ನಕ್ಷತ್ರಕ್ಕೆ ಸರಿಹೊಂದುತ್ತದೆ. ಅಧಿಕಮಾಸ ಬಂದಾಗ ಭಾದ್ರಪದ ಮಾಸದಲ್ಲಿ ಬರುತ್ತದೆ.ಒಟ್ಟಾರೆ ಹೇಳುವುದಾದರೆ ಕನ್ಯಾಮಾಸದ ಶ್ರವಣ ನಕ್ಷತ್ರದಂದು ಮುಗಿಯುವಂತೆ ಹತ್ತು ದಿನ ಮೊದಲೇ ಈ ಉತ್ಸವವು ಪ್ರಾರಂಭವಾಗುತ್ತದೆ. ಅತ್ಯಂತ ಪ್ರಾಚೀನವಾದ ಈ ಉತ್ಸವದಲ್ಲಿ ಜಗದೊಡೆಯನಾದ ಶ್ರೀನಿವಾಸನು ದಿನಕ್ಕೊಂದು ವೈಭವವನ್ನು ತೋರಿಸುತ್ತಾ ಎರಡು ಹೊತ್ತು ವಿವಿಧ ವಾಹನಗಳಲ್ಲಿ ಆಸೀನನಾಗಿ ವೈಭವದಿಂದ ಬರುವುದನ್ನು ನೋಡಲು ಎರಡು ಕಣ್ಣುಗಳು ಸಾಲದು.

ಬ್ರಹ್ಮ ದೇವರ ಮುಂದಾಳತ್ವದಲ್ಲಿ ನಡೆಯುವ ಈ ಉತ್ಸವದಲ್ಲಿ ಅವರು ಕೂಡಾ ಚಿಕ್ಕಸಾಲಂಕೃತ ರಥದಲ್ಲಿ ಆಸೀನರಾಗಿ ಮುಂದಾಳತ್ವ ವಹಿಸುತ್ತಿರುವುದನ್ನು (ಸಾಂಕೇತಿಕವಾಗಿ) ಇಂದಿಗೂ ಕಾಣಬಹುದು. ಇಂತಹ ಸರ್ವೋತ್ತಮನಾದ ಶ್ರೀನಿವಾಸನು ಹರಿದಾಸರೊಡನೆ ವಿವಿಧ ರೀತಿಯ ಲೀಲಾವಿನೋದಗಳನ್ನು ತೋರಿಸುತ್ತಿದ್ದುದು ಜಗದ್ವಿಖ್ಯಾತವಾಗಿದೆ.

ಪುರಂದರದಾಸರು, ವಿಜಯದಾಸರು, ಕನಕದಾಸರು, ಗೋಪಾಲದಾಸರು ಜಗನ್ನಾಥದಾಸರು ಮುಂತಾದವರೊಡನೆ ವಿವಿಧ ರೀತಿಯಲ್ಲಿ ಆಟವಾಡಿ ವಿಹರಿಸಿದ್ದಾನೆ.

ಪುರಂದರದಾಸರು ಆದಷ್ಟು ಅವಕಾಶ ಕಲ್ಪಿಸಿಕೊಂಡು ಪ್ರತಿ ಬ್ರಹ್ಮೋತ್ಸವಕ್ಕೂ ಬರುತ್ತಿದ್ದುದು ವಿಶೇಷ.ದಾಸರ ಬಿಡಾರದಲ್ಲಿ ಬ್ರಹ್ಮೋತ್ಸವದ ಸಮಯದಲ್ಲಿಯೂ ನಿತ್ಯ ಸಂತರ್ಪಣೆ ತಪ್ಪುತ್ತಿರಲಿಲ್ಲ. ಅದರ ಪಾರುಪತ್ಯವೆಲ್ಲ ದಾಸರ ಬಲಗೈ ಬಂಟನಾದ ಅಪ್ಪಣ್ಣ ಭಾಗವತನದೇ ಆಗಿರುತ್ತಿದ್ದು, ಮಾತು ಮಾತಿಗೆ ಅವನನ್ನೇ ಕರೆಯುವ ವಾಡಿಕೆಯಾಗಿತ್ತು. ಒಂದು ದಿನ ಸಂತರ್ಪಣೆಗೆ ಬಡಿಸಲು ತುಪ್ಪವಿರಲಿಲ್ಲ.ದಾಸರಿಗೆ ಚಿಂತೆಯಾಗಿತ್ತು. ಭಕುತರ ಮನೋಭೀಷ್ಟ ಪ್ರದಾತನಾದ ಶ್ರೀನಿವಾಸನೇ ಅಪ್ಪಣ ಭಾಗವತನ ವೇಷದಿಂದ ತುಪ್ಪವನ್ನು ತಂದು ಪಂಕ್ತಿಗೆಲ್ಲಾ ಸಮೃದ್ಧಿಯಾಗಿ ಬಡಿಸಿದನು. ಆಗ ದಾಸರು, ತುಪ್ಪವನ್ನು ಎಲ್ಲಿಂದ ತಂದೆ, ಅದಕ್ಕೆ ರೋಕ್ಕವನ್ನು ಕೊಟ್ಟವರ‍್ಯಾರೋ? ಎಂದು ಕೇಳಿದಕ್ಕೆ ಅಪ್ಪಣ್ಣ ಭಾಗವತ ರೂಪೀ ಶ್ರೀನಿವಾಸನು ಉಗ್ರಾಣದಿಂದ ತಂದೆ, ರೊಕ್ಕವನ್ನು ಶ್ರೀನಿವಾಸನೇ ಕೊಟ್ಟ ಎಂದು ಹೇಳಿ ಗಡಿ ಬಿಡಿಯಿಂದ ತುಪ್ಪದ ಬಿಂದಿಗೆಯನ್ನು ಉಗ್ರಾಣದಲ್ಲಿಟ್ಟು ಅದೃಶ್ಯನಾದನು ಭಜನೆ ಪೂರೈಸಿಕೊಂಡು ದಾಸರ ಎದುರಿಗೆ ಬಂದ ಅಪ್ಪಣ್ಣನನ್ನು ಕಂಡು- "ಈಗ ತುಪ್ಪ ಬಡಿಸಿ ಅಷ್ಟು ಬೇಗ ಭಜನೆಗೆ ಅದ್ಹೇಗೆ ಹೋದೆಯೋ? ಎಂದಾಗ ನನಗೆ ತುಪ್ಪದ ವಿಷಯವೇ ಗೊತ್ತಿಲ್ಲ, ನಾನು ಭಜನೆ ಮಾಡುತ್ತಿದ್ದೆ, ಎಂದನು, ಹೋಗಲಿ ರೊಕ್ಕವನ್ನಾದರೂ ಕೊಟ್ಟು ಬಾ ಎನ್ನಲು "ನಾನ್ಯಾರಿಗೆ ರೊಕ್ಕವನ್ನು ಕೊಡಲಿ, ನಾನು ತುಪ್ಪವನ್ನು ತಂದವನೂ ಅಲ್ಲ, ಬಡಿಸಿದವನೂ ಅಲ್ಲ ಎಂದು ಬಿಟ್ಟನು. ಆಗ ನಾರದಾಂಶ ಸಂಭೂತರಾದ ದಾಸರು ತಮ್ಮ ದಿವ್ಯ ಜ್ಞಾನದಿಂದ ನೋಡಿದಾಗ ಇದು ಶ್ರೀನಿವಾಸನ ರೀತಿಯೆಂದರಿತು ತಕ್ಷಣ ಭಕ್ತಿ ಭಾವದಿಂದ "ಎಂದಪ್ಪಿಕೊಂಬೆ ರಂಗಯ್ಯನ .. ಅಪ್ಪಣ್ಣ ಭಾಗವತನ ರೂಪನು ತಾನಾಗಿ ತುಪ್ಪದ ಬಿಂದಿಗೆ ತಂದಪ್ಪ ಮುಕುಂದನ." ಎಂದು ಕೊಂಡಾಡಿದರು. ದಾಸರಿಗೆ ಮೂಲ ಮೂರುತಿಯ ದರುಶನಕ್ಕೆ ಯಾವ ಅಡ್ಡಿಯೂ ಇಲ್ಲದೇ ಇದ್ದರೂ ಜನಸಂದಣೆ ಬಹಳವಿರುವಾಗ ವಿಮಾನ ಶ್ರೀನಿವಾಸನ" ದರುಶನ ಮಾಡಿ ಧನ್ಯರಾಗಿ ಬಿಡುತ್ತಿದ್ದರೂ.



### "ವಿಮಾನ ಶ್ರೀನಿವಾಸ"

ಆನಂದ ನಿಲಯದ ಗೋಪುರ (ವಿಮಾನ) ಪ್ರದಕ್ಷಿಣೆ ಮಾಡುವಲ್ಲಿ ಅದರ ಉತ್ತರ ಭಾಗದಲ್ಲಿ "ವಿಮಾನ ಶ್ರೀನಿವಾಸನ ದರುಶನ ವಾಗುತ್ತದೆ.ಈ ಆನಂದ ನಿಲಯವನ್ನು, ಗೋಪುರವನ್ನೂ ತೊಂಡಮಾನನು ಕಟ್ಟಿಸಿದನು.ಬ್ರಹ್ಮದೇವರ ಪ್ರಾರ್ಥನೆಯಂತೆ ಶ್ರೀನಿವಾಸನು ವಿಮಾನದಲ್ಲಿ ಒಂದು ಆನಂದ ನಿಲಯದ ಮೇಲೆ ಆವಿರ್ಭವಿತನಾದನು.ನಂತರ ಶ್ರೀನಿವಾಸನ ಆದೇಶದಂತೆ ಗರುಡನು ಆ ವಿಮಾನವನ್ನೂ ಮತ್ತು ಶ್ರೀನಿವಾಸನನ್ನೂ ಪ್ರತಿಷ್ಠಾಪಿಸಿದನೆಂಬ ಪ್ರತೀತಿ ಮತ್ತು ಆಪ್ತ ವಚನಗಳಿವೆ.ಗರ್ಭಗುಡಿಯಲ್ಲಿಯ ಶ್ರೀನಿವಾಸನ ಮೂರ್ತಿಯಷ್ಟೇ ಮಹಿಮೋಪೇತವಾದದು ಈ ವಿಮಾನ ಶ್ರೀನಿವಾಸನ ಮೂರ್ತಿ.

ಪುರಂದರದಾಸರು ಹಾಡಿದ ಹಾಡುಗಳನ್ನು ಅವರ ಕೊನೆಯ ಮಗ ಮಧ್ವಪತಿ (ಭೃಗುಋಷಿಗಳಂಶಜರಾದ ಇವರೇ ಭಾವೀ ವಿಜಯದಾಸರು) ಯು ಬರೆದಿಡುತ್ತಿದ್ದನು. ದಾಸರು ತಿರುಪತಿಗೆ ಬಂದಾಗ ಸ್ವಾಮಿ ಪುಷ್ಕರಣೆಯ ಆಗ್ನೇಯ ಭಾಗದಲ್ಲಿಯೇ ಕುಳಿತು ತಮ್ಮ ಆನ್ಹಿಕ ದೇವರ ಪೂಜಾದಿಗಳನ್ನು ಮಾಡುತ್ತಿದ್ದರು. ಆಗ ಶ್ರೀ ಕೃಷ್ಣದೇವರಾಯನು ಅಲ್ಲಿ ಒಂದು ಶಿಲಾ ಮಂಟಪವನ್ನು ಕಟ್ಟಿಸಿಕೊಟ್ಟನು. ಅದು ಅದ್ಯಾಪೀ"ದಾಸರ ಮಂಟಪ" ವೆಂದೇ ಹೆಸರಾಗಿದೆ. ದಾಸರು ಪ್ರತಿಬಾರಿಯೂ ತಿರುಪತಿಗೆ ಬಂದಾಗ ಒಂದಿಲ್ಲೊಂದು ರೀತಿ ದಾಸರ ಜೊತೆಗೆ ಸಖ, ಸೇವಕ ಇತ್ಯಾದಿಗಳ ರೂಪದಲ್ಲಿ ಲೀಲಾ ವಿನೋದಗಳನ್ನು ತೋರಿಸಿದ್ದಾನೆ.

ಪುರಂದರದಾಸರನ್ನೂ ಮೀರಿಸುವಂತೆ ಒಂದು ಹೆಜ್ಜೆ ಮುಂದೆ ಹೋಗಿ, ಶ್ರೀನಿವಾಸನೊಡನೆ ಹುಸಿ ಮುನಿಸಿನಿಂದ ನಿಂದಾಸ್ತುತಿಗಳನ್ನು ಮಾಡಿದವರು ವಿಜಯದಾಸರು ಇವರಿಗೆ (ಭೃಗುಋಷಿಗಳು)



ಭಗವಂತನಲ್ಲಿ ವಿಶೇಷ ಸಲುಗೆ, ಕಾರ್ಯ, ಕಾರಣ, ನಿಮಿತ್ತವಾದ ಶ್ರೀ ಹರಿಯ ಲೀಲೆಯಲ್ಲಿ ಅನೇಕ ತತ್ವಗಳು ಹೊರಬರುತ್ತವೆ. ಶ್ರೀಮನ್ನಾರಾಯಣನು ಭೂಲೋಕಕ್ಕೆ ಬರಲು ಇವರನ್ನು ನಿಮಿತ್ತರನ್ನಾಗಿಸಿ,ಜಗತ್ತಿನಲ್ಲಿ, ಮತ್ತೊಮ್ಮೆ ಹರಿಸರ್ವೋತ್ತ ಮತ್ವದ ಪ್ರತಿಪಾದನೆಯ ಜೊತೆಗೆ, ರಾಮಾಯಣದಲ್ಲಿ ವೇದವತಿಗೆ, ಕೃಷ್ಣಾವತಾರದಲ್ಲಿ ಯಶೋದೆಗೆ ಇತ್ತ ವಚನ ಪಾಲನೆಗಾಗಿ ಲಕ್ಷ್ಮಿನಾರಾ ಯಣರು ಭೂಲೋಕಕ್ಕೆ ಬಂದು ಶ್ರೀನಿವಾಸನಾಗಿ (ಶ್ರೀ = ಲಕ್ಷ್ಮೀ, ನಿವಾಸ=ವಕ್ಷಃ ಸ್ಥಳದಲ್ಲಿ ಹೊಂದಿದ್ದು) ವೆಂಕಟಾಚಲದಲ್ಲಿ, ಲಕ್ಷ್ಮಿಯು ಕರವೀರಪುರ (ಕೊಲ್ಹಾಪುರ) ದಲ್ಲಿ ನೆಲೆಸಿದರು.

ವಿಜಯದಾಸರು ಬ್ರಹ್ಮೋತ್ಸವದ ನಿಮಿತ್ತ ತಿರುಪತಿಗೆ ಬಂದು ದಾಸರ ಮಂಟಪದಲ್ಲಿ ಇಳಿದರು. ಶ್ರೀನಿವಾಸನ ದರುಶನವಾಗದ ಹೊರತು ಭೋಜನ ಮಾಡುತ್ತಿರಲಿಲ್ಲ.ಜನ ಜಂಗುಳಿಯ ಕಾರಣದಿಂದಾಗಿ (ನವಮಿ) ಅಂದು ಶ್ರೀನಿವಾಸನ ದರುಶನವಾಗದಿದ್ದ ಕಾರಣ ಮುನಿಸಿನಿಂದ ನಿಂದಾಸ್ತುತಿಗಳನ್ನು (ಅನೇಕ ತತ್ವಪೂರಿತ ಹಾಗೂ ಶ್ರೀನಿವಾಸನನ್ನು ಕೊಂಡಾಡುವ) ರಚಿಸಿ ಮೂದಲಿಸುತ್ತ

''ನಿನ್ನ ದರುಶನಕೆ ಬಂದವ ನಲ್ಲವೋ। ದೇವಾ।
-----------------------------
ನಾನಿಂತು ಬಂದದ್ದು ನಿನಗೆ ತಿಳಿಯದೇ ಸ್ವಾಮಿ

ಎಂದು ಮುಂತಾಗಿ ಸ್ತುತಿಸಿದರು. ನಂತರ ಮಂಗಳ ಹಾಡಿ,

ಜಯಮಂಗಳಂ ನಿತ್ಯ ಶುಭ ಮಂಗಳಂ
.......................................
ದೊಡ್ಡವರ ಮಾಳ್ಪ ಶಿರಿ ವಿಜಯ ವಿಠಲಗೆ॥

ಎಂದು ಹಾಡಿದರು.

ದಾಸರು ಈ ಕೃತಿಯಲ್ಲಿ ಶಾಸ್ತ್ರದ ಅನೇಕ ತತ್ವಗಳನ್ನಡಗಿಸಿದ್ದಾರೆ. ಯಸ್ಯಾನುಗ್ರಹ ಮಿಚ್ಛಾಮಿ ತಸ್ಯ ವಿತ್ತಂ ಹರಾಮ್ಯಹಂ '' ಅಂದರೆ ಯಾರಿಗೆ ಶ್ರೀನಿವಾಸನ ಅನುಗ್ರಹವಾಗಬೇಕೋ,ಅಂತಹವರಲ್ಲಿರುವ ಆಸುರೀ ಸಂಪತ್ತನ್ನು ಮೊದಲು ಅಪಹರಿಸುತ್ತಾನೆ. (ಉದಾ: ಬಲಿಚಕ್ರವರ್ತಿ) ನಂತರ ಅವರಿಗೆ ಅನುಗ್ರಹಿಸಿ ಜಗನ್ಮಾನ್ಯರನ್ನಾಗಿಸುತ್ತಾನೆ. ಉದಾ - ಪುರಂದರದಾಸರು, ಕನಕದಾಸರು ಮುಂತಾದವರು, ಅಂದು ದಾಸರಿಗೆ ಉಪವಾಸವೇ (ಉಪ = ಹತ್ತಿರ, ವಾಸ = ಇರುವುದು. ಶ್ರೀನಿವಾಸನಿಗೆ ಹತ್ತಿರವಿರುವುದು ಏಕಾದಶಿಯ ಅರ್ಥವೂ ಇದೆ) ಗತಿಯಾಯಿತು.

ಮರುದಿನ ವಿಜಯದಶಮಿ, ಶ್ರೀನಿವಾಸನು ಬ್ರಹ್ಮರಥಾರೂಢನಾಗಿ ಬಹು ವೈಭವದಿಂದ ಸಾಗುತ್ತಿರಲು, ವಿಜಯದಾಸರು ಒಂದು ಚೀಟಿಯನ್ನು ಶಿಷ್ಯರ ಕೈಗೆ ಕೊಟ್ಟು ರಥದ ಬಳಿ ಹಾಕಿಸಿದ ತಕ್ಷಣ,ರಥ ಏನು ಮಾಡಿದರೂ ಮುಂದೆ ಚಲಿಸಲಿಲ್ಲ, ಎಲ್ಲರಿಗೂ ಚಿಂತೆಯಾಯಿತು. ಮಹಂತನು ಪರಿಪರಿಯಾಗಿ ಪ್ರಯತ್ನಿಸಿದರೂ ಪ್ರಯೋಜನವಾಗದೆ. ತಟಸ್ಥರಾಗುವ ಸಂದರ್ಭ ಒದಗಿತು. ಆಗ ಬಾಲಕನೋರ್ವನ ಮೇಲೆ ಆವೇಶ ಬಂದು ''ನನ್ನ ದಾಸರನ್ನು ಕರೆತಂದರೆ ನಾನು ಬರುವೆ '' ಎಂದು ಶ್ರೀನಿವಾಸನ ಆಜ್ಞೆಯಾಯಿತು.ನಂತರ ಮಹಂತರು ದಾಸರ್ಯಾರೆಂದು ಕಂಡುಹಿಡಿದು, ದೇವಸ್ಥಾನದ ಸಕಲ ಬಿರುದಾವಳಿಗಳಿಂದ ವಿಜಯ ದಾಸರನ್ನು ರಥದ ಬಳಿಗೆ ಕರೆತಂದಾಗ ಅವರು ಮುಸಿ ಮುಸಿ ನಗುತ್ತಾ ನೀನು ಭಕುತರ ಜೊತೆ ಎಂತೆಂಥಾ ವಿನೋದದ ಆಟವಾಡುತ್ತೀಯಾ ಸ್ವಾಮಿ ಎನ್ನುತ್ತಾ...

''ಸಾಗಿ ಬಾರಯ್ಯ ಭವ।ರೋಗದ ವೈದ್ಯನೇ।
ಬಾಗುವೆ ನಿನಗೆ ಚೆನ್ನಾಗಿ ಸ್ತುತಿಸಿ ಇಂದು॥

ಎಂದು ಪ್ರಾರ್ಥಿಸಿದಾಗ ರಥವು ಪ್ರಯಾಸವಿಲ್ಲದೆ ಚಲಿಸಿತು. ಶ್ರೀನಿವಾಸನು ತನ್ನ ದಾಸರನ್ನು ಪರೀಕ್ಷಿಸುವ ನೆಪದಲ್ಲಿ ಅವರನ್ನು ಅನುಗ್ರಹಿಸಿ, ಪುಟಕ್ಕಿಟ್ಟ ಬಂಗಾರದಂತೆ, ಲೋಕಮಾನ್ಯರನ್ನಾಗಿಸುತ್ತಾನೆ. ಈ ವಿಷಯದಲ್ಲಿ ಕನಕದಾಸರನ್ನೂ ಹೊರತಾಗಿಸಿಲ್ಲ.

ಧರ್ಮದೇವತೆಯಾದ ಯಮಾಂಶಸಂಭೂತರು ಕನಕದಾಸರು (ತಿಮ್ಮನಾಯಕ) ಮೊದಲು ಅಧಿಕಾರ , ಸಂಪತ್ತು ಇತ್ಯಾದಿಗಳಲ್ಲಿ ಆಸಕ್ತರಾಗಿದ್ದಾಗ, ಇವರ ಅವತಾರ ಕಾರ್ಯವನ್ನು ನೆನೆಪಿಸಿಕೊಡಲು, ''ಸ್ಮರಿಸಿದಾಕ್ಷಣ ದರ್ಶನ ಕೊಡಬೇಕೆಂಬ ಅವರ ಶರತ್ತಿಗೊಳ್ಳಪಟ್ಟು''ದಾಸತ್ವ ನೀಡಿದವನು ಕೇಶವ ರೂಪಿ ಶ್ರೀನಿವಾಸ, ಕನಕದಾಸರೊಡನೆ ವಿಚಿತ್ರ ವಿನೋದಗಳಿಂದ ಶ್ರೀನಿವಾಸನು ವಿಹರಿಸಿದ್ದಾನೆ.''ಕನಕಾ ನೀನು ನನ್ನ ಮದುವೆಗೆ ಬಾ'' ಎನ್ನಲು, ಸ್ವಾಮಿ ಸೀತಾ ಕಲ್ಯಾಣವೆನ್ನಲು ಇದು ತ್ರೇತಾಯುಗವಲ್ಲ, ರುಕ್ಮಿಣೀ ಕಲ್ಯಾಣವೆನಲು, ಇದು ದ್ವಾಪರಯುಗವಲ್ಲ, ಈಗ ನಿನಗೆ ಹೆಣ್ಣು ಕೊಡುವವರಾರು ಎಂದಾಗ,''ಪದ್ಮಾವತಿ ಕಲ್ಯಾಣ, ತಿರುಪತಿಗೆ ಬಾ ಎಂದು ಆಜ್ಞೆಗೈದನು. ಮಹಂತನಿಗೂ ಸ್ವಪ್ನದಲ್ಲಿ ''ನನ್ನ ಭಕ್ತ ಕನಕದಾಸನು ಬರುವನು, ಅವನನ್ನು ಆದರದಿಂದ ಬರುಮಾಡು''ಎಂದು ಸೂಚಿತವಾಯಿತು. ದೇವಸ್ಥಾನದ ಮರ್ಯಾದೆಗಳಿಂದ ಸಹಿತನಾಗಿ ಕನಕದಾಸರನ್ನೆದುರುಗೊಳ್ಳಲು ಮಹಂತನು ಬೆಟ್ಟದಿಂದ ಇಳಿದು ಬರುತ್ತಿರುವಾಗ ಏಕತಾರೆಯನ್ನು ಮೀಟುತ್ತ ಭಜನೆ ಮಾಡುತ್ತ ಸಾಮಾನ್ಯ ವ್ಯಕ್ತಿಯಂತೆ ಬರುತ್ತಿದ್ದ ವ್ಯಕ್ತಿ ಜ್ಞಾನವಾಗದೇ, ಇವರನ್ನೇ'' ಕನಕದಾಸರು ಎಲ್ಲಿ ಬರುತ್ತಿದ್ದಾರೆ'' ಎಂದು ಕೇಳಿದಾಗ ದಾಸರು ನಗುತ್ತಾ'' ಮುಂದೆ ಬರುವವರಿಗೆ ಹಿಂದೆ, ಹಿಂದೆ ಬರುವರಿಗೆ ಮುಂದೆ, ಎಂದು ಒಗಟಾಗಿ ಹೇಳಿದರು.ಕನಕದಾಸರ ಒಂದೊಂದು ಮಾತು ಬಹಳ ಗೂಡಾರ್ಥಗಳಿಂದ ಕೂಡಿದ್ದು ''ಕನಕನ ಮುಂಡಿಗೆ''ಎಂದೇ ಪ್ರಸಿದ್ಧವಾಗಿವೆ.ಇವನ್ಯಾರೋ ಹುಚ್ಚನಿರಬೇಕೆಂದು ತಿಳಿದ ಮಹಂತನು ನಾಲ್ಕು ಹೆಜ್ಜೆ ಮುಂದೆ ಹೋಗಿ, ಏನೋ ಕಳವಳವಾದಂತಾಗಿ ಪುನಃ ಅವರನ್ನು ನೀವು ಯಾರು? ಎಲ್ಲಿಂದ ಬಂದಿರಿ''ಎಂದು ಪ್ರಶ್ನಿಸಿದ್ದಕ್ಕೆ, ಉತ್ತರವಾಗಿ...

''ಯಾತರವನೆಂದುಸುರಲಿ-ಜಗನ್ನಾಥ ಮಾಡಿದನು ನರಜನ್ಮವ''

ಎಂದು ಹಾಡಿದಾಗ ಇವನ್ಯಾರೋ ಹುಚ್ಚನೆಂದರಿತು ಗಾಳಿ ಗೋಪುರ ಬಳಿ ಸಂಜೆಯವರೆಗೂ ಕಾದರೂ ಕನಕದಾಸರ ಗುರುತು ಹತ್ತಲಿಲ್ಲ.

ಇತ್ತ ಮುಂದೆಯೇ ನಡೆದಿದ್ದ ದಾಸರು ದೇವಾಲಯಕ್ಕೆ ಬಂದರು, ವಿಪರೀತ ಜನ ಸಂದಣೆಯಲ್ಲಿ ದೇವರ ದರ್ಶನವೂ ಆಗಲಿಲ್ಲ,ಇಳಿದುಕೊಳ್ಳುವುದಕ್ಕೆ ಸ್ಥಳವೂ ದೊರೆಯಲಿಲ್ಲ, ನೀನಾರೆಂದು ಗುರ್ತಿಸುವವರೂ ಇಲ್ಲ. ಸಂಜೆಯಾದರೂ ತುತ್ತನ್ನ ದೊರೆಯಲಿಲ್ಲ, ಛಳಿಯಲ್ಲಿ ನಡುಗುತ್ತಾ ಶ್ರೀನಿವಾಸನ ಪರಿಹಾಸ್ಯ ಮಾಡುತ್ತಾ..

ಇದೋ ನಿನ್ನ ಮದುವೆಯ ವೈಭವ... ಆಗಲಿ..ಎಂದು.

ಬಂದೆನಯ್ಯಾ ಗೋವಿಂದ ಶೆಟ್ಟಿ
ಇಂದು ನಿನ್ನ ಮದುವೆಗೆ ಬಾರೆಂದೆನೇ
ಒಡವೆಯ ಗಳಿಸುವ ಲೋಭಿಶೆಟ್ಟಿ....
ಕಜ್ಜಾಯವನ್ನೆಲ್ಲ ಚಪ್ಪನ್ನ ದೇಶಕ್ಕೆ ಮಾರುವ ಶೆಟ್ಟಿ...

ಎಂದು ಮುಂತಾಗಿ ಹಂಗಿಸುತ್ತಾ ನಿಂದಾಸ್ತುತಿಯನ್ನು ಮಾಡಿದರು.

ಸರಿ ರಾತ್ರಿಯಾದರೂ ಹೊಟ್ಟೆಗೆ ಅನ್ನವಿಲ್ಲ, ಹೊದೆಯಲು ಬಟ್ಟೆಯಿಲ್ಲದೆ ನಡುಗುತ್ತಾ ಕುಳಿತಿರುವಾಗ ಭಕ್ತ ಪರಧೀನನಾದ ಶ್ರೀನಿವಾಸನು ಪರಿಚಾರಕನ ವೇಷತಾಳಿ,ಬಿಸಿಯಾದ ಓಗರಗಳನ್ನು, ಕುಡಿಯಲು ಸುಗಂಧ ಭರಿತ ಕೇಸರಿಹಾಲನ್ನಿತ್ತು,ಹೊದೆಯಲು ಜರತಾರಿಯ ಧೋತ್ರವನ್ನಿತ್ತನು.'' ನೀನ್ಯಾರೆಂದು ದಾಸರು ಕೇಳುತ್ತಲೇ ''ನಾನೇ.''ಎಂದು ಅದೃಶ್ಯನಾದನು ಆಯಾಸ, ಬಳಲಿಕೆಯಿಂದಿದ್ದ ದಾಸರಿಗೆ ಬೇಗನೇ ನಿದ್ದೆ ಹತ್ತಿತು.ಬೆಳಗ್ಗೆ ಸೂರ್ಯೋದಯವಾದರೂ ಎಚ್ಚರವಾಗದೇ, ಜರಿತಾರಿಧೋತ್ರ ಹೊದ್ದು ಹಾಗೆಯೇ ಮಲಗಿದ್ದರು. ಇತ್ತ ಶ್ರೀನಿವಾಸನಿಗೆ ಹೊದಿಸಿದ್ದ ವಸ್ತ್ರ ಕಾಣೆಯಾಗಿರಲು ಹುಡುಕುತ್ತ ಬಂದಾಗ ಆ ಧೋತ್ರವನ್ನೇ ಹೊದ್ದು ಮಲಗಿದ್ದ ದಾಸರನ್ನು ಕಳ್ಳನೆಂದು ಭ್ರಮಿಸಿ ಅವರನ್ನು ಪ್ರಹರಿಸಿದಾಗಲೂ '' ಶ್ರೀನಿವಾಸ ಇದು ನಿನ್ನ ಮಾಯಾವೋ? ನಿನ್ನನ್ನು ಗೋವಿಂದಶೆಟ್ಟಿ, ಲೋಭಿ'' ಎಂದು ಬಿಡುನುಡಿಯಾಡಿದುದಕ್ಕೆ ಇದು ಫಲವೋ? ಇದನ್ನು ಸೇವಕನ ರೂಪದಲ್ಲಿ ತಂದು ಕೊಟ್ಟವನು ನೀನೆಯೋ? ಎಂದು ನೆನೆದು ಪುಳಕಾಂಕಿತರಾಗಿ, ಶ್ರೀನಿವಾಸ ಮೊರೆಬಿದ್ದು...

''ಗೋವಿಂದ ಸಲಹೆನ್ನನು-ಸದಾನಂದ ಗೋವಿಂದ ಸಲಹೆನ್ನನು.''ಎಂದು ಸ್ತುತಿಸಿದಾಗ ದಾಸರ ಮೈಮೇಲೆ ಬಿದ್ದ ಪೆಟ್ಟುಗಳು ಶ್ರೀನಿವಾಸನ ಮೂರ್ತಿಯ ಮೇಲೆ ಆಕಾರ ತಾಳಿದವು. ಇದು ತಿಳಿದ ಮಹಂತನಿಗೆ ಭಯವಾಗಿ ಇವರ್‍ಯಾರೋ ಮಹಾತ್ಮರಿರಬೇಕೆಂಬ ಪೂಜ್ಯ ಭಾವನೆ ಮೂಡಿತು. ಆಗ ಬಾಲಕನೋರ್ವನ ಮೇಲೆ ಆವೇಶ ಬಂದು “ಅವರೇ ಕನಕದಾಸರು,ಧೋತ್ರವನ್ನು ಅವರಿಗೆ ಕೂಡಿರಿ, ಸನ್ಮಾನಿಸಿರಿ'' ಎಂಬ ಆಜ್ಞೆಯಾಯಿತು.ದಾಸರ ಕ್ಷಮೆ ಕೋರಿ ಏಕಾಂತ ಸೇವೆಗೆ ಅನುವು ಮಾಡಿಕೊಟ್ಟರು.ಆಗ ಕನಕನು ''ಶ್ರೀನಿವಾಸ..ಸಾಕು..ಸಾಕು...ನಿನ್ನ ಮದುವೆಯ ಮರ್ಯಾದೆ ಎಂದು ಮೂದಲಿಸಿದ್ದಕ್ಕೆ, ಶ್ರೀನಿವಾಸನು ನಿಜರೂಪದಿಂದ ಬಂದು ಕನಕದಾಸರನ್ನು ಸರಸ ಮೃದು ವಚನಗಳಿಂದ ಸಂತೈಸಿದನು.ಇದಲ್ಲವೇ ಭಗವಂತ ಭಕುತನ ಬಾಂಧವ್ಯ,ನೆನೆದರೆ ಮೈರೋಮಾಂಚನಗೊಳ್ಳುತ್ತದೆ ಆಗ ದಾಸರು ನಿಂದಾಸುತ್ತಿ ರೂಪವಾಗಿ...

''ನಿನ್ನ ನಾನೇ ನೆಂದೆನೋ ವೆಂಕಟರಾಯ॥

ಎನ್ನ ನೀ ಸಲಹಬೇಕೋ ॥

ಎಂದು ಸ್ತುತಿಸಿದರು. ನೀನೇ ಗತಿಯೆಂದು ಅನನ್ಯಗತಿಕರಾಗಿ ಶರಣಾದ ಭಕುತರ ಯೋಗ ಕ್ಷೇಮವನ್ನು ನಾನೇ ನೋಡಿಕೊಳ್ಳುತ್ತೇನೆ ಎಂದು ಕೃಷ್ಣನು ಗೀತೆಯಲ್ಲಿ “ಅನನ್ಯಾಶ್ಚಿಂತಯಂ ತೋಮಾಮ್.. ಯೋಗ ಕ್ಷೇಮಮ್ ವಹಾಮ್ಯಹಂ ಎಂದು ಹೇಳಿ ಸತ್ಯ ಸಂಕಲ್ಪನಾದ ಶ್ರೀನಿವಾಸನು ಮಾಡಿಯೂ ತೋರಿಸಿದ್ದಾನೆ. ಇದಕ್ಕೆ ಭಾವೀ ಜಗನ್ನಾಥದಾಸರಾದ ಶ್ರೀನಿವಾಸಾಚಾರ್ಯರು ಮತ್ತು ಗೋಪಾಲದಾಸರು ಸಾಕ್ಷೀ ಭೂತರಾಗಿದ್ದಾರೆ. ಶ್ರೀನಿವಾಸಾಚಾರ್ಯರು, ಗೋಪಾಲದಾಸರೊಂದಿಗೆ ತಿರುಪತಿಗೆ ಬ್ರಹ್ಮೋತ್ಸವಕ್ಕೆ ಬಂದರು. ಬಹುಕಾಲ ವ್ಯಾಧಿಯನ್ನನುಭವಿಸಿದ್ದ, ಪ್ರಯಾಣದ ಆಯಾಸದ ಬಾಧೆಯಿಂದ ಬಿಡಾರಕ್ಕೆ ಬಂದು ಮಲಗಿದಾಗ ಸಂಕಟದಿಂದ ಊರ್ಧ್ವ ಶ್ವಾಸಕ್ಕಿಟ್ಟುಕೊಂಡು ಹೃದಯದ ವ್ಯಾಪಾರ ನಿಂತು ಹೋದಂತಾಯಿತು. ಭಜನೆಯಲ್ಲಿದ್ದು ಗೋಪಾಲದಾಸರು ಅಪರೋಕ್ಷ ಜ್ಞಾನದಿಂದ ತಿಳಿದು ಬಿಡಾರಕ್ಕೆ ಬಂದರು. ಅಷ್ಟರಲ್ಲಿ ವಿಜಯದಾಸರು ಸೂಕ್ಷ್ಮಶರೀರದಿಂದ ಬಂದು,ನಿನ್ನ ಆಯುಸ್ಸಿನಲ್ಲಿ ನಾಲ್ವತ್ತು ವರ್ಷವನ್ನು ಆಚಾರ್ಯನಿಗೆ ಧಾರೆಯೆರೆದು ಬದುಕಿಸು ಎಂದು ಹೇಳಿದಾಗ ಗೋಪಾಲದಾಸರು ಗುರ್ವಾಜ್ಞೆ ಎಂದು, “ಎನ್ನ ಬಿನ್ನಪ ಕೇಳು ಧನ್ವಂತ್ರಿ ದಯಮಾಡೋ ! ಸಣ್ಣವನು ಇವ ಕೇವಲ ಎಂಬುದಾಗಿ ಸ್ತುತಿಸಿ ಆಯುರ್ದಾನ ಮಾಡಿ ಉಜ್ಜೀವನ ಗೊಳಿಸಿದರು. ಆಚಾರ್ಯರಿಗೆ ಆಹಾರವನ್ನು ತರಲು ದೇವಸ್ಥಾನಕ್ಕೆ ಹೋದರು. ಅಷ್ಟರಲ್ಲಿ ದಯಾಮಯನಾದ ಭಕ್ತ ಬಂಧುವೂ ಆದ ಶ್ರೀನಿವಾಸನು ಗೋಪಾಲದಾಸರ ರೂಪದಿಂದ ಬಂದು ದಧ್ಯೋದನವನ್ನೂ (ಮೊಸರನ್ನ) ಮುದ್ಗಾನ್ನ (ಪೊಂಗಲ್) ವನ್ನು ಜೊತೆಗೆ ಗಿಂಡಿಯ ತುಂಬಾ ಪರಿಮಳೋದಕವನ್ನು ಕೊಟ್ಟು ತೀರ್ಥವನ್ನು ಕೊಟ್ಟು ಮೈದನಿ ಅದೃಶ್ಯನಾದನು. ಆಚಾರ್ಯರಿಗೆ ನವಚೈತನ್ಯ ಬಂದಂತಾಯಿತು. ಶ್ರೀನಿವಾಸನ ಅನುಗ್ರಹದಿಂದಾಗಿ ಮುಂದಿನ ಮಾರ್ಗ ಸ್ಪಷ್ಟ ಗೋಚರವಾಯಿತು. ಸ್ವಲ್ಪ ಹೊತ್ತಿನ ನಂತರ ಗೋಪಾಲದಾಸರು ಮೊಸರನ್ನ ಜಲವನ್ನು ತಂದಾಗ ಆಚಾರ್ಯರು ನಡೆದ ವಿಷಯವನ್ನೆಲ್ಲ ಹೇಳಿದಾಗ ಗೋಪಾಲದಾಸರ ರೂಪದಿಂದ ನಿನಗೆ ಅನುಗ್ರಹಿಸಿದವನು ಶ್ರೀನಿವಾಸ, ಅದೇ ನಿಮ್ಮ ಸ್ವರೂಪ ಗುರುವಿನ ರೂಪ ಎಂದು ಆಶೀರ್ವದಿಸಿದರು.

ಹೀಗೆ ಎಲ್ಲ ದಾಸರಾಯರ ಜೀವನದಲ್ಲಿ ಶ್ರೀನಿವಾಸನು ಒಂದಲ್ಲ ಒಂದು ರೀತಿ ಲೀಲಾವಿನೋದಗಳನ್ನು ತೋರಿಸಿ, ಅನುಗ್ರಹಿಸಿದ್ದಾನೆ ದಾಸ ರಾಯರು ಅನೇಕ ರೀತಿಯಲ್ಲಿ ಶ್ರೀನಿವಾಸನನ್ನು ಕೊಂಡಾಡಿದ್ದಾರೆ. ಅವುಗಳೆಲ್ಲವನ್ನು ಸ್ಮರಿಸುವುದೇ ಒಂದು ಪುಣ್ಯ ಮತ್ತು ಭಾಗ್ಯ.

ಶ್ರೀಕೃಷ್ಣಾರ್ಪಣಮಸ್ತು

## ಮುತ್ತಿನ ಚಪ್ಪರವಾಹನ



ಮುತ್ಯವಿತಾನ ಎಂದರೆ ಮುತ್ತಿನ ಚಪ್ಪರ. ಸ್ವಚ್ಛತೆ, ಶಾಂತಿ, ಸುಮನಸ್ಸುಗಳಿಗೆ ಮುತ್ಯವನ್ನು ಸಂಕೇತವಾಗಿ ಸೂಚಿಸಲಾಗಿದೆ. ಅಶಾಂತಿಯನ್ನು ದೂರ ಮಾಡುವ ಶಕ್ತಿ ಮುತ್ತುಗಳಿಗಿದೆ. ಮುತ್ತು ರುದ್ರಾಕ್ಷಗಳಂತೆ ಪವಿತ್ರವಾಗಿವೆ. ಮಹಾರಾಜರು ಶ್ರೀಮಂತರು ಈ ಕಾರಣದಿಂದಲೇ ಮುತ್ತಿನಹಾರಗಳನ್ನು ಧರಿಸುತ್ತಾರೆ. ಮೂರನೇ ದಿನ ರಾತ್ರಿ ಪತ್ನಿಯರ ಸಹಿತವಾಗಿ ಸುಖಾನಂದ ಪುರುಷ ಸ್ವರೂಪನಾಗಿ ತಿರುಬೀದಿಗಳಿಗೆ ಬಂದು ದರ್ಶನ ನೀಡುತ್ತಾನೆ ಶ್ರೀನಿವಾಸನು.

# ಬಿಂಡಿಗನವಿಲೆ ಪ್ರಸನ್ನ ಕೇಶವ ದೇವಾಲಯ

12

- ಕೆಂಗೇರಿ ಚಕ್ರಪಾಣಿ
9448386886



ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಒಂದು ಹಳ್ಳಿ. ನಾಗಮಂಗಲದ ಪಶ್ಚಿಮಕ್ಕೆ ಸುಮಾರು 19 ಕಿ.ಮೀ.ದೂರದಲ್ಲಿ ಹಾಗೂ ಬೆಳ್ಳೂರಿನಿಂದ ಸುಮಾರು 20 ಕಿ.ಮೀ.ದೂರದಲ್ಲಿದೆ. ಬಿಂಡಿಗನವಿಲೆಯಲ್ಲಿ ದಿಂಡಿಗ ಎಂಬ ಜಾತಿಯ ಮರ ಹಾಗೂ ನವಿಲುಗಳು ಅಧಿಕವಾಗಿರುವುದರಿಂದ ದಿಂಡಿಗನವಿಲೆ ಎಂಬ ಹೆಸರು ಕಾಲಕ್ರಮೇಣ ಬಿಂಡಿಗನವಿಲೆ ಆಯಿತೆಂದು ಅಭಿಪ್ರಾಯಪಡಲಾಗಿದೆ.

ಬಿಂಡಿಗನವಿಲೆ ಹಿಂದೆ ಜೈನ ಕ್ಷೇತ್ರವು ಹೌದು. ಸಮೀಪದ ಜೈನಕ್ಷೇತ್ರ ಕಂಬದ ಹಳ್ಳಿಯ ಶಾಸನವೊಂದರಲ್ಲಿ ಬಿಂಡಿಗನವಿಲೆ ತೀರ್ಥದ ಉಲ್ಲೇಖ ಬರುತ್ತದೆ. ಇಲ್ಲಿ ಕೆಲವು ಜೈನ ನಿಷದಿ ಶಾಸನಗಳೂ ಸಹ ದೊರೆತಿದೆ. ಬಿಂಡಿಗನವಿಲೆ ಒಂದು ಸುಪ್ರಸಿದ್ಧ ವೈಷ್ಣವ ಕ್ಷೇತ್ರ. ಇಲ್ಲಿ ಚೆನ್ನಕೇಶವ ದೇವಾಲಯವಿದೆ. ಚೆನ್ನಕೇಶವ ದೇವಾಲಯವು ಗರ್ಭಗೃಹ, ಸುಖನಾಸಿ,ನವರಂಗ ಮುಖಮಂಟಪ,ಪ್ರಾಕಾರ ಮಂಟಪ, ಪ್ರವೇಶ ದ್ವಾರಗಳನ್ನು ಹೊಂದಿರುವ ದೊಡ್ಡ ದೇವಾಲಯವಾಗಿರುತ್ತದೆ. ಗರ್ಭಗುಡಿಯಲ್ಲಿ ಹೊಯ್ಸಳರ ಕಾಲದ ಸುಂದರವಾದ ಪ್ರಸನ್ನ ಚೆನ್ನಕೇಶವನ ಮೂರ್ತಿಯಿದೆ. ನವರಂಗದಲ್ಲಿ ಕೇಶವ ದೇವರ ಎಡಕ್ಕೆ ಸೌಮ್ಯನಾಯಕಿ ಅಮ್ಮನವರ ಗುಡಿ ಹಾಗೂ ಬಲಕ್ಕೆ ಗರುಡನ ಮೂರ್ತಿಯಿದೆ. ಬಿಂಡಿಗನವಿಲೆಯ ಕೇಶವ ದೇವಾಲಯದ ವಿಶೇಷವೇನೆಂದರೆ ಇದು ಒಂದು ಗರುಡ ಪ್ರಾಧಾನ್ಯ ಕ್ಷೇತ್ರ ಇಲ್ಲಿ ವಿಷ್ಣುವಿನ ವಾಹನನಾದ ಗರುಡನಿಗೆ ವಿಶೇಷ ಆದ್ಯತೆಯಿದೆ. ಇಲ್ಲಿರುವ ಗರುಡನ ಮೂರ್ತಿಯು ಬಹಳ ಶಕ್ತಿಶಾಲಿಯೆಂದು ಭಕ್ತರು ನಂಬಿರುತ್ತಾರೆ.ಇಲ್ಲಿರುವ ಗರುಡದೇವನು ಅರ್ಚನಾ ಮೂರ್ತಿಯಾಗಿದ್ದು, ಅವನಿಗೆ ಇಲ್ಲಿ ಬಹು ವೈಭವವಾಗಿ ಕಲ್ಯಾಣೋತ್ಸವ ಜರುಗುವುದು.

ಬಿಂಡಿಗನವಿಲೆಯ ಗರುಡ ವಿಗ್ರಹ ಸ್ಥಾಪನೆಯಾದ ಬಗ್ಗೆ ಒಂದು ಐತಿಹ್ಯವಿದೆ. ಹೊಯ್ಸಳರ ಕಾಲದಲ್ಲಿ ಬೇಲೂರಿನ ಚೆನ್ನಕೇಶವ ವಾಹನಕ್ಕೆ ಗರುಡನ ಮೂರ್ತಿಯನ್ನು ತರಲು ಭಕ್ತರು ಕಂಚಿಗೆ ತೆರಳಿದ್ದರು. ಕಂಚಿಯಲ್ಲಿ ಮರದ ಗರುಡನ ಮೂರ್ತಿಯನ್ನು ಮಾಡಿಸಿಕೊಂಡು ಬೇಲೂರಿಗೆ ಹಿಂದಿರುಗುವ ಮಾರ್ಗಮಧ್ಯದಲ್ಲಿ ಬಿಂಡಿಗನವಿಲೆಯಲ್ಲಿ ರಾತ್ರಿ ತಂಗಿದ್ದರು.ರಾತ್ರಿ ತಂಡದ ಮುಖಂಡನಿಗೆ ಸ್ವಪ್ನವಾಯಿತು. ಕನಸ್ಸಿನಲ್ಲಿ ಗರುಡ ಪ್ರತ್ಯಕ್ಷನಾಗಿ ನಾನಿರುವ ಸ್ಥಳವೇ ಕೇಶವ ಸನ್ನಿಧಿ.ನಾನು ಇಲ್ಲೇ ನೆಲೆಸಿ ತನ್ನ ಒಡೆಯನನ್ನು ಸೇವೆಗೈಯ್ಯುವನೆಂದು ತಿಳಿಸಿದಂತಾಯಿತಂತೆ. ಇದೇ ಸಮಯದಲ್ಲಿ ನಾಗಮಂಗಲದ ಪಾಳೆಯಗಾರನಿಗೆ ಇದೇ ರೀತಿ ಕನಸಾಗಿ ಅವನು ಮಾರನೆಯ ದಿನ ಬಿಂಡಿಗನವಿಲೆಗೆ ಧಾವಿಸಿದನು. ನಂತರ ಪಾಳೆಯಗಾರನು ಹಾಗೂ ಭಕ್ತವೃಂದವು ನಿತ್ಯವೂ ಅಲ್ಲಿ ಗರುಡದೇವನ ಪೂಜೆಗೊಳ್ಳುವಂತೆ ವ್ಯವಸ್ಥೆ ಮಾಡಿದರೆನ್ನಲಾಗಿದೆ. ಈದೇವಾಲಯದಲ್ಲಿ ವೈನತೇಯನಿಗೆ ಕಲ್ಯಾಣೋತ್ಸವವು ನಡೆಯುವುದು ವಿಶೇಷ.ಕೇಶವ ದೇವಾಲಯದಲ್ಲಿ ಹಿಂದೆ ಇದ್ದ ಮರದ ಗರುಡನ ಮೂರ್ತಿಯು ಗೆದ್ದಲು ಹಿಡಿದು ಹಾಲಾಗಿದ್ದರಿಂದ ಕ್ರಿ.ಶ. 1931ರಲ್ಲಿ ಬೆಂಗಳೂರು ಮುನಿಸಿಪಲ್ ಛೇರ್ಮನ್ ರಾವ್ ಬಹದ್ದೂರ್, ಶ್ರೀ ಬಿ.ಕೆ.ಗರುಡಾಚಾರ್ ಎಂಬ ಮಹನೀಯರು ಶ್ರೀಗಂಧದಲ್ಲಿ ವೈನತೇಯನನ್ನು ಹಾಗೂ ಶ್ರೀಗಂಧದ ಆಂಜನೇಯ ಮೂರ್ತಿಯನ್ನು ಮಾಡಿಸಿ ಕೊಟ್ಟಿರುವರು. ನಂತರ ಕಾಲದಲ್ಲಿ ಪಂಚಲೋಹದ ಗರುಡನ ಪತ್ನಿಯರಾದ ರುದ್ರ ಹಾಗೂ ಸುಕೀರ್ತಿಯರನ್ನು ಭಕ್ತರು

ಮಾಡಿಸಿರುವರು. ಶ್ರೀ ರಾಮಾನುಜರು ಮೇಲುಕೋಟೆಗೆ ತೆರಳುವ ಮಾರ್ಗದಲ್ಲಿ ಇಲ್ಲಿ ತಂಗಿದ್ದರು, ಕೇಶವನನ್ನು ಅರ್ಚಿಸಿದರೆಂಬ ನಂಬಿಕೆಯಿದೆ.

ಕ್ರಿ.ಶ. 1331 ರಲ್ಲಿ ಪಂಡರೀದೇವನೆಂಬುವನು ರಂಗಮಂಟಪವನ್ನು ಮಾಡಿಸಿರುವನು. 16 ನೇ ಶತಮಾನದಲ್ಲಿ ದೇವಾಲಯವು ವಿಸ್ತರಣೆಯಾಗಿರುವುದಕ್ಕೆ ಶಾಸನಗಳು ಲಭ್ಯವಿವೆ. ಇಲ್ಲಿರುವ ಪ್ರಾಕಾರ ಮಂಟಪದಲ್ಲಿ ಹಿಂದೆ ಇದ್ದ ರಾಮಾನುಜಾಚಾರ್ಯರ ಜೊತೆಗೆ 12 ಜನ ಆಳ್ವಾರರುಗಳು, ಶ್ರೀಕೃಷ್ಣ, ಶ್ರೀವಿಶ್ವಕ್ಸೇನ, ಸುದರ್ಶನ ನರಸಿಂಹ ಮುಂತಾದ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಕೇಶವ ದೇವಾಲಯವು ಸಾಕಷ್ಟು ಅಭಿವೃದ್ಧಿಯನ್ನು ಹೊಂದಿದ್ದು, ಸಹಸ್ರಾರು ಸಂಖ್ಯೆಯ ಭಕ್ತವೃಂದವನ್ನು ಹೊಂದಿರುತ್ತದೆ.

ಬಿಂಡಿಗನವಿಲೆಯ ಕೇಶವ ಸ್ವಾಮಿಯ ರಥೋತ್ಸವವು ಮಾಘ ಶುದ್ಧ ಪಂಚಮಿಯಿಂದ ಮಾಘ ಬಹುಳ ಬಿದಿಗೆಯವರೆಗೂ ಅದ್ದೂರಿಯಾಗಿ ನಡೆಯುತ್ತದೆ. ಮಾಘ ಶುದ್ಧ ಚತುರ್ದಶಿ (ಪೌರ್ಣಮಿ) (ಜನವರಿ-ಫೆಬ್ರವರಿ ತಿಂಗಳು) ಬ್ರಹ್ಮ ರಥೋತ್ಸವವು ಬಹು ವೈಭವದಿಂದ ನೆರವೇರುತ್ತದೆ.



ಕೇಶವ ದೇವಾಲಯದಲ್ಲಿ ವಿಶೇಷ ಹಬ್ಬದ ದಿನಗಳು ರಾಮಾನುಜರ ತಿರುನಕ್ಷತ್ರ, ಶ್ರೀರಾಮನವಮಿ, ಹನುಮದ್‌ಜಯಂತಿ ಹಾಗೂ ನಿತ್ಯ ಪೂಜೆ, ಪಕ್ಷ ಪೂಜೆಗಳು ಬಹುಪಾಂಗಿಕವಾಗಿ ನೆರವೇರುತ್ತದೆ.

ಬಿಂಡಿಗನವಿಲೆಯಲ್ಲಿ ಹೊಯ್ಸಳರ ಕಾಲದ ನಗರೇಶ್ವರ ದೇವಾಲಯವು ಇದೆ. ಬಿಂಡಿಗನವಿಲೆಗೆ ಆಗಮಿಸುವ ಪ್ರವಾಸಿಗರು ಸಮೀಪದ ಹೊನ್ನಾವರದ ಲಕ್ಷ್ಮೀಕಾಂತ ಹಾಗೂ ಜೈನಕ್ಷೇತ್ರ ಕಂಬದಹಳ್ಳಿಯ ದೇವಾಲಯಗಳನ್ನು ಸಹಾ ದರ್ಶಿಸಬಹುದು.



**ಹೀಗೆ ಬನ್ನಿ**

ಬಿಂಡಿಗನವಿಲೆಯು ಬೆಂಗಳೂರಿನಿಂದ 130 ಕಿ.ಮೀ. ದೂರದಲ್ಲಿದೆ. ಬೆಂಗಳೂರು - ಹಾಸನ ರಸ್ತೆಯಲ್ಲಿ ಬೆಳ್ಳೂರು ತಿರುವು ಸಿಗುತ್ತದೆ. ಬೆಳ್ಳೂರು ಕ್ರಾಸ್ ನಿಂದ 8 ಕಿ.ಮೀ. ಮುಂದೆ ಸಾಗಿದರೆ ಎಡಕ್ಕೆ ಕದಬಹಳ್ಳಿ ಎಂಬ ಗ್ರಾಮವಿದೆ. ಅಲ್ಲಿ ಎಡಕ್ಕೆ ಬಿಂಡಿಗನವಿಲೆ ರಸ್ತೆಯ ಕಡೆ ತಿರುಗಬೇಕು. ಕದಬಹಳ್ಳಿಯಿಂದ ಬಿಂಡಿಗನವಿಲೆ ಸುಮಾರು 13 ಕಿ.ಮೀ. ದೂರವಿರುವುದು.

ಮಂಡ್ಯ-ನಾಗಮಂಗಲದ ಕಡೆಯಿಂದ ಬರುವ ಪ್ರವಾಸಿಗರು ನಾಗಮಂಗಲ- ಬೆಳ್ಳೂರು ರಸ್ತೆಯಲ್ಲಿರುವ ಟಿ.ಬಿ.ಸರ್ಕಲ್‌ಗೆ ಬಂದು ಎಡಕ್ಕೆ ತಿರುಗಿ ಶ್ರವಣಬೆಳಗೊಳ ರಸ್ತೆಯಲ್ಲಿ 15ಕಿ.ಮೀ. ಕ್ರಮಿಸಿದರೆ ಅದ್ದಿಹಳ್ಳಿ ಎಂಬ ಗ್ರಾಮವು ಸಿಗುವುದು. ಇಲ್ಲಿ ಬಲಕ್ಕೆ ತಿರುಗಿ ಸುಮಾರು ಒಂದೂವರೆ ಕಿ.ಮೀ. ಸಾಗಿ ಬಿಂಡಿಗನವಿಲೆಯನ್ನು ಸೇರಬಹುದು.



**ಕಲ್ಪವೃಕ್ಷ ವಾಹನ**

ಕಲ್ಪವೃಕ್ಷವು ಕ್ಷೀರಸಾಗರ ಮಂಥನ ಕಾಲದಲ್ಲಿ ಹುಟ್ಟಿ ಬಂದಿದೆ. ಕಲ್ಪವೃಕ್ಷದ ಜೊತೆಯಲ್ಲಿ ಶ್ರೀ ಮಹಾಲಕ್ಷ್ಮಿ, ಕಾಮಧೇನು ಮುಂತಾದ ಅನೇಕ ದಿವ್ಯ ವಸ್ತುಗಳು ದಿವ್ಯ ಪ್ರಾಣಿಗಳು ಹುಟ್ಟಿ ಬಂದಿವೆ. ಕಲ್ಪವೃಕ್ಷವನ್ನೇ ಕಲ್ಪತರು ಎನ್ನುತ್ತಾರೆ. ಭಕ್ತಿಯಿಂದ ನಮಿಸಿ ಏನನ್ನು ಬೇಡಿದರೂ ಪ್ರಸಾದಿಸುವ ಮಹಿಮೆ ಕಲ್ಪವೃಕ್ಷಕ್ಕೆ ಇದೆ. ಶ್ರೀವೇಂಕಟೇಶ್ವರನು ಸಹ ಕಲ್ಪವೃಕ್ಷದಂತೆ ಕಾಮಿತಾರ್ಥ ಪ್ರದಾತನೇ. ಈ ಪರಮಾರ್ಥವನ್ನು ಭಕ್ತ ಜನರಿಗೆ ತಿಳಿಸಲು ಶ್ರೀನಿವಾಸ ಸ್ವಾಮಿಯನ್ನು ಕಲ್ಪವೃಕ್ಷದ ಕೆಳಗೆ ಕೂಡಿಸಿ ಮೆರವಣಿಗೆ ಮಾಡುತ್ತಾರೆ.


# ಯುಗ ಯುಗಗಳಲ್ಲಿ ವೆಂಕಟಗಿರಿ

- ಎಂ. ಎಸ್.ಜಿ


ವೆಂಕಟಗಿರಿಯ ಮಹಿಮೆಯೆಂದರೆ ಶ್ರೀಹರಿಯ ಮಹಿಮೆಯೇ. ಶ್ರೀಹರಿಯಮಹಿಮೆಯೇ ಸರಿ ಯಾಕೆಂದರೆ ಜಡವಾದ ಪರ್ವತಕ್ಕೆ ಸ್ವತಃ ಯಾವ ಮಹಿಮೆಯೂ ಕೂಡಲಾರದು. ವೆಂಟಗಿರಿಯಲ್ಲಿ ಸನ್ನಿಹಿತನಾಗಿ, ವೆಂಕಟಗಿರಿ ನಾಮಕನಾಗಿ, ವೆಂಕಟಗಿರಿಗೆ ಇತರ ಪರ್ವತಗಳಿಲ್ಲದ ಮಹಾತ್ಮೆಯನ್ನು ತಂದುಕೊಡುವುದರಲ್ಲಿ ಪರಮಾತ್ಮನ ವಿಭೂತಿರೂಪವೇ ಕಾರಣವಾಗಿರುತ್ತದೆ. ಸ್ಥಾವರಾಣಾಂ ಹಿಮಾಲಯಃ ಎಂಬ ಭಗವದ್ವಚನದ ಅನುಸಂಧಾನವನ್ನು ಇಲ್ಲಿ ಮಾಡಿಕೊಳ್ಳಬೇಕು. ಭಗವನ್ಮಹಿಮಾ ಪ್ರತಿಪಾದಕವಾದ ವೆಂಕಟಗಿರಿ ಚರಿತ್ರೆಯು ಅನ್ಯಾದೃಶ (೧೮)ಪುರಾಣಗಳ ಪೈಕಿ ಹನ್ನೆರಡು ಪುರಾಣಗಳಲ್ಲಿ ವಿಸ್ತಾರವಾಗಿ ನಿರೂಪಿತವಾಗಿದೆ. ಇವುಗಳಲ್ಲಿ ಪ್ರಾಯಶಃ ಸಮಾಧಿಭಾಷೆಯಿಂದಲೇ ಭಗವಾನ್ ವೇದವ್ಯಾಸರು ಶ್ರೀಹರಿಯ ಮಹಿಮೆಯನ್ನು ನಿರೂಪಿಸಿರುತ್ತಾರೆ. ದರ್ಶನ, ಗುಹ್ಯ, ಸಮಾಧಿಗಳೆಂದು ಭಾಷೆಯಲ್ಲಿ ಮೂರು ವಿಧ, (ಭಾಷಾತ್ರಯಗಳ ವಿಷಯದಲ್ಲಿ ಹೆಚ್ಚು ತಿಳಿಯ ಬಯಸುವವರು ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದ ೨೨, ೩೯೮,೪೦೦, ಶ್ಲೋಕಗಳಿಗೆ ಶ್ರೀವಾದಿ ರಾಜೀಯ ಮತ್ತು ವರದ ರಾಜೀಯ ವ್ಯಾಖ್ಯಾನಗಳನ್ನು ನೋಡಬಹುದು) ಈ ಮೂರು ಭಾಷೆಗಳನ್ನು ಅಳವಡಿಸಿಕೊಂಡು ಶ್ರೀವೇದವ್ಯಾಸರು ಶ್ರೀಮನ್ಮಹಾಭಾರತವನ್ನು ರಚಿಸಿದರು. ಮುಂದಾಧಿಕಾರಿಗಳಿಗೆ ಶ್ರೀಹರಿಯ ಮಹಿಮೆಯನ್ನು ತಿಳಿದುಕೊಂಡು, ಶ್ರೀಹರಿ ಭಕ್ತಿಯು ಅಭಿವೃದ್ಧಿಯಾಗಲು ಎಷ್ಟು ಉಪಯುಕ್ತವಾಗಬೇಕಾಗಿತ್ತೋ ಅಷ್ಟು ಉಪಯೋಗ ಶ್ರೀಮನ್ಮಹಾಭಾರತ ಗ್ರಂಥದಿಂದ ಉಂಟಾಗಲಿಲ್ಲ. ಆದ್ದರಿಂದಲೇ ಶ್ರೀಮದ್ಭಾಗವತ ಪುರಾಣವನ್ನು ಅವರು ರಚನೆಯನ್ನು ಮಾಡಿದರು. ಅನಂತರ ಇತರ ಪುರಾಣಗಳನ್ನೂ,ಉಪಪುರಾಣವನ್ನೂ ರಚಿಸಿದರು.

ನೈಷ್ಕರ್ಮ್ಯಮಪ್ಯಚ್ಯುತ ಭಾವವರ್ಜಿತಂ
ನ ಶೋಭತೇ ಜ್ಞಾನ ಮಲಂ ನಿರಂ ಜನಂ (೧-೫-೧೨)

ಎಂಬ ಭಾಗವತೋಕ್ತಿಯಂತೆ ಶ್ರೀಹರಿಯ ಮಹಿಮೆಯನ್ನು ನಿರೂಪಣೆ ಮಾಡದ ಶಾಸ್ತ್ರ ರಚನೆಯೇ ನಿಷ್ಪ್ರಯೋಜನೆ. ಶ್ರೀಹರಿಯಲ್ಲಿ ಭಕ್ತಿ ಇಲ್ಲದೆ ಹೋದಲ್ಲಿ ಶ್ರೀಹರಿಯ ವಿಷಯಕ್ಕೆ ಪರೋಕ್ಷ ಜ್ಞಾನವು ವ್ಯರ್ಥವೇ ಸರಿ. "ಭಕ್ತ್ಯರ್ಥಂ ಭಗವನ್ಮಹಿಮೋಕ್ತಿಃ ಎಂಬ ನುಡಿಯಂತೆ ಭಗವನ್ಮಾಹಾತ್ಮ್ಯ ವರ್ಣನೆಯೂ ಭಕ್ತಿಯ ಮೂಲಕ ಮೋಕ್ಷವು ಪ್ರಾಪ್ತವಾಗುವಂತೆ ಮಾಡುತ್ತದೆ. ಆದ್ದರಿಂದಲೇ ಕರುಣಾಳುಗಳಾದ ಬಾದರಾಯಣರು (ಶ್ರೀವೇದವ್ಯಾಸರು) ಪುರಾಣಗಳನ್ನು ರಚಿಸಿದರು. ಸಾತ್ವಿಕ-ರಾಜಸ, ತಾಮಸರೆಂಬ ಮೂರು ವಿಧ ಅಧಿಕಾರಿಗಳು ತಮ್ಮ ತಮ್ಮ ಸಾಧನೆಗಳನ್ನು ಮಾಡಿಕೊಂಡು ಯೋಗ್ಯತಾನುಸಾರವಾದ ಮೋಕ್ಷವನ್ನು ಪಡೆಯಲು ಪುರಾಣಗಳನ್ನೂ ಮೂರು ವಿಧವಾಗಿ ರಚಿಸಲಾಗಿದೆ. ವಿಷ್ಣು, ನಾರದ, ಶ್ರೇಷ್ಠವಾದ ಭಾಗವತ, ಗರುಡ, ಪದ್ಮ, ವರಾಹ, ಪುರಾಣಗಳು ಸಾತ್ವಿಕಗಳು. ಇವುಗಳಲ್ಲಿ ಪ್ರಧಾನವಾಗಿ ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದಿಸಲಾಗಿದೆ. ಮೋಕ್ಷಪ್ರದಗಳು,(ಷಟ್ಕಂತು ವಿಷ್ಣು ವಿಷಯಂ ಸಾತ್ವಿಕಂ ಮೋಕ್ಷದಂಕಿಲ). ಬ್ರಹ್ಮಾಂಡ ಬ್ರಹ್ಮ ವೈವರ್ತಕ, ಮಾರ್ಕಂಡೇಯ ಭವಿಷ್ಯತ್, ವಾಮನ, ಬ್ರಹ್ಮ ಪುರಾಣಗಳು ರಾಜಸಗಳು, ಶೈವ, ಆತ್ಮೀಯ ಸ್ಕಂದ ಕೂರ್ಮ, ಮತ್ಸ್ಯ ಪುರಾಣಗಳು













ತಾಮಸ ಪುರಾಣಗಳು. ಸಂದರ್ಭಾನುಸಾರ ವಿಷ್ಣು ಸರ್ವೋತ್ತಮತ್ವ ಪ್ರತಿಪಾದಿಕ ಪ್ರಮೇಯಗಳು ರಾಜಸ,ತಾಮಸ ಪುರಾಣಗಳಲ್ಲಿಯೂ ನಿರೂಪಪವಾಗಿವೆ.

ಪ್ರಕೃತ ಕಥಾದೃಷ್ಟಿಯಿಂದ ಜನಮನವನ್ನು ಆಕರ್ಷಿಸಿ ಸರ್ವೇ ಸಾಮಾನ್ಯ ಆದರಣೀಯವಾಗುವುದು ಭವಿಷ್ಯೋತ್ತರ ಪುರಾಣ ಮತ್ತು ಪ್ರಮೇಯ ಪೂರ್ಣವಾಗಿ ಶ್ರೀನಿವಾಸನ ಅನಂತ ಕಲ್ಯಾಣಗುಣಗಳನ್ನೂ ಮಹಿಮೆಗಳನ್ನು ಪ್ರತಿಪಾದಿಸುವುದು ಆದಿತ್ಯಪುರಾಣ,ಸಂಸಾರಿಗಳು ದುಃಖನಾಶವನ್ನು ಮಾಡಿ, ಅವರ ಇಚ್ಛೆಯನ್ನು ಸಾಧಿಸಿ ಕೊಟ್ಟು ಉತ್ಕೃಷ್ಟ ರೀತಿಯಿಂದ ಸಂಸಾರ ಸಾಗರದಿಂದ ಅವರನ್ನು ಉದ್ಧರಿಸಿ ಮೋಕ್ಷ ದಾಯಕನಾಗಿರುವುದರಿಂದ ಶ್ರೀಹರಿಗೆ ಭವಿಷ್ಯೋತ್ತರನೆಂದು ಹೆಸರು.ಅವನ ಮಹಿಮೆಯನ್ನು ತಿಳಿಸುವುದು ಭವಿಷ್ಯೋತ್ತರ ಪುರಾಣ.ಪ್ರಸಿದ್ಧ ಆದಿತ್ಯನಲ್ಲಿದ್ದು, ಆದಿತ್ಯ ನಾಮಕನಾಗಿ ಯಜ್ಞ ಫಲಭೋಕ್ತೃವಾದುದರಿಂದ ಆದಿ ಶಬ್ಧವಾಚ್ಯನಾದ ಶ್ರೀಹರಿಯ ಮಹಿಮಾಶಯವನ್ನು ನಿರೂಪಿಸುವುದು ಆದಿತ್ಯ ಪುರಾಣ, ಮುಖ್ಯವಾಗಿ ಈ ಎರಡು ಪುರಾಣಗಳನ್ನನುಸರಿಸಿ ಸಂದರ್ಭಾನುಸಾರವಾಗಿ ವರಾಹ, ಬ್ರಾಹ್ಮ್ಯ, ಬ್ರಹ್ಮಾಂಡ ಪುರಾಣಗಳಲ್ಲಿ ವಿಶೇಷಗಳನ್ನು ಅಳವಡಿಸಿಕೊಂಡು ಶ್ರೀನಿವಾಸನ ಚರಿತ್ರೆಯನ್ನು ಅವನು ಹೇಗೆ ಭಕುತ ಜನರ ಪ್ರಭುವೆಂಬುದನ್ನೂ ಇಲ್ಲಿ ನಿರೂಪಿಸಲಾಗುವುದು. ಅನಂತಾದ್ರೀಶ ಅಂಕಿತದಿಂದ ರಚಿಸಲಾಗಿರುವ 'ವೆಂಕಟೇಶ ಪಾರಿಜಾತ' ಮತ್ತು ವಿರಿ ಶೇಷಚಾರ್ಯರ 'ಶ್ರೀನಿವಾಸಕಲ್ಯಾಣ' ಕನ್ನಡದಲ್ಲಿ ಜನಪ್ರಿಯವಾದವುಗಳು, ಅವುಗಳಿಂದಲೂ ಕಥಾಭಾಗವನ್ನು ಸಾಕಷ್ಟು ಉದಾಹರಿಸಲಾಗುವುದು.ಈ ಕಥೆಯನ್ನು ಹೇಳುವವರು ಸೂತರು, ಕೇಳುವವರು ಶೌನಕಾದಿ ಮಹರ್ಷಿಗಳು.

ಭವಿಷ್ಯೋತ್ತರ ಪುರಾಣದಲ್ಲಿನ ಕಥೆಯ ಉಗಮವು ಈ ರೀತಿಯಾಗಿದೆ. ಸತ್ಯಶೀಲನೂ,ಸತ್ಯನುಡಿಯುಳ್ಳವನೂ ಪರಮ ಧಾರ್ಮಿಕನೂ,ಸರ್ವಶಾಸ್ತ್ರ ಪಾರಂಗತನೂ,ನಿರಹಂಕಾರನೂ,ನಿತ್ಯತೃಪ್ತನೂ,ಪರಮಾತ್ಮನ ವಿಷಯಕ ಜ್ಞಾನ ವುಳ್ಳವನೂ,ರಾಜ ಋಷಿಯೂ ಯದೃಚ್ಛಾಲಾಭ ಸಂತುಷ್ಟನೂ ಆದ ಜನಕ ಮಹಾ ರಾಜನು ತಮ್ಮನಾದ ಕುಶಧ್ವಜನೊಡನೆ ಸುಖವಾಗಿದ್ದನು. ಜನಕ ರಾಜನ ಮಗಳಾಗಿ ಸಾಕ್ಷಾತ್ ಲಕ್ಷ್ಮೀದೇವಿಯೂ ಅವಿರ್ಭವಿಸಿದಳು. ಅವಳಿಗೆ ಜಾನಕಿ, ಸೀತಾ ಎಂಬ ಹೆಸರುಗಳಿದ್ದವು. ಜಗನ್ಮಾತೆಯು ಸಕಲ ಸೌಂದರ್ಯಕ್ಕೂ,ತವರು ಮನೆಗೂ ಭೂಷಣಳಾಗಿದ್ದಳು.ಕುಶಧ್ವಜನಿಗೆ ಮೂರು ಮಂದಿ ಅತಿ ಸುಂದರಿಯರಾದ ಕುಮಾರಿ ಯರಿದ್ದರು.ಜನಕರಾಜನ ತಮ್ಮನಾದ ಕುಶಧ್ವಜನಿಗೆ ರಾಜ್ಯ ವ್ಯವಹಾರವನ್ನೊಪ್ಪಿಸಿ, ತಾನು ಆತ್ಮಾರಾಮನಾಗಿ ಶ್ರೀಹರಿಚಿಂತನೆಯಲ್ಲಿ ಕಾಲವನ್ನು ಸದ್ವಿನಿಯೋಗ ಮಾಡು ತ್ತಿದ್ದನು.ಸುಖ ಸಂತೋಷಗಳನ್ನೇ ಅನುಭವಿಸುತ್ತಾ,ದುಃಖಲೇಶವಿಲ್ಲದೆ ಜನಕ ರಾಜನಿಗೆ ದೈವ ಪ್ರೇರಣೆಯಿಂದಲೇ ಅಸಾಧುವಾದ ಮನೋಭಾವವೊಂದು ಮೂಡಿತು."ಸುಖ ಮೇವಮೇ ಸ್ಯಾತ್ ದುಃಖ ಮನಾ ಗಮ ಪಿಮಾಭೂತ್" (ನನಗೆ ಸರ್ವದಾ ಸುಖವಿರಲಿ,ಎಂದಿಗೂ ದುಃಖವು ಬೇಡ),ಎಂಬುದೇ ಈ ಮನೋಭಾವ, ದುಃಖವಿಲ್ಲದಿರುವುದು ಜೀವರಾಶಿಗೆ ವಿರುದ್ಧವಾದುದು. ಸಕಲ ಜೀವರೂ ದುಃಖ ಸ್ಪೃಷ್ಟ ರಾದುದರಿಂದ, ಜನಕರಾಜನು ದುಃಖವನ್ನು ಅನುಭವಿಸಲೇಬೇಕು.ಆದರೆ ಅವನು

ಕರ್ಮಯೋಗಿ,ವಾಸುದೇವನ ಪ್ರಸಾದಕ್ಕೆ ಮುಖ್ಯ ಪಾತ್ರನಾಗಿದ್ದನು.ಆದ್ದರಿಂದ ಕರುಣಾಳುವಾದ ಶ್ರೀಹರಿಯು ಅವನಿಗೆ ದುಃಖಾನುಭಾವವನ್ನು ಆಗ ಕನಸ್ಸಿನಲ್ಲಿಯೇ ಅನುಭವಕ್ಕೆ ಬರುವಂತೆ ಮಾಡಿದನು. ಆವನ ತಮ್ಮ ಕುಶಧ್ವಜನು ಮಡಿದನು. ಆತನ ಪತ್ನಿಯು ಮಕ್ಕಳನ್ನು ಜನಕರಾಜನಿಗೆ ಒಪ್ಪಿಸಿ ಪತಿಯೊಡನೆ ಸಹಗಮನ ಮಾಡಿದಳು.



ಅತಿ ಸುಂದರಿಯರಾದ ತಮ್ಮನ ಕುವರಿಯರನ್ನೂ ಲೋಕೈಕ ಸುಂದರಿಯಾದ ತನ್ನ ಮಗಳನ್ನೂ ರಾವಣಾದಿಗಳ ಕಾಟದಿಂದ ಪಾರು ಮಾಡಿ ಸಂರಕ್ಷಿಸುವುದು ಕಷ್ಟವಾಯಿತು.ಅವರ ವಿವಾಹ ಪ್ರಶ್ನೆಯು ತಲೆದೋರಿತು.ಚಿಂತೆಯು ದ್ವಿಗುಣವಾಯಿತು. ಹೀಗೆ ದುಃಖವನ್ನು ಹೊಂದಿ ಕಾತರನಾದ ಜನಕರಾಜನಿಗೆ ಮನಃಶಾಂತಿಯನ್ನು ತಂದು ಕೊಡಲು ಮತ್ತೆ ದೈವಪ್ರೇರಣೆಯಿಂದಲೇ ಗೌತಮ ಋಷಿಗಳ ಮಕ್ಕಳಾದ ಶತಾನಂದ ರೆಂಬುವರು ಬಂದರು, ಶ್ರೀನಿವಾಸ ಕಲ್ಯಾಣರೂಪ ಶ್ರೀವೇಂಕಟೇಶ ಮಹಾತ್ಮ್ಯೆನ್ನು ಹೇಳಿದರು.ಜನಕರಾಜನ ಸಕಲೇಷ್ಟಾರ್ಥಗಳೂ ಕೈಗೂಡಿದವು.




## ಕೃತಯುಗದಲ್ಲಿ ವೃಷಭಾಚಲ

ವೈಕುಂಠಗಿರಿಯು ಶ್ರೀಹರಿಯ ವೈಕುಂಠದಂತೆ ವಿರಾಜಿಸುತ್ತಿದ್ದಿತು ದುಷ್ಟನಾದ ವೃಷಭನೆಂಬ ರಾಕ್ಷಸನೊಬ್ಬನು ಆ ಗಿರಿಯನ್ನು ಆಕ್ರಮಿಸಿ ಋಷ್ಯಾದಿಗಳಿಗೆ ತೊಂದರೆ ಕೊಡುತ್ತಿದ್ದನು. ಆ ರಾಕ್ಷಸನ ಉಪದ್ರವವನ್ನು ತಪ್ಪಿಸಿ ಸಲಹಬೇಕೆಂದು ಮುನಿಗಳು ಪರಮಾತ್ಮನನ್ನು ಮೊರೆಹೊಕ್ಕರು.ಶರಣಾಗತ ವತ್ಸಲನಾದ ಶ್ರೀಹರಿಯು ಅದಕ್ಕೆ ಸಮ್ಮತಿಸಿ, ವೃಷಾಭಾಸುರನಿದ್ದೆಡೆಗೆ ಧಾವಿಸಿದನು.ಆ ವೃಷಭಾಸುರನಾದರೋ ತುಂಬುರ ತೀರ್ಥದಲ್ಲಿ ತ್ರಿಕಾಲ ಸ್ನಾನ ಮಾಡುವವನು.ತನ್ನ ಬಳಿಯಲ್ಲಿದ್ದ ನರಸಿಂಹ ಸಾಲಗ್ರಾಮವನ್ನು ಭಕ್ತಿಯಿಂದ ಪೂಜಿಸುವವನು.ಪೂಜಾನಂತರ ತನ್ನ ಶಿರಸ್ಸನ್ನೇ ಖಡ್ಗದಿಂದ ಛೇದಿಸಿ ಪುಷ್ಪವಾಗಿ ಸಾಲಗ್ರಾಮಕ್ಕೆ ಅರ್ಪಿಸುವವನು.ಹೀಗೆ ಐದು ಸಹಸ್ರವರ್ಷಗಳು ಕಳೆದವು.



ಆ ಸಾಲಗ್ರಾಮದಲ್ಲಿಯೇ ಆವಿರ್ಭೂತನಾಗಿ ಶ್ರೀಹರಿಯು ಅವನಿಗೆ ಪ್ರತ್ಯಕ್ಷನಾದನು.ವೃಷಭಾಸುರನು ದೇವದೇವನಿಗೆ ಭಯ ಭಕ್ತಿಯಿಂದ ನಮಸ್ಕರಿಸಿ ಯುದ್ಧಭಿಕ್ಷೆಯನ್ನು ಬೇಡಿದನು.ಶ್ರೀನಿವಾಸನು ಮುಗುಳುನಗೆಯನ್ನು ಬೀರಿ ಅವನೊಂದಿಗೆ ಯುದ್ಧ ಮಾಡಲುಪಕ್ರಮಿಸಿದನು.



ಯುದ್ಧವು ಅತಿ ಘೋರವಾಗಿಯೂ ಆಶ್ಚರ್ಯಕರವಾಗಿಯೂ ನಡೆಯಿತು. ಮಾಯಾ ಯುದ್ಧದಲ್ಲಿ ಅತಿ ಚತುರನಾದ ವೃಷಭಾಸುರನು, ವಾಸುದೇವನು ಮಾಡಿದಂತೆಲ್ಲಾ ತಾನೂ ಮಾಡಿದನು. ಗರುಡಾರೂಢನಾಗಿ ವಿಶ್ವರೂಪವನ್ನು ಧರಿಸಿ ಸಹಸ್ರ ಬಾಹುಗಳಿಂದಲೂ ಸಹಸ್ರಾರು ಆಯುಧಗಳಿಂದಲೂ ಪರಮಾತ್ಮನು ವಿರಾಜಿಸಲು ದೈತ್ಯನು ಹಾಗೆಯೇ ಮಾಡಿ ತೋರಿಸಿದನು.ಯುದ್ಧವನ್ನು ನೋಡುತ್ತಿದ್ದ ದೇವತೆಗಳಿಗೆ ಮಾತ್ರವಲ್ಲದೆ,ಸಾಕ್ಷಾತ್ ಶ್ರೀ ಹರಿಗೂ ಆಶ್ಚರ್ಯವಾಯಿತು. ದೈತ್ಯನ ಇನ್ನೂ ವಿಲಂಬಿಸಿ ಪ್ರಯೋಜನವಿಲ್ಲವೆಂದು ಚಕ್ರದಿಂದ ರಾಕ್ಷಸನ ಶಿರಸ್ಸನ್ನು ತುಂಡರಿಸಲೆಸೆದನು.

(ಬ್ರಹ್ಮಾಂಡ ಪುರಾಣದಲ್ಲಿ ಈ ಕಥೆಯ ಬರುತ್ತದೆ. ಅಲ್ಲಿ ಶಬರ ವೇಷಧಾರಿಯಾದ ಪರಮಾತ್ಮನನ್ನು ಎದುರಿಸಿ ವೃಷಭಾಸುರನು ಘೋರ ಯುದ್ಧವನ್ನು ಮಾಡುತ್ತಾನೆ.

ಅಲ್ಲಿಯೂ ಶ್ರೀಹರಿಯು ಚಕ್ರದಿಂದಲೇ ರಾಕ್ಷಸನ ವಧೆಯನ್ನು ಮಾಡುತ್ತಾನೆ.)

ಆಗ ವೃಷಭಾಸುರನು ಶ್ರೀನಿವಾಸನಿಗೆ ದೀರ್ಘದಂಡ ನಮಸ್ಕಾರವನ್ನು ಮಾಡಿ ಹೀಗೆ ಹೇಳುತ್ತಾನೆ:

ದೇವ ದೇವ ಜಗನ್ನಾಥ ಸರ್ವಲೋಕೈಕಕಾರಣ

..........................................................

ಕೃತಾಗಸಾಂ ತ್ವಾದೃಶೇಷು ಪ್ರಣಾಮಖಲು ನಿಷ್ಕೃತಿಃ

(ಬ್ರಹ್ಮಾಂಡ ಪುರಾಣ ೪-೩೫ - ೪೧)

ಶ್ರೀನಿವಾಸನನ್ನು ಹೀಗೆ ಪ್ರಾರ್ಥನೆ ಮಾಡಿ, ವೈಕುಂಠ ಪರ್ವತವು ಇನ್ನು ಮುಂದೆ ತನ್ನ ಹೆಸರಿನಿಂದ ಕರೆಯಲ್ಪಡಬೇಕೆಂದು ಕೇಳಿಕೊಂಡು ಮಾತ್ರಕ್ಕೆ ಇದರಿಂದ ಸಂತುಷ್ಟನಾದ ಶ್ರೀನಿವಾಸನು ಚಕ್ರದಿಂದ ಅವನನ್ನು ಸಂಹರಿಸುತ್ತಾನೆ. ಆದ್ದರಿಂದ ಕೃತಯುಗದಲ್ಲಿ ವೈಕುಂಠಗಿರಿಗೆ ವೃಷಭಾಚಲವೆಂಬ ಹೆಸರು ಬಂದಿತು ಅಸುರನಲ್ಲಿ ಇಂತಹ ಹರಿ ಭಕ್ತಿ ಹೇಗೆ ಪ್ರಕಟವಾಯಿತೆಂದು ಆಶ್ಚರ್ಯ ಪಡಬೇಕಾಗಿಲ್ಲ, ಜೀವದ್ವಯಾವೇಶ ಪ್ರಮೇಯವು ಈ ಸಂಶಯವನ್ನು ಪರಿಹರಿಸುತ್ತದೆ ವೃಷಭಾಸುರ ಸುಜೀವವೊಂದು ನೆಲೆ ಮಾಡಿಕೊಂಡಿದ್ದು, ಹರಿಭಕ್ತಿಯ ಮೂಲಕ ಮೋಕ್ಷವನ್ನು ಪಡೆಯಿತು. ಅಸುರನಾದ ವೃಷಭನಿಗೆ ಹರಿದ್ವೇಶವಿದ್ದುದರಿಂದ ಸದ್ಗತಿಯಾಗಲಿಲ್ಲ ತಮಸ್ಸಾಯಿತು.

# ಮೋಹಿನೀ ಅವತಾರ

ಐದನೇ ದಿನದ ಬೆಳಗ್ಗೆ ಶ್ರೀನಿವಾಸನು ಮೋಹಿನಿ ಅವತಾರವನ್ನು ಧರಿಸಿ ಭಕ್ತರನ್ನು ಆನಂದಪರವಶರನ್ನಾಗಿ ಮಾಡುತ್ತಾನೆ. ಭಕ್ತರೆಲ್ಲರೂ ಮತ್ತೆ ಮತ್ತೆ ನೋಡಿ ಸಂತೃಪ್ತರಾಗುತ್ತಾರೆ.

ಶ್ರೀಮಹಾವಿಷ್ಣು ಬೆಳ್ಳನೆಯ ದೇಹದವನಲ್ಲ.ನೀಲಮೇಘದ ದೇಹದವನು, ಆದರೂ ಮಹಾಸುಂದರನು. ಹದಿನಾಲ್ಕು ಭುವನಗಳ ಅಂದಗಾರನು. ಕೃತಯುಗದಲ್ಲಿ ದೇವತೆಯರು ದಾನವರು ಸೇರಿ ಬ್ರಹ್ಮದೇವನ ಅಧ್ಯಕ್ಷತೆಯಲ್ಲಿ ಕ್ಷೀರಸಾಗರವನ್ನು ಅಮೃತಕ್ಕಾಗಿ ಮಂಥನ ಮಾಡಿದಾಗ ಅಮೃತ ಹುಟ್ಟಿ ಬಂತು. ಅಮೃತಕ್ಕಾಗಿ ದೇವದಾನವರು ಜಗಳ ಮಾಡಲಾರಂಭಿಸಿದಾಗ ಶ್ರೀ ಮಹಾವಿಷ್ಣು ದಿವ್ಯಮೋಹಿನೀ ರೂಪವನ್ನು ಧರಿಸಿದನು. ಮೋಹಿನಿಯ ಸೌಂದರ್ಯಕ್ಕೆ ದಾನವರು ದೇವತೆಯರು ತನ್ಮಯರಾಗಿ ಸೌಂದರ್ಯದ ಮತ್ತಿನಲ್ಲಿ ಬಿದ್ದರು. ಅಂಥಾ ಸುಂದರಾಕಾರನು ಶ್ರೀನಿವಾಸನು.ಅಮೃತ ಎಂದರೆ ಮರಣವಿಲ್ಲದದ್ದು ಎಂದು ಅರ್ಥ. ವಿನಾಶ ಬುದ್ಧಿಯುಳ್ಳ ದುರಹಂಕಾರಿಗಳಾದ ದಾನವರಿಗೆ ಅಮೃತವು ಸಿಗದಂತೆ ಮಾಡಿ ದೇವತೆಯರಿಗೆ ಅಮೃತವನ್ನು ಹಂಚುವುದಕ್ಕಾಗಿ ವಿಷ್ಣು ಮೋಹಿನಿ ರೂಪಧರಿಸಬೇಕಾಯ್ತು.



ಮೋಹಿನಿ ವೇಷ ಧರಿಸಿ ಶ್ರೀನಿವಾಸನು ಭಕ್ತರಿಗೆ ದರ್ಶನ ನೀಡುವ ಅಂತರಾರ್ಥವೇನೆಂದರೇ ಯಾರೇ ಆಗಲೀ ಎಂಥವರೇ ಆಗಲೀ ಸ್ತ್ರೀ ವ್ಯಾಮೋಹಿಗಳಾದರೆ ಹಾಳಾಗುತ್ತಾರೆ ಎಂದು ತಿಳಿಸಲು.



ಧಾರಾವಾಹಿ - 7

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

- ಇಂಗ್ಲೀಷ್ ಮೂಲ : ಡಾ॥ ಎನ್.ರಮೇಶನ್

- ಕನ್ನಡಾನುವಾದ : ದಿ॥ ಬಿ.ಎನ್. ಶ್ರೀನಿವಾಸನ್

## ನಂತರದ ಚೋಳ ಸಾಮ್ರಾಟರು :

ಚಿತ್ತೂರು ಜಿಲ್ಲೆಯೊಡನೆ ಚೋಳರಿಗಿದ್ದ ಸಂಬಂಧ ಮತ್ತೂ ಹಲವು ದಶಕಗಳ ಕಾಲ ಮುಂದುವರಿಯಿತು. ಮೂರನೇ ಕುಲೋತ್ತುಂಗ ಚೋಳನು (ಕ್ರಿ.ಶ.1178-1218) ಅನೇಕ ವಿರೋಧಗಳನ್ನು ಎದುರಿಸಿಯೂ ಸಾಮ್ರಾಜ್ಯದ ಏಕತೆಯನ್ನು ಕಾಪಾಡಿಕೊಂಡು ಬಂದ. ಈ ಕಾಲದಲ್ಲಿ ಚಿತ್ತೂರು,ಚೆಂಗಲ್ಪಟ್ಟು,ಎರಡು ಆರ್ಕಾಡು ಜಿಲ್ಲೆಗಳನ್ನು ಆಳಿದ ಶಂಭುವರಾಯರು,ಕಾಡವರಾಯರು,ಚೇದಿರಾಯರು,ಯಾದವರಾಯರು ಸಾಮಂತ ರಲ್ಲಿ ಪ್ರಬಲರಾಗಿದ್ದರು. ಕುಲೋತ್ತುಂಗನ ಆಳ್ವಿಕೆಯ ಕಾಲದ ಶಾಸನಗಳಲ್ಲಿ ಹೆಸರಿಸಲಾದ ಸಾಮಂತರ ಸಂಖ್ಯೆ ಇಲ್ಲಿನ ತ್ವರಿತ ಪರಿವರ್ತನ ಗತಿಯು ಹೇಗೆ ಹೀನಾಯವಾಗುತ್ತಿದ್ದಿತೆಂದು ಸೂಚಿಸುತ್ತದೆ. ಅವನ ನಂತರದ ಮೂರನೇ ರಾಜರಾಜನ (ಕ್ರಿ.ಶ.1216-1260) ಆಳ್ವಿಕೆ ನಿರಂತರ ವಿರೋಧಗಳಿಂದ ತುಂಬಿದ್ದಿತು.ಅವನ ಆಳ್ವಿಕೆಯ 29 ನೇ ವರ್ಷದ ವರೆಗಿನ ಶಾಸನಗಳು ಚಿತ್ತೂರು ಹಾಗೂ ನೆರೆಯ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಇದರಿಂದಾಗಿ ಇಡೀ ಚಿತ್ತೂರು ಜಿಲ್ಲೆಯ ಮೇಲೆ ಚೋಳರ ಪ್ರಭುತ್ವ ಮುಂದುವರಿಯಿತೆಂದು ಹೇಳಬರುತ್ತದೆ. ಕಡೆಯ ಚೋಳರಾಜನಾದ ಮೂರನೇ ರಾಜೇಂದ್ರನ (ಕ್ರಿ.ಶ.1246-1279) ಆಡಳಿತದಲ್ಲಿ ಚೋಳರ ಪ್ರಭುತ್ವ ಕ್ಷೀಣವಾಗಿ,ತೆಲುಗುಪಲ್ಲವ ವಿಜಯಗಂಡ ಗೋಪಾಲನೂ,ಪಾಂಡ್ಯರ ಸನ್ನಿಹಿತನಾದ ಕೊಪ್ಪೆರುಂಜಿಂಗನೂ ತೊಂಡಮಂಡಲದಲ್ಲಿ ಕ್ರಮವಾಗಿ ಉತ್ತರ ದಕ್ಷಿಣ ಭಾಗಗಳನ್ನು ಹಂಚಿಕೊಂಡಿದ್ದಂತೆ ಕಂಡುಬರುತ್ತದೆ.

## ಪಾಂಡ್ಯರು :

ನಂತರ ಪ್ರವರ್ಧಮಾನಕ್ಕೆ ಬಂದದ್ದು ದಕ್ಷಿದಲ್ಲಿ ಪಾಂಡ್ಯರು ಹೊಯ್ಸಳರು ಹಾಗೂ ಉತ್ತರದಲ್ಲಿ ಕಾಕತೀಯ, ಯಾದವರುಗಳ ರಾಜ್ಯಗಳು. ಕಿರಿಯ ಬಣಗಳಾದ ನೆಲ್ಲೂರಿನ ತೆಲುಗು ಚೋಳರು ಮುಂತಾದವರು ಮುಖ್ಯಬಣಗಳ ವಶವರ್ತಿಗಳಾಗಿದ್ದರು.ಒಂದನೇ ಜಟಾವರ್ಮ ಸುಂದರ ಪಾಂಡ್ಯನ ಸಿಂಹಾಸನಾರೋಹಣ (ಕ್ರಿ.ಶ.1251) ಒಂದು ಪ್ರಮುಖ ಘಟ್ಟ.ಅವನೊಬ್ಬ ಹೆಸರಾಂತ ಯೋಧನೂ,ಆಕ್ರಾಮಕನೂ ಆಗಿದ್ದು,ಪಾಂಡ್ಯರಾಜ್ಯ ಉನ್ನತಿಯನ್ನು ಪಡೆಯಿತು.ತನ್ನ ಆಳ್ವಿಕೆಯ ಆರಂಭದಲ್ಲಿಯೇ ಜಟಾವರ್ಮನು ಹೆಚ್ಚು ಭೂಭಾಗವನ್ನು ಆಕ್ರಮಿಸಿ ನೆಲ್ಲೂರಿಗಿಂತಲೂ ಆಚೆಗೆ ರಾಜ್ಯವನ್ನು ವಿಸ್ತರಿಸಿದನು.ಶ್ರೀಕಾಳಹಸ್ತಿಯ ಮಣಿಕಂಠೇಶ್ವರ ಆಲಯದ ಎದುರಿನ ಶಾಸನದ ಪ್ರಕಾರ ಕಾಕತೀಯ ಗಜಪತಿಯೊಡನೆಯೂ ಇವನು ಘರ್ಷಣೆ ಹೊಂದಿದ. ಈ ಜಿಲ್ಲೆಯಲ್ಲಿ ಇವನ ಐದು ಶಾಸನಗಳು ಕಂಡುಬಂದಿವೆ, ಜಿಲ್ಲೆಯ ಶಾಸನಗಳಲ್ಲಿ ದೊರೆಯುವ ಇನ್ನೊಬ್ಬ ಪಾಂಡ್ಯ ರಾಜನೆಂದರೆ ಒಂದನೇ ಮಾರವರ್ಮ ಕುಲಶೇಖರ (ಕ್ರಿ.ಶ.1268-1308) ಇವನು ಮೂರನೇ ರಾಜೇಂದ್ರ ಚೋಳನೊಡನೆ ಸೇರಿದ ಹೊಯ್ಸಳ ರಾಮನಾಥನೊಡನೆ ಯುದ್ಧ ಮಾಡಿ ಇಬ್ಬರನ್ನೂ

ಸೋಲಿಸಿ ಅವರ ರಾಜ್ಯವನ್ನು ವಶಪಡಿಸಿಕೊಂಡ. ಇಲ್ಲಿ ಸೋತ ರಾಮನಾಥನು ಇವನ ಸೋದರ ಮೂರನೇ ನರಸಿಂಹನ ವಿರುದ್ಧ ಯುದ್ಧಮಾಡಿ ಸ್ವಲ್ಪ ರಾಜ್ಯವನ್ನು ವಶಪಡಿಸಿಕೊಂಡ. ಪುಂಗನೂರಿನಲ್ಲಿ ಇವನ ಆಳ್ವಿಕೆಯ 38 ನೇ ವರ್ಷದ (ಕ್ರಿ.ಶ.1293) ಒಂದು ಶಾಸನ ದೊರೆತಿದ್ದು,ಅದು ವಾಮನವನಂಕುಟ್ಟು ಪೆರುಮಾಳ್ ಎಂಬುವಲ್ಲಿನ ಕರುಮಾನಿಕ್ಕತ್ತಾಳ್ವಾರ್ ದೇವಾಲಯಕ್ಕೆ ನಾಲ್ಕು ದಂಡದ ಜಮೀನನ್ನು ನೀಡಿದ್ದನ್ನು ದಾಖಲಿಸುತ್ತದೆ.

ಹದಿಮೂರನೇ ಶತಾಬ್ದಿಯ ಮಧ್ಯದಲ್ಲಿ ಚೋಳರ ಪ್ರಾಬಲ್ಯ ತಗ್ಗಿ ಒಂದನೇ ಮಾರವರ್ಮ ಸುಂದರ ಪಾಂಡ್ಯನ ಪ್ರಾಬಲ್ಯ ಹೆಚ್ಚಿತು.ಈತ ತೊಂಡಮಂಡಲವನ್ನು ಹಿಡಿದು ಚೋಳರನ್ನು ಸದೆಬಡಿದು ನೆಲ್ಲೂರಿನವರೆಗೂ ದಂಡೆತ್ತಿ ಅಲ್ಲಿ ವೀರಾಭಿಷೇಕವನ್ನು ಆಚರಿಸಿದ. ತಿರುಮಲೆಯ ಆಲಯದಲ್ಲಿ ಪಾಂಡ್ಯರಾಜರ ಹಲವು ಶಾಸನಗಳಿವೆ.(ಟಿ.ಟಿ.127,164,172,175,231, 239, 241,140)

## ಯಾದವರಾಯರು-

ತೊಂಡಮಂಡಲದ ಪೂರ್ವ ಹಾಗೂ ಉತ್ತರ ಭಾಗಗಳಲ್ಲಿ ಪ್ರಭಾವಶಾಲಿಗಳಾಗಿದ್ದ ಸ್ಥಳೀಯ ಮನೆತನದವರು ಯಾದವರಾಯರು.ಈ ಮನೆತನದ ಮೂಲ ಪುರುಷ ತಿರುಕಾಳತ್ತಿದೇವ ಯಾದವರಾಯ.ಇವನು ಚಾಳುಕ್ಯ ನಾರಾಯಣ ಎಂಬ ಬಿರುದನ್ನು ಹೊಂದಿದ್ದನ್ನು ನೋಡಿದರೆ ಪೂರ್ವ ಚಾಳುಕ್ಯರೊಡನೆ ಸಂಬಂಧ ಹೊಂದಿ ವೆಂಗಿಯ ಸ್ವಲ್ಪ ಭಾಗವನ್ನು ಅವರಿಂದ ಪಡೆದಿದ್ದನೆಂದು ತೋರುತ್ತದೆ. ಇವನು ತೆಲುಗು ಚೋಳರೊಡನೆ ವೈವಾಹಿಕ ಸಂಬಂಧ ಬೆಳಿಸಿಕೊಂಡು ಹೆಚ್ಚು ಪ್ರಭಾವ ಶಾಲಿಯಾದ. ಇವನ ನಂತರ ಇವನ ಮಗ ವೀರರಾಕ್ಷಸ ಯಾದವರಾಯನೂ,ತದನಂತರ ವೀರನರಸಿಂಗ ಯಾದವರಾಯನೂ ಬಂದರು.ಈತ ಐವತ್ತೊಂದು ವರ್ಷ ರಾಜ್ಯಭಾರಮಾಡಿದ.ಚೋಳರಾಜ ಮೂರನೇ ರಾಜ ರಾಜನೊಡನೆ ಸೇರಿ ಕೊಪ್ಪರಂಜಿಂಗನ ಮೇಲೆ ಯುದ್ಧ ಮಾಡಿದ. ಈತ ಹಿರಿಯಕಾಡವರಾಯನಾದ ಅಳಗಿಯಸಿಯನ್‌ನೊಡನೆಯೂ ಘರ್ಷಣೆಗೊಂಡ. ಜಟಾವರ್ಮ ಸುಂದರಪಾಂಡ್ಯನು ಯುದ್ಧದಲ್ಲಿ ಕೊಂದಿರಬಹುದಾದ ತೆಲುಗು ಪಲ್ಲವ ವೀರಗಂಡಗೋಪಾಲನಿಗೆ ಇವನು ದಳಪತಿಯಾಗಿದ್ದು ಈ ವಂಶದ ಇನ್ನೊಬ್ಬ ಎಂದರೆ ತಿರುವೆಂಕಟನಾಥ ಯಾದವರಾಯ.ಈತ ಕ್ರಿ.ಶ.1336-37 ರಿಂದ ಸುಮಾರು ಹದಿನೈದು ವರ್ಷ ಆಳ್ವಿಕೆ ನಡೆಸಿದ. ತಿರುವೆಂಕಟನಾಥ ಯಾದವ ರಾಯನು ತನ್ನ ಸೇನಾಧಿಪತಿಯಾದ ಸಿಂಗಯ ದಣ್ಣಾಯಕನ ಕೋರಿಕೆಯ ಮೇರೆಗೆ ಪುಂಗಲೂರು ಗ್ರಾಮದ ಅರ್ಧ ಭಾಗವನ್ನು ತಿರುವೆಂಕಟ ಮುಡೈಯಾನ್ ಆಲಯದಲ್ಲಿ ಆಡಿ ಉತ್ಸವವನ್ನು ನಡೆಸಲು ದತ್ತಿ ನೀಡಿದ. ಈತ ಹೊಯ್ಸಳರ ಮೂರನೇ ಬಲ್ಲಾಳನಿಗೆ ಸಾಮಂತನಾಗಿ,-ವಲ್ಲಾಳದೇವ ವರಿ-ಎಂಬ ಹೆಸರಿನ ತೆರಿಗೆಯನ್ನೆತ್ತಿ ಬಲ್ಲಾಳನಿಗೆ ಕಪ್ಪವನ್ನು ನೀಡುತ್ತಿದ್ದ. ಈತ ತನ್ನ ವಂಶದ ಹಿರಿಯರೊಡನೆ ಅಥವಾ ನಂತರದ ಶ್ರೀರಂಗನಾಥನೊಡನೆ ಹೊಂದಿದ್ದ ಸಂಬಂಧ ಖಚಿತವಾಗಿಲ್ಲ.ಏನೇ ಆದರೂ ತಿರುವೆಂಕಟನಾಥನು ಶ್ರೀರಂಗನಾಥ ಯಾದವ ರಾಯನ ತಂದೆಯೆಂದು ಎಣಿಸಲಾಗಿದೆ.ಈ ಕಾಲದಲ್ಲಿ ಅನೇಕ ತೆರಿಗೆಗಳನ್ನು ವಿಧಿಸಲಾಯಿತು.ಸ್ವರ್ಣತೆರಿಗೆ, ಧಾನ್ಯತೆರಿಗೆ, ಉಚಿತ ಸೇವೆಗಳಿಗಾಗಿ-ಅಮಂಜಿವಗೈ-ತೆರಿಗೆ,ನಾಟ್ಟಾರರ ಪರಿಷತ್ತಿನ ತೆರಿಗೆ, ಮತ್ತು ಇತರ ಹಳೆಯ ಹೊಸ ತೆರಿಗೆಗಳು. ಜಾನುವಾರು ತೆರಿಗೆಗಳೂ,ರಸ್ತೆ ಪರವಾನಗಿ ತೆರಿಗೆಗಳೂ,ವ್ಯಾಪಾರಿಗಳ, ಕೆಲಸಗಾರರ ವೃತ್ತಿ ತೆರಿಗೆಗಳು, ತೋಟಗಾರಿಕೆಯ ತೆರಿಗೆ, ತೊಂಡವಾಡಿಯ ತೆರಿಗೆ,ಮೊದಲಾದವು.ಎರಡು ತೆರಿಗೆಗಳು ರಾಜ ಮಾತೆಯ ಹಾಗೂ ಯುವರಾಜನ ಸಂಕ್ಷೇಮಕ್ಕೆ ಸಂ ಬಂಧಿಸಿದವು. ರಾಜ ಯುದ್ಧದಲ್ಲಿ ಶತ್ರುಗಳ ಸೆರೆ ಸಿಕ್ಕಾಗ ನೀಡುವ ಬಿಡುಗಡೆ ಧನದ ತೆರಿಗೆಯು ರಾಜನಿಗಾಗಿ ನೀಡುತ್ತಿದ್ದ ಕಾಣಿಕೆಯಾಗಿತ್ತು.

ಶ್ರೀರಂಗನಾಥ ಯಾದವರಾಯನು ಕ್ರಿ.ಶ. 1336-37ರಲ್ಲಿ ರಾಜನಾಗಿ ಸುಮಾರು 20 ವರ್ಷಗಳಕಾಲ ಆಳಿದನು.ವಿಜಯನಗರ ರಾಜ್ಯ ಸ್ಥಾಪನೆಯಾದನಂತರ ಈತನು ತಾನೇ ಸ್ವತಃ ವಿಜಯನಗರದ ಆಶ್ರಿತನಾಗಿ ಒಂದನೇ ಹರಿಹರನ ಸಾಮಂತನಾದನು. ಈತನು ತನ್ನ ಆಜ್ಞೆಯನ್ನು ಮೀರಿದವರ ವಿರುದ್ಧ ಯುದ್ಧಮಾಡಿ ಅವರನ್ನು ನಗರಚ್ಯುತರನ್ನಾಗಿಸಿ ಅರಣ್ಯಗಳಿಗೆ ಓಡುವಂತೆ ಮಾಡುತ್ತಿದ್ದನಂತೆ. ಈ ಕಾಲವೆಲ್ಲವೂ ರಾಜಕೀಯ ರಂಗದ ಏಳುಬೀಳುಗಳಲ್ಲಿ ತುಂಬಿದ್ದರಿಂದಾಗಿ ಈತ ತನ್ನ ಮೇಲ್ಮೆಯನ್ನು ಸ್ಥಾಪಿಸಲೆಂದೋ,ಅಥವಾ ವಿಜಯನಗರದ ಪರವಾಗಿಯೋ ಇಂತಹ ಯುದ್ಧಗಳಲ್ಲಿ ಭಾಗವಹಿಸಿದ್ದಿರಬೇಕು.

ಹದಿಮೂರನೇ ಶತಾಬ್ದಿಯ ಕೊನೆಗೆ ಆರಂಭವಾದ ದೆಹಲಿ ಸುಲ್ತಾನರ ಧಾಳಿಗಳು ದಕ್ಷಿಣದ ನಾಲ್ಕೂ ರಾಜ್ಯಗಳನ್ನು ಬುಡಮೇಲಾಗಿಸಿ,ಉಲ್ಲೋಲಕಲ್ಲೋಲ ವನ್ನುಂಟಾಗಿಸಿ ವಿಜಯನಗರ,ಬಹಮನಿ ರಾಜ್ಯಗಳ ಉದಯವಾಗಿ ಹದಿನಾಲ್ಕನೆಯ ಶತಕದ ಮಧ್ಯದಲ್ಲಿ ವಿಜಯನಗರ, ಬಹುಮನಿ ರಾಜ್ಯದ ಅಂತ್ಯದವರೆಗೂ ವಿಜಯ ನಗರಕ್ಕೂ ಬಹುಮನಿ ರಾಜ್ಯಗಳಿಗೂ ತಾಕಲಾಟ ವಿದ್ದಿತು. ಕೃಷ್ಣಾ-ತುಂಗಭದ್ರಾ ನದಿಗಳ-ದೋ ಆಬ್- ಪ್ರದೇಶ ಇವರ ಘರ್ಷಣೆಯ ಕಾರಣವಾಗಿತ್ತು.ಬಹುಮನಿ ರಾಜ್ಯ ಕ್ರಿ.ಶ. 1538 ರಲ್ಲಿ ಕೊನೆಗೊಂಡಿತಾದರೂ ಅದಕ್ಕೂ ಬಹಳ ಹಿಂದೆಯೇ ಬಹಮನಿ ಸುಲ್ತಾನ ತನ್ನ ರಾಜ್ಯದ ಭಾಗಗಳ ರಾಜ್ಯಪಾಲರ ಮೇಲಿನ ಹಿಡಿತವನ್ನು ಕಳೆದುಕೊಂಡಿದ್ದ.

(ಮುಂದುವರಿಯುವುದು)



ತಿರುಮಲೆ
ಶ್ರೀವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು
2021 ಅಕ್ಟೋಬರ್ 07 ರಿಂದ 15 ರ ವರೆಗೆ



08-10-2021
ಶುಕ್ರವಾರ
ರಾತ್ರಿ : ಹಂಸವಾಹನ



09-10-2021
ಶನಿವಾರ
ಹಗಲು : ಸಿಂಹವಾಹನ



09-10-2021 ಶನಿವಾರ
ರಾತ್ರಿ : ಮುತ್ತಿನಚಪ್ಪರವಾಹನ



10-10-2021 ಭಾನುವಾರ
ಹಗಲು : ಕಲ್ಪವೃಕ್ಷವಾಹನ



ತಿರುಮಲೆ
ಶ್ರೀವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು
2021 ಅಕ್ಟೋಬರ್ 07 ರಿಂದ 15 ರ ವರೆಗೆ



10-10-2021
ಭಾನುವಾರ
ರಾತ್ರಿ:
ಸರ್ವಭೂಪಾಲವಾಹನ



11-10-2021
ಸೋಮವಾರ
ಹಗಲು : ಪಲ್ಲಕ್ಕಿಯಲ್ಲಿ
ಮೋಹಿನಿ ಅವತಾರೋತ್ಸವ



ತಿರುಮಲೆ
ಶ್ರೀವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು
2021 ಅಕ್ಟೋಬರ್ 07 ರಿಂದ 15 ರ ವರೆಗೆ



12-10-2021
ಮಂಗಳವಾರ
ಹಗಲು :
ಹನುಮದ್ವಾಹನ



12-10-2021
ಮಂಗಳವಾರ
ರಾತ್ರಿ:
ಗಜವಾಹನ



**ತಿರುಮಲೆ**
**ಶ್ರೀವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು**
**2021 ಅಕ್ಟೋಬರ್ 07 ರಿಂದ 15 ರ ವರೆಗೆ**



**13-10-2021**
**ಬುಧವಾರ**
**ಹಗಲು :**
**ಸೂರ್ಯಪ್ರಭವಾಹನ**



**13-10-2021**
**ಬುಧವಾರ**
**ರಾತ್ರಿ:**
**ಚಂದ್ರಪ್ರಭವಾಹನ**

# ನವರಾತ್ರಿ ಸಂಭ್ರಮ

- ಶ್ರೀಮತಿ. ಮೀರಾ.ಪ್ರ.ಜೋಷಿ



ನವರಾತ್ರಿಯು ದೇವಿಯನ್ನು ಆರಾಧಿಸುವ ಹಿಂದೂ ಧರ್ಮದ ಹಬ್ಬ ಇದನ್ನು ಕರ್ನಾಟಕದಲ್ಲಿ ದಸರಾ ಎಂದು ಕರೆಯುತ್ತಾರೆ. ಪಶ್ಚಿಮ ಬಂಗಾಳದಲ್ಲಿ ಈ ಹಬ್ಬವನ್ನು ದುರ್ಗಾ ಪೂಜೆ ಎಂದು ಆಚರಿಸಲಾಗುತ್ತದೆ. ನವರಾತ್ರಿಯ ನವ ಅಂದರೆ ಒಂಬತ್ತು ದಿನ, ಒಂಬತ್ತು ವಿವಿಧ ದೇವತಾರೂಪವನ್ನು ಆರಾಧಿಸುತ್ತೇವೆ. ಹತ್ತನೇಯ ದಿನ ವಿಜಯದಶಮಿ ಆ ದಿನ ಶಮೀವೃಕ್ಷ ಅಥವಾ ಬನ್ನೀಮರಕ್ಕೆ ಪೂಜೆ ಸಲ್ಲಿಸಿ ಆ ಬನ್ನಿಯನ್ನು ದೇವರಿಗೆ ಅರ್ಪಿಸಿ ಹಿರಿಯರಿಗೆ, ಆತ್ಮೀಯರಿಗೆ ನೀಡಿ ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆದರೆ ಆತ್ಮೀಯರು, ಬಂಧು, ಬಳಗ, ಸ್ನೇಹಿತರಿಗೆ ನೀಡಿ ಬನ್ನಿ ತೊಗೊಂಡು ಬಂಗಾರದ ಕೊನೆಯವರೆಗೂ ಇರೋಣವೆಂದು ಕೇಳುತ್ತೇವೆ. ಬನ್ನಿ ಎಲೆಗಳು ಬಂಗಾರದ ಸಮಾನ ಎನ್ನುವ ವಾಡಿಕೆ ನಮ್ಮಲ್ಲಿದೆ. ಇನ್ನೂ ಕೆಲವರು ಬನ್ನಿ ವೃಕ್ಷದಲ್ಲಿ ಗಣೇಶನಿರುತ್ತಾನೆ ಎಂದು ಪೂಜಿಸುವ ಪದ್ಧತಿ ಇಟ್ಟುಕೊಂಡಿದ್ದಾರೆ. ಇದೇ ಹಬ್ಬದಂದು ಮೈಸೂರಿನಲ್ಲಿ ಆನೆಯ ಮೇಲೆ ಚಾಮುಂಡೇಶ್ವರಿ ಮೂರ್ತಿಯ ಮೆರವಣಿಗೆ ಮಾಡಲಾಗುತ್ತದೆ. ಈ ಮೈಸೂರು ದಸರಾ ಉತ್ಸವ ಜಗತ್ಪ್ರಸಿದ್ಧಿ ಪಡೆದಿದೆ. ಈ ಹಬ್ಬ ಆಶ್ವೀಜ ಮಾಸ ಪಾಡ್ಯದಿಂದ ದಶಮಿಯವರಿಗೆ ನಡೆಯುತ್ತದೆ. ಆಂಧ್ರಪ್ರದೇಶ, ಮಹಾರಾಷ್ಟ್ರದಲ್ಲೂ ವಿಜೃಂಭಣೆಯಿಂದ ಆಚರಿಸುತ್ತಾರೆ.

**ವೈಶಿಷ್ಟ**

ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ನವರಾತ್ರಿ ವಿಶೇಷವಾಗಿ ಆಚರಿಸಲಾಗುತ್ತದೆ. ಶಕ್ತಿಯ ಆರಾಧನೆ ಈ ಹಬ್ಬದ ವೈಶಿಷ್ಟವಾಗಿದೆ. ೯ ದಿನಗಳ ಕಾಲ ಆಚರಿಸಿ ವಿಜಯೋತ್ಸವವನ್ನು ಆಚರಿಸುವ ಈ ಹಬ್ಬವನ್ನು ನವರಾತ್ರಿ, ದುರ್ಗೋತ್ಸವ ಎಂದು ಕರೆಯಲಾಗುತ್ತದೆ. ೯ ದಿನ ಆದಿಶಕ್ತಿಯನ್ನು ನವವಿಧದಲ್ಲಿ ಪೂಜಿಸಲಾಗುತ್ತದೆ.

1. ಪಾಡ್ಯದಂದು ಯೋಗನಿದ್ರಾ ದುರ್ಗಾಪೂಜೆ.
2. ಬಿದಿಗೆಯಂದು ದೇವಜಾತ ದುರ್ಗಾಪೂಜೆ.
3. ತದಿಗೆಯಂದು ಮಹಿಷಾಸುರಮರ್ಧಿನಿ ದುರ್ಗಾಪೂಜೆ
4. ಚತುರ್ದಶಿ ಶೈಲಜಾತಾ ದುರ್ಗಾಪೂಜೆ.
5. ಪಂಚಮಿ - ದೂರ್ಮಹಾ ದುರ್ಗಾಪೂಜಾ
6. ಷಷ್ಟಿ - ಚಂಡಮುಂಡಹಾ ದುರ್ಗಾಪೂಜಾ
7. ಸಪ್ತಮಿ - ರಕ್ತಬೀಜ ದುರ್ಗಾಪೂಜಾ
8. ಅಷ್ಟಮಿ - ದುರ್ಗಾಷ್ಟಮಿ
9. ಮಹಾನವಮಿ - ಶುಂಬಹಾ ದುರ್ಗಾಪೂಜಾ

ಸಪ್ತಮಿಯಿಂದ ಮಹಾಕಾಳಿ, ಮಹಾಲಕ್ಷ್ಮಿ, ಮಹಾ ಸರಸ್ವತಿ ಪೂಜೆ ಮಾಡಲಾಗುತ್ತದೆ. ನವರಾತ್ರಿಯಲ್ಲಿ ಸಪ್ತಮಿಗೆ ವಿಶೇಷ ಸ್ಥಾನವಿದೆ. ಸಪ್ತಮಿಯ ಮೂಲಾನಕ್ಷತ್ರದಂದು ಪುಸ್ತಕ, ಪವಿತ್ರ ಗ್ರಂಥಗಳನ್ನು ಚಿನ್ನ, ಬೆಳ್ಳಿ ಇಟ್ಟು ಪೂಜೆ ಮಾಡಲಾಗುತ್ತದೆ. ನವಮಿಯಂದು ಆಯುಧಪೂಜೆ, ದುರ್ಗಾಷ್ಟಮಿಯಂದು ದುರ್ಗೆಯ ಪೂಜೆ ಮಾಡಲಾಗುತ್ತದೆ.



## ಪುರಾಣಗಳಲ್ಲಿ ನವರಾತ್ರಿ

ದುರ್ಗೆಯು ಮಹಿಷಾಸುರಮರ್ಧಿನಿಯಾಗಿ ಮಹಿಷಾಸುರನೆಂಬ ರಾಕ್ಷಸನನ್ನು ಸಂಹಾರ ಮಾಡಿದಳು. ನವರಾತ್ರಿ ಒಂಬತ್ತು ದಿನಕ್ಕೆ ಸೀಮಿತವಾಗಿದ್ದರೂ ಹತ್ತನೇಯ ದಿನ ದಶಮಿಯಂದು ಮಹಾದುರ್ಗೆ ರಾಕ್ಷಸರನ್ನು ಸಂಹರಿಸಿ ವಿಜಯ ಸಾಧಿಸಿದ ದಿನವೆಂದೂ ಶ್ರೀರಾಮನು ರಾವಣನನ್ನು ಸಂಹಾರ ಮಾಡಿದ್ದು ವಿಜಯದಶಮಿಯಂದು, ಪಾಂಡವರು ಅಜ್ಞಾತವಾಸದಲ್ಲಿ ತಮ್ಮ ಆಯುಧಗಳನ್ನು ಬನ್ನಿ ಮರದಲ್ಲಿ ಮುಚ್ಚಿಟ್ಟು ದಶಮಿಯ ದಿನ ಬನ್ನಿ ಗಿಡದಲ್ಲಿ ಇಟ್ಟ ಆಯುಧಗಳೊಂದಿಗೆ ಕುರುಕ್ಷೇತ್ರ ಯುದ್ಧದಲ್ಲಿ ಕೌರವರ ವಿರುದ್ಧ ವಿಜಯ ಸಾಧಿಸಿದ್ದರು ಎಂದು ಹೇಳುತ್ತಾರೆ. ಹೀಗಾಗಿ ವಿಜಯವನ್ನು ಸಾಧಿಸಿದ ವಿಜಯದಶಮಿಯಂದು ಕರೆದು ಆಚರಿಸುವ ಪದ್ಧತಿ ರೂಢಿಯಲ್ಲಿದೆ.



## ದಸರಾ ಶಬ್ಧದ ಉತ್ಪತ್ತಿ

ದಸರಾ ಎನ್ನುವ ಶಬ್ದ ದಶಹರಾ ಎಂದೂ ಇದೆ. ದಸರಾದ ಮೊದಲ ಒಂಬತ್ತು ದಿನಗಳೂ ಎಲ್ಲ ದಿಕ್ಕುಗಳೂ ದೇವಿಯ ಶಕ್ತಿಯಿಂದ ಸಂಪನ್ನವಾಗಿರುತ್ತವೆ.ಎಲ್ಲ ದಿಕ್ಕುಗಳಿಂದಲೂ ವಿಜಯ ದೊರಕಿರುತ್ತದೆ.

## ಆಯುಧ ಪೂಜೆ

ಮೊದಲು ರಾಜರು, ಸಾಮಂತರು ಸರದಾರರು ತಮ್ಮ ಶಸ್ತ್ರಗಳನ್ನು ಸ್ವಚ್ಛಗೊಳಿಸಿ ಸಂಭ್ರಮದಿಂದ ಪೂಜಿಸುತ್ತಿದ್ದರು. ಈಗ ರೈತಾಪಿ ಜನ ಉಳಿದ ಜನ ತಾವು ಉಪಯೋಗಿಸುವ ವಾಹನಗಳು ಮನೆಯಲ್ಲಿಯ ಗೃಹೋಪಯೋಗಿ ವಸ್ತುಗಳನ್ನು ಪೂಜಿಸುವ ಪದ್ಧತಿಯಲ್ಲದೇ ತಾವು ಕೆಲಸ ಮಾಡುವ ಕಾರ್ಯಾಲಯದಲ್ಲಿ ಅಲ್ಲಿಯ ವಸ್ತುಗಳನ್ನು ಪೂಜಿಸಿ ಆರಾಧಿಸುವ ವಾಡಿಕೆ ನಮ್ಮಲ್ಲಿ ಬೆಳೆದು ಬಂದಿದೆ. ನವರಾತ್ರಿಯ ಒಂಬತ್ತು ದಿನ ಶಕ್ತಿಯ ಉಪಾಸನೆ ಮಾಡಿ ದಶಮಿಯಂದು ವಿಜಯೋತ್ಸವ ಆಚರಿಸಬೇಕು ಇದನ್ನೇ ದಸರಾ, ವಿಜಯದಶಮಿ, ನವರಾತ್ರಿ ಎಂದು ಕರೆಯುತ್ತಾರೆ.



## ನವರಾತ್ರಿ ವ್ರತ ಆಚರಿಸುವ ಪದ್ಧತಿ

ಅಖಂಡ ಎಣ್ಣೆ,ತುಪ್ಪದ ದೀಪದ ಪ್ರಜ್ವಲನೆ ಒಂಬತ್ತು ದಿನಗಳವರೆಗೆ ಸತತ ದೀಪ ಇಡುವುದು.ದೇವಿ ಮಹಾತ್ಮೆ, ವೆಂಕಟೇಶ್ವರ ಮಹಾತ್ಮೆ, ಸಪ್ತಶತಿ ಪಾಠ,ದೇವಿ ಭಾಗವತ, ಲಲಿತಾಪೂಜೆ,







## ಹನುಮ ವಾಹನ

ತ್ರೇತಾಯುಗದಲ್ಲಿ ಶ್ರೀರಾಮನು,
ದ್ವಾಪರಯುಗದಲ್ಲಿ ಶ್ರೀಕೃಷ್ಣನು
ಕಲಿಯುಗದಲ್ಲಿ ಶ್ರೀವೇಂಕ
ಟೇಶ್ವರನು ಒಂದೇ ಎಂದು
ತಿಳಿಸಲು ಹನುಮನ ಭುಜಗಳ
ಮೇಲೆ ಕುಳಿತು ಆರನೇ ದಿನದ
ಬೆಳಗ್ಗೆ ತಿರುಬೀದಿಗಳಲ್ಲಿ
ಸಂಚರಿಸುತ್ತಾನೆ ಶ್ರೀನಿವಾಸನು.







ಕುಂಕುಮಾರ್ಚನೆ, ಸರಸ್ವತಿ ಪೂಜೆ, ಅವರವರ ಶಕ್ತ್ಯಾನುಸಾರ ನವರಾತ್ರಿ ಮಹೋತ್ಸವ ಆಚರಿಸುತ್ತಾರೆ.

**ನವರಾತ್ರಿ ಆಚರಣೆಯ ಫಲ**

ದೇವಿಯ ಉಪಾಸನೆ, ಶ್ರದ್ಧೆಯಿಂದ ಮಾಡಿದರೆ ದೇವಿ ತತ್ವದ ಲಾಭವಾಗುತ್ತದೆ. ನವರಾತ್ರಿಯ ಮೊದಲ ಮೂರು ದಿನಗಳಂದು ತಮೋಗುಣ ಕಡಿಮೆ ಮಾಡಲು ತಮೋಗುಣಿಯ ಮಹಾಕಾಳಿಯನ್ನು ನಂತರದ ಮೂರುದಿನಗಳಂದು ರಜೋಗುಣವನ್ನು ವೃದ್ಧಿಸಲು ಮಹಾಲಕ್ಷ್ಮಿಯ ಮತ್ತು ಕೊನೆಯ ಮೂರು ದಿನಗಳಂದು ಸಾಧನೆಯನ್ನು ತೀವ್ರ ಮಾಡಲು ಸತ್ವಗುಣಿ ಮಹಾಸರಸ್ವತಿಯ ಪೂಜೆ ಮಾಡುತ್ತಾರೆ.

ಎಲ್ಲ ದೇವಸ್ಥಾನಗಳಲ್ಲಿ ಒಂದೊಂದು ದಿನ ಒಂದು ಅಲಂಕಾರ ಮಾಡಿ ಪೂಜಿಸಲಾಗುತ್ತದೆ. ಈ ವರ್ಷವೂ ಸಂಭ್ರಮದಿಂದ ನವರಾತ್ರಿ ಆಚರಿಸಿ ಭಕ್ತಿಪೂರ್ವಕವಾಗಿ ನಮಸ್ಕರಿಸಿ ಬನ್ನಿಯನ್ನು ವಿಜಯದಶಮಿಯಂದು ದೇವರಿಗೆ ಬಂಗಾರವೆಂದು ಅರ್ಪಿಸಿ ಹಿರಿಯರ,ಆತ್ಮೀಯರ ಆಶೀರ್ವಾದ ಬೇಡೋಣ.

**ನಾಡಿನ ಜನತೆಗೆ ನವರಾತ್ರಿಯ ಶುಭಾಶಯಗಳು.**





# ತುಂಬುರು ತೀರ್ಥ ಮಹಿಮೆ

ಎಸ್. ವಾದಿರಾಜ

ಪ್ರಾಚೀನ ಬರ್ಹಿ ಒಬ್ಬ ಮಹಾರಾಜ. ಅವನಿಗೆ ಯಜ್ಞಗಳನ್ನು ಮಾಡುವ ಅಭಿಲಾಷೆ.ಪ್ರಪಂಚದಲ್ಲೆಲ್ಲಾ ದರ್ಭೆಗಳನ್ನು ಬೆಳೆಸಿ ಯಾವಾಗಲೂ ಯಜ್ಞಗಳನ್ನು ಮಾಡುವುದನ್ನೇ ಕರ್ತವ್ಯವನ್ನಾಗಿ ಇರಿಸಿಕೊಂಡಿದ್ದ ಕರ್ಮಯೋಗಿ.

ಒಂದು ದಿನ ಗಾನ ಗಂಧರ್ವನಾದ ತುಂಬುರನು ಆ ರಾಜ್ಯಕ್ಕೆ ಬಂದು,ಆ ರಾಜ ಮಾಡಿದ ಮಾಡುತ್ತಿರುವ ಯಜ್ಞಗಳನ್ನು ನೋಡಿ, ಬಹಳ ಸಂತೋಷಗೊಂಡು ಪ್ರಾಚೀನ ಬರ್ಹಿಯನ್ನು ನಿನ್ನಂತಹ ಮಹಾರಾಜ ಈ ಭೂಮಂಡಲದಲ್ಲೇ ಇಲ್ಲ! ಎಷ್ಟು ಯಜ್ಞಗಳನ್ನು ಮಾಡಿರುವೆ! ನಿನ್ನಂತಹ ಮಹಾತ್ಮ ಮತ್ತೊಬ್ಬನಿಲ್ಲ. ನಿನ್ನಂತೆ ದಾನಗಳನ್ನು ಮಾಡಿದವರಾಗಲೀ, ಧರ್ಮಗಳನ್ನು ಮಾಡಿದ ವರಾಗಲೀ, ಬ್ರಾಹ್ಮಣರಿಗೆ ಸಂತರ್ಪಣೆಯನ್ನು ಮಾಡಿದವರಾಗಲೀ ಮತ್ತೊಬ್ಬನಿಲ್ಲ. ನೀನು ವೀರ, ಶೂರ, ದಾನ ಶಿಖಾಮಣಿ ಎಂದು ಹೊಗಳಿದ.

ಪ್ರಾಚೀನ ಬರ್ಹಿಯನ್ನು ತುಂಬುರರು ಅಷ್ಟು ಹೊಗಳುವುದಕ್ಕೆ ಇನ್ನೊಂದು ಕಾರಣವೂ ಇದೆ. ಅದೇನೆಂದರೆ ಆ ರಾಜನ ಬಳಿ ಬಂದು ವಿಶೇಷ ವೀಣೆಯಿತ್ತು.ಅದು ನವರತ್ನ ಖಚಿತ, ಮಣಿ ಮಾಣಿಕ್ಯಗಳನ್ನು ಹುದುಗಿಸಿರುವ ಬಹಳ ಅಪರೂಪವಾದ, ಬೆಲೆಬಾಳುವ ಅದ್ಭುತ ವೀಣೆ. ಅದನ್ನು ಪಡೆಯಲೆಂದೇ ಮಾನವ ಮಾತ್ರನಾದ ಪ್ರಾಚೀನ ಬರ್ಹಿಯನ್ನು, ಗಾನಗಂಧರ್ವರಲ್ಲಿ ಮುಖ್ಯನಾದ ತುಂಬುರನು ಉತ್ಪ್ರೇಕ್ಷೆಗಳಿಂದ ಹೊಗಳಿಕೆ ಗಳಿಂದ ಅವನನ್ನು ಕೀರ್ತಿಸಿದ. ಆ ರೀತಿ ಅವನನ್ನು ಹೊಗಳಿ ಆ ವೀಣೆಯನ್ನು ರಾಜನಿಂದ ಬಹುಮಾನವಾಗಿ ಪಡೆದುಕೊಂಡ.



ನಂತರ ಆ ವೀಣೆಯನ್ನು ತೆಗೆದುಕೊಂಡು, ನಾರದ ಮುನಿಯ ಬಳಿಗೆ ಬಂದ, ಆ ವೀಣೆಯನ್ನು ನೋಡಿ, ನಡೆದ ವಿಷಯವನ್ನೆಲ್ಲಾ ತಿಳಿದು ಕೊಂಡ ನಾರದರಿಗೆ ಬಹಳ ಕೋಪ ಬಂತು.

“ಅಯ್ಯೋ, ಭಗವಂತನನ್ನು ಹೊಗಳಬೇಕಾದ. ಸೇವಿಸಬೇಕಾದ ನಾವು, ಮಾನವ ಮಾತ್ರನಾದ ಪ್ರಾಚೀನ ಬರ್ಹಿಯನ್ನು ಹೊಗಳಿದ್ದೇಕೆ? ಅದರಲ್ಲೂ ಕಾಮ್ಯಾಪೇಕ್ಷೆಯಿಂದ ನೀನು ಮಾಡಿದ ಕೆಲಸಕ್ಕೆ ನೀನು ಶಿಕ್ಷಾರ್ಹ, ಆಕಾಶ ಮಾರ್ಗದಲ್ಲಿ ಸಂಚರಿಸುವಂತಹ ಶಕ್ತಿಯುಳ್ಳ ಗಂಧರ್ವ ನೀನು. ನಮ್ಮ ವಿದ್ಯೆ, ಪ್ರತಿಭೆ, ಶಕ್ತಿಯುಕ್ತಿಗಳು ಭಗವಂತನ ಆರಾಧನೆಗೆ ಹೊರತು. ಉದರ ಪೋಷಣೆಗಾಗಿಯೋ,ಸ್ವಲಾಭಾಪೇಕ್ಷೆಗಾಗಿಯೋ ಅಲ್ಲ. ಹೀಗೆ ಲಾಭಕ್ಕಾಗಿ ನರಸ್ತುತಿ ಮಾಡಿದ ನೀನು ಆಕಾಶ ಮಾರ್ಗದಲ್ಲಿ

ಹೋಗುವ ಅರ್ಹತೆ ಕಳೆದುಕೊಂಡು ಭೂಲೋಕದಲ್ಲಿ ಜನ್ಮಿಸು” ಎಂದು ಶಪಿಸಿದ. ಆ ನಾರದ ಶಾಪ, ಒಂದು ರೀತಿಯಲ್ಲಿ ತುಂಬುರನನ್ನು ಉದ್ಧಾರ ಮಾಡಿತು...



ತುಂಬುರನು ಸ್ವತಃ ಸಾತ್ವಿಕನೂ, ಭಕ್ತನೂ ಯೋಗ್ಯನೂ.... ಹೌದು.... ಪ್ರಾರಬ್ಧದಿಂದಲೋ, ಕ್ಷಣಿಕ ಅಜ್ಞಾನದಿಂದಲೋ,ತಾತ್ಕಾಲಿಕವಾದ ಅಸುರಾವೇಶದಿಂದಲೋ, ಆ ತಪ್ಪು ಮಾಡಿದರೂ ದೈವಾನುಗ್ರಹವಿದ್ದುದರಿಂದ ಭೂಲೋಕದಲ್ಲಿ ಶ್ರೀ ವೆಂಕಟಾಚಲದಲ್ಲಿ ಘೋಣತೀರ್ಥದ ಬಳಿ ಬಂದು ಬಿದ್ದ. ಅಲ್ಲಿ ಪ್ರತೀ ದಿನ ತೀರ್ಥದಲ್ಲಿ ಸ್ನಾನ ಮಾಡಿ ತಪಸ್ಸು ಮಾಡಿಕೊಳ್ಳುತ್ತಿದ್ದ.

ಹೀಗೆ ತೀರ್ಥಸ್ನಾನ, ತಪಸ್ಸುಗಳನ್ನು ಮಾಡುತ್ತಿದ್ದ ತುಂಬುರನಿಗೆ ಫಾಲ್ಗುಣ ಮಾಸದಲ್ಲಿ ಭಗವಂತ ಪ್ರತ್ಯಕ್ಷನಾದ. ಭಗವಂತನೊಬ್ಬನೇ ಅಲ್ಲದೇ ಬ್ರಹ್ಮಾದಿ ದೇವತೆಗಳೂ ಅಲ್ಲಿಗೆ ಬಂದರು. ಅವರೆಲ್ಲರನ್ನೂ ಆ ಘೋಣತೀರ್ಥದಲ್ಲಿ ಸ್ನಾನ ಮಾಡಲು ಭಗವಂತ ಹೇಳುತ್ತಾನೆ. ಅವರೊಂದಿಗೆ ತುಂಬುರನನ್ನೂ ಸ್ನಾನ ಮಾಡಲು ಹೇಳುತ್ತಾನೆ. ಆದರಿಂದ ತುಂಬುರನ ಶಾಪ ವಿಮುಕ್ತಿಯಾಗಿ ಅವನ ಗಂಧರ್ವ ರೂಪ, ಆಕಾಶದಲ್ಲಿ ತಿರುಗಾಡುವ ಶಕ್ತಿ ಇತರ ಗಂಧರ್ವಶಕ್ತಿಗಳು, ಮುಖ್ಯವಾಗಿ ಮಧುರವಾಗಿ ಹಾಡುವ ಶಕ್ತಿ ಪುನಃ ಅವನಿಗೆ ಬರುತ್ತವೆ.

ತುಂಬುರನು ತಾನು ಉದ್ಧಾರವಾದ ಈ ತೀರ್ಥಕ್ಕೆ ತನ್ನ ಹೆಸರು ಇಡಬೇಕೆಂದು ಭಗವಂತನನ್ನು ಪ್ರಾರ್ಥಿಸುತ್ತಾನೆ. ಅಂದಿನಿಂದ ಆ ತೀರ್ಥಕ್ಕೆ ಘೋಣತೀರ್ಥದ ಬದಲು ‘ತುಂಬುರು ತೀರ್ಥ’ ವೆಂಬ ಹೆಸರು ಬಂದಿದೆ.ಆ ರೀತಿ ತುಂಬುರನು ಬಯಸಿದ್ದಕ್ಕೆ ಎರಡು ಕಾರಣಗಳು.

ಒಂದು - ದೇವತೆಗಳು, ಮಹಾತ್ಮರು. ಜ್ಞಾನಿಗಳು, ಈ ತೀರ್ಥದಲ್ಲಿ ಸ್ನಾನ ಮಾಡಿದಾಗ ತನ್ನ ಹೆಸರು ಹೇಳಿಕೊಂಡರೆ, ಅವರ ಪುಣ್ಯದಲ್ಲಿ ಆ ಸ್ವಲ್ಪ ಭಾಗ ತನಗೆ ಬರಲಿ ಎಂದೂ....

ಎರಡನೆಯದಾಗಿ... ತನಗಿಂತಲೂ ಕಡಿಮೆಯವರು, ಅಜ್ಞಾನಿಗಳೂ, ಸ್ನಾನ ಮಾಡಿದರೆ, ತನ್ನ ಹೆಸರನ್ನು ಸ್ಮರಿಸಿದರೆ, ಅವರಿಗೆ ಪುಣ್ಯವನ್ನು ಉಂಟು ಮಾಡುವುದು ಇದು ಬಹಳ ಮಹಿಮಾನ್ವಿತವಾದ ತೀರ್ಥ,ಎಲ್ಲಾ ದೇವತೆಗಳು ಭಗವಂತನ ಸಮಕ್ಷಮದಲ್ಲಿ ಸ್ನಾನ ಮಾಡಿದ ತೀರ್ಥ. ಆ ತೀರ್ಥಕ್ಕೆ ಹೋಗಿ ಸ್ನಾನ ಮಾಡದೇ ಬಂದರೆ ಈ ತೀರ್ಥವನ್ನು ತಿರಸ್ಕರಿಸಿದ್ದಕ್ಕೆ ಪಂಚಮಹಾಪಾತಕಗಳು ಸುತ್ತಿಕೊಳ್ಳುತ್ತವೆಂದು ವರಾಹಪುರಾಣ ಹೇಳುತ್ತದೆ.

ಈ ತುಂಬುರನು ಭಗವಂತನ ಅನುಗ್ರಹವನ್ನು ಮತ್ತೊಮ್ಮೆ ಪಡೆಯುತ್ತಾನೆ. ಒಮ್ಮೆ ಕುಬೇರನ ಆಜ್ಞೆಯ ಪ್ರಕಾರ ರಂಭೆ ಕುಬೇರನ ಬಳಿ ಬರುತ್ತಿದ್ದಾಗ, ದಾರಿಯಲ್ಲಿ ತುಂಬುರನು ಅವಳನ್ನು ನಿಲ್ಲಿಸುತ್ತಾನೆ. ಅವಳು ವಿಷಯ ತಿಳಿಸಿದರೂ ಕೇಳಿಕೊಳ್ಳದೇ



## ಗರುಡವಾಹನ

ಐದನೇ ದಿನದ ರಾತ್ರಿಗೆ ಶ್ರೀವೇಂಕಟಾಚಲಪತಿಗೆ ಲಕ್ಷ್ಮೀಹಾರ, ಸಹಸ್ರನಾಮಹಾರ, ಮಕರಕಂಠಿ ಮುಂತಾದ ನೂರು ಕೆ.ಜಿ.ಗಳ ತೂಕವಿರುವ ಆಭರಣಗಳನ್ನು ಧರಿಸಿ ಗರುಡ ವಾಹನದ ಮೇಲೆ ಕುಳಿತು ಅಂಗರಂಗ ವೈಭವವಾಗಿ ತಿರುಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾನೆ. ಈ ಸಮಯದಲ್ಲಿ ಲಕ್ಷ್ಮೀವಲ್ಲಭನನ್ನು ನೋಡಲು ಸಾವಿರ ಕಣ್ಣುಗಳಿದ್ದರೂ ಸಾಲದು. ಸಂಪತ್ತಿನ ಶಕ್ತಿಯೂ ಮುಂದೆ ಯಾವ ಶಕ್ತಿಯೂ ಸರಿಯಾಗುವುದಿಲ್ಲ ಎಂದು ತಿಳಿಸಿ ಹೇಳಲು ಮಹಾಬಲಶಾಲಿಯಾದ ಗರುತ್ಮಂತನ ಮೇಲೆ ಕುಳಿತು ತನ್ನ ಲಕ್ಷ್ಮೀ ಪತಿತ್ವವನ್ನು ತೋರಿಸುತ್ತಾನೆ.



# ಗಜ ವಾಹನ

ಆರನೇ ದಿನದ ರಾತ್ರಿಗೆ ಗಜವಾಹನಾರೂಢನಾಗಿ ಭಕ್ತರಿಗೆ ದರ್ಶನ ನೀಡುತ್ತಾನೆ. ಆನೆಯು ಲಕ್ಷ್ಮೀದೇವಿಯ ವಾಹನ. ಲಕ್ಷ್ಮೀಪತಿಯನಾದ ಶ್ರೀನಿವಾಸನಿಗೂ ವಾಹನವಾಗಿ ಭಕ್ತ ಜನರಿಗೆ ಕಾಣಿಸುತ್ತಾನೆ. ಭಕ್ತರಿಗೆ ಆನೆಯಷ್ಟು ಭರವಸೆಯನ್ನು ಮೂಡಿಸುತ್ತದೆ.

ಬಂಧಿಸುತ್ತಾನೆ. ಕುಬೇರನು ಕೋಪದಿಂದ ಕದಲಲಾರದ ರಾಕ್ಷಸನಾಗು ಎಂದು ತುಂಬುರನಿಗೆ ಶಾಪ ನೀಡುತ್ತಾನೆ. ಹಾಗೇ ತುಂಬುರನು ವಿರಾಧನೆಂಬ ರಾಕ್ಷಸನಾಗಿ ಹುಟ್ಟುತ್ತಾನೆ. ರಾಮನ ಅನುಗ್ರಹದಿಂದ ಶಾಪ ವಿಮೋಚನೆಯಾಗುತ್ತದೆ. ಮಹಾಭಾರತದಲ್ಲಿ ಸಂಜಯನಾಗಿ ಅವತರಿಸಿ, ಧೃತರಾಷ್ಟ್ರನ ಸಾರಥಿಯಾಗಿದ್ದು, ಭಗವಂತನ ಅನುಗ್ರಹದಿಂದ ದಿವ್ಯ ದೃಷ್ಟಿಯನ್ನು ಪಡೆದು ಕುರುಕ್ಷೇತ್ರದಲ್ಲಿ ನಡೆಯುತ್ತಿದ್ದ ಯುದ್ಧವನ್ನೆಲ್ಲಾ ದೂರದರ್ಶನ ಮಾಡಿ ಧೃತರಾಷ್ಟ್ರನಿಗೆ ವಿವರಿಸುತ್ತಾನೆ.

ಈ ತುಂಬುರು ತೀರ್ಥದ ಮಹಿಮೆಯ ಬಗೆಗೆ ವರಾಹಪುರಾಣದಲ್ಲಿ ಇನ್ನೊಂದು ಸಂಘಟನೆಯನ್ನು ವಿವರಿಸಲಾಗಿದೆ.ಈ ತುಂಬುರು ತೀರ್ಥ ಮಹಿಮೆಯ ಬಗೆಗೆ ಗಾರ್ಗೀಋಷಿ. ದೇವತೆಗಳು ಋಷಿಯನ್ನು ಪ್ರಶ್ನಿಸುತ್ತಾನೆ.

ತುಂಬುರನು ಶಾಪ ವಿಮೋಚನೆಯ ನಂತರ ಒಂದು ಮಾಘಮಾಸದಲ್ಲಿ ಬೆಳಗಿನ ಜಾವವೇ ಎದ್ದು ಮಾಘಸ್ನಾನ ಮಾಡಿ ಪೂಜೆ, ದೇವತಾರ್ಚನೆಗೆ ಸಿದ್ಧನಾಗುತ್ತಾನೆ. ಆದರೆ ತನ್ನ ಹೆಂಡತಿ ಇನ್ನೂ ನಿದ್ರಿಸುತ್ತಿರುವುದನ್ನು ನೋಡಿ, ಅವಳನ್ನು ಎಬ್ಬಿಸಿ ಮಾಘಮಾಸದ ಪವಿತ್ರಸ್ನಾನ ಮಾಡಿ ಪೂಜೆಗೆ ಸಿದ್ಧಗೊಳಿಸಬೇಕೆಂದು ಹೇಳುತ್ತಾನೆ. ಮಾಘಮಾಸದಲ್ಲಿ ಚಳಿ, ಮುಖ್ಯವಾಗಿ ಬೆಳಗಿನ ಜಾವ ಇನ್ನು ಹೆಚ್ಚಾಗಿರುವುದರಿಂದ ಹೆಂಡತಿ ಸ್ವಲ್ಪ ಅಲಸತೆಯನ್ನು ಪ್ರದರ್ಶಿಸುತ್ತಾಳೆ. ಸಕಾಲದಲ್ಲಿ ಎದ್ದು ಸ್ನಾನ ಮಾಡಿ ಪೂಜೆಗೆ ಅಣಿಮಾಡುವುದಿಲ್ಲ. ತುಂಬುರನು ಕೋಪಿಸಿಕೊಂಡು ಅವಳನ್ನು ಕಪ್ಪೆಯಾಗಿ ನೀರಿಲ್ಲದ ಕಡೆ ಇದ್ದು ದುಃಖ ಅನುಭವಿಸು ಎಂದು ಶಾಪ ನೀಡುತ್ತಾನೆ. ಅವಳು ತನ್ನ ತಪ್ಪನ್ನು ಅರಿತು ಪಶ್ಚಾತ್ತಾಪದಿಂದ ಗಂಡನನ್ನು ಶಾಪ ವಿಮೋಚನಾ ಮಾರ್ಗವನ್ನು ತಿಳಿಸಬೇಕೆಂದು ಪ್ರಾರ್ಥಿಸುತ್ತಾಳೆ. ಆಗ ತುಂಬುರನು ಶಾಪ ವಿಮೋಚನಾ ಮಾರ್ಗವನ್ನು ತಿಳಿಸುತ್ತಾನೆ.

ಹಾಗೆ ಅವಳು ಒಂದು ಅಶ್ವತ್ಥವೃಕ್ಷದ ಬೇರುಗಳ ಸಂದಿಯಲ್ಲಿ ನರಕಯಾತನೆಯನ್ನು ಅನುಭವಿಸುತ್ತಾ ಸಾವಿರ ವರ್ಷಗಳ ಕಾಲ ಜಲಧಾರವಿಲ್ಲದೇ ವ್ಯಥೆ ಅನುಭವಿಸುತ್ತಿದ್ದಳು. ಒಂದು ದಿನ ಅಗಸ್ತ್ಯಮುನಿ ಯಾತ್ರೆಗೆ ಹೋಗುತ್ತಾ ಆ ಅಶ್ವತ್ಥವೃಕ್ಷದ ನೆರಳಿನಲ್ಲಿ ತನ್ನ ಶಿಷ್ಯರಿಗೆ ವೇಂಕಟಾಚಲದಲ್ಲಿನ ತುಂಬುರ ತೀರ್ಥದ ವರ್ಣನೆ ಮಾಡುತ್ತಾನೆ. ಅಲ್ಲೇ ಬೇರುಗಳಲ್ಲಿ ಇದ್ದ ಆ ಕಪ್ಪೆಗೆ ತುಂಬುರು ತೀರ್ಥದ ವರ್ಣನೆ ಮಾಡುತ್ತಾನೆ.ಅಲ್ಲೇ ಬೇರುಗಳಲ್ಲಿ ಇದ್ದ ಆ ಕಪ್ಪೆಗೆ ತುಂಬುರುತೀರ್ಥದ ಮಹಿಮೆಯ ಶ್ರವಣದಿಂದಲೇ ಶಾಪ ವಿಮೋಚನೆಯಾಗಿ ಅಗಸ್ತ್ಯನಿಗೆ ನಮಸ್ಕರಿಸಿ ಧನ್ಯವಾದಗಳನ್ನು ತಿಳಿಸುತ್ತಾಳೆ.


ಅಗಸ್ತ್ಯರು ಅವಳಿಗೆ ಪತಿವ್ರತಾಧರ್ಮಗಳು, ಪತಿಯ ಮಾತುಗಳನ್ನು ಮೀರಬಾರದೆಂಬ ಧರ್ಮ ವಿಷಯಗಳನ್ನು ಹೇಳುತ್ತಾನೆ. ಪತಿಯು ಅಧರ್ಮಪರವಾಗಿ ನಿಷಿದ್ಧಕರ್ಮವನ್ನು ಮಾಡು ಎಂದು ಆದೇಶಿಸಿದರೆ, ಪತ್ನಿ ಅಂತಹ ಆಜ್ಞೆಯನ್ನು ತಿರಸ್ಕರಿಸಬಹುದೆಂದೂ ಹೇಳುತ್ತಾರೆ. ಪತಿಯು ಪತಿಯ ಧಾರ್ಮಿಕನಾಗಿ ಭಗವಂತನ ಅರ್ಚನೆಗೆ ಸಹಾಯ ಮಾಡಲು ಕೇಳಿದಾಗ, ನಿರ್ಲಕ್ಷ್ಯ ಮಾಡುವುದು ಪತಿವ್ರತಾಧರ್ಮವಲ್ಲವೆಂದೂ ಹೇಳಿ ಅವಳನ್ನು ಆಶೀರ್ವದಿಸಿ ಕಳಿಸುತ್ತಾನೆ.

# ಶ್ರೀನಿವಾಸನ ಅಲಂಕಾರವನ್ನು ವರ್ಣಿಸಿದ ಅಂಧ ಭಕ್ತ

- ಶ್ರೀಮತಿ. ಸೂರ್ಯವಂಶಿ


ಬ್ರಹ್ಮೋತ್ಸವಗಳಲ್ಲಿ ತಿರುಮಲೆಯಲ್ಲಿ ಎಷ್ಟೇ ವಸತಿಗಳಿದ್ದರೂ ಸಾಲದು.ಲಕ್ಷಗಟ್ಟಲೆ ಜನರು ಬರುತ್ತಾರೆ.ಅವರೆಲ್ಲರಿಗೂ ವಸತಿಯನ್ನು ನೀಡುವುದು ದೇವಸ್ಥಾನದವರಿಗೆ ಅಸಾಧ್ಯ.ಯಾತ್ರಿಕರೇ ಅಂದುಕೊಂಡರೆ, ಸಾವಿರಾರು ಜನ ದೇವಸ್ಥಾನದ ಉದ್ಯೋಗಿಗಳು. ಪೊಲೀಸರೂ, ಹೋಂಗಾರ್ಡ್‌ಗಳೂ,ಪ್ರವಚನಗಳನ್ನು ಮಾಡುವ ಪಂಡಿತರೂ, ಸ್ವಚ್ಛಂದ ಸೇವಕರು, ಸಂಗೀತಕಾರರು, ಭಜನೆಯ ಬೃಂದಗಳು, ಕೋಲಾಟ ಮಾಡುವವರು, ಈ ರೀತಿ ಪ್ರತಿಯೊಬ್ಬರ ಅಗತ್ಯವೂ ಇದ್ದೇ ಇದೆ. ಇವರೆಲ್ಲರೂ ಬ್ರಹ್ಮೋತ್ಸವಗಳ ಬಂದೋಬಸ್ತಿಗಾಗಿ, ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದಕ್ಕಾಗಿ ಬರುವರು.ಇವರೆಲ್ಲರೂ ತಾವು ಆಲಯದ ಅತಿಥಿಗಳೆಂದುಕೊಳ್ಳುತ್ತಾರೆ. ಇವರೆಲ್ಲರಿಗೂ ಊಟ, ವಸತಿಗಳನ್ನು ಒದಗಿಸುವ ಜವಾಬ್ದಾರಿ ದೇವಸ್ಥಾನದ್ದೇ ಆಗಿರುತ್ತದೆ. ಅಂತಹುದರಲ್ಲಿ ಈ ಸ್ವಚ್ಛಂದ ಸಂಸ್ಥೆಗಳು ಅನ್ನದಾನ ಮಾಡುತ್ತೇವೆಂದು,ಹಾಲನ್ನು ಹಂಚುತ್ತೇವೆಂದು,ಹಣ್ಣುಗಳನ್ನು ನೀಡುತ್ತೇವೆಂದು ಪ್ರಾರಂಭಿಸಿದರೆ ಅವರಿಗೆ (ದೇವಸ್ಥಾನದ ದೃಷ್ಟಿಯಲ್ಲಿ) ಸೌಕರ್ಯಗಳನ್ನು ಕಲ್ಪಿಸುವುದು ಅಷ್ಟು ಪ್ರಧಾನವಾದ ಅಂಶವಲ್ಲ.ಅದೇ ಅವರಿಗೂ ಹೇಳಿದ್ದಾಯ್ತು. ಆದರೆ, ಈ ಶ್ರೀನಿವಾಸದಾಸರ ಅನ್ನದಾನ ಟ್ರಸ್ಟು ಯಾವ ರೀತಿ ಪ್ರಾರಂಭವಾಯ್ತು ಏಕೆ ಪ್ರಾರಂಭವಾಯ್ತು.ಯಾರು ಪ್ರಾರಂಭಿಸಿದರೋ..ಆ ಕಥೆಯನ್ನೆಲ್ಲಾ ಕೇಳಿದ ನಂತರ, ಎಷ್ಟೇ ಕಷ್ಟವಾದರೂ ಅವರಿಗೆ ಸೌಕರ್ಯವನ್ನು ನೀಡಲಾರದೇ ಇರಲಾರರು. ಅಷ್ಟು ಹೊತ್ತಿಗೆ ಎಷ್ಟೋ ದಶಮಾನಗಳಿಂದ, ಹೆಚ್ಚೂ ಕಡಿಮೆ 80/90 ವರ್ಷಗಳಿಂದಲೂ ಈ ಅನ್ನದಾನ ಕಾರ್ಯಕ್ರಮ ನಡೆಯುತ್ತಿದೆಯೆಂದು,ಮುಖ್ಯವಾಗಿ ಸಾಂಪ್ರದಾಯಿಕವಾಗಿ ದೇವತಾರ್ಚನೆಗಳನ್ನು ಶುಚಿಯಾಗಿ,ಮಡಿಯಾಗಿ ಭೋಜನವನ್ನು ಮಾಡಬೇಕೆಂದುಕೊಂಡವರ ಸೌಕರ್ಯಾರ್ಥವಾಗಿ ಪ್ರಾರಂಭವಾಯ್ತೆಂದು, ಅನ್ನದಾನ ಟ್ರಸ್ಟು' ಎಂದು ಹೆಸರಿಟ್ಟರೂ. ಅಲ್ಲಿ ಬ್ರಹ್ಮೋತ್ಸವಗಳು ನಡೆಯುವಷ್ಟು ದಿನಗಳೂ,ಪ್ರತೀ ನಿತ್ಯವೂ ಜ್ಞಾನಕಾರ್ಯಗಳು, ಭಜನೆಗಳು, ಹೋಮಗಳು..ಈ ರೀತಿಯ ಸಾಂಪ್ರದಾಯಿಕ, ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಮಾಡಿಸಿ, ಪ್ರತೀನಿತ್ಯವೂ ಪೂಜೆ ನೈವೇದ್ಯಗಳನ್ನು ಮಾಡಿಸಿ ಆ ನೈವೇದ್ಯವನ್ನೇ ಅನ್ನದಾನವನ್ನಾಗಿ ಮಾಡುತ್ತಾರೆಂದೂ ಎಷ್ಟೋ ಉದಾರವಾದ ಆಸೆಯಿಂದ ಅನೇಕ ವರ್ಷಗಳ ಹಿಂದೆ ಶ್ರೀನಿವಾಸ ದಾಸರು ಪ್ರಾರಂಭಿಸಿದ ಕಾರ್ಯಕ್ರಮ ಇದೇ ಎಂದು, ಅವರುಗಳು ಆತನ ಕಥೆಯನ್ನು ಹೇಳಿದರು.

ಕ್ರಿ.ಶ. ೧೮೮೦ ರ ಪ್ರಾಂತ್ಯದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿನ ಚಿಕ್ಕ ಹಳ್ಳಿ ಕೋಳೂರಿನಲ್ಲಿ ಓರ್ವ ಮಾಧ್ವ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ "ಹುಟ್ಟು ಕುರುಡ" ಹುಡುಗ ಈ ಶ್ರೀನಿವಾಸದಾಸ. ಅವರ ಮನೆ ದೇವರಾದ ಶ್ರೀನಿವಾಸನ ಹೆಸರನ್ನೇ ಈ ಕುರುಡು ಮಗುವಿಗೆ ಇಟ್ಟರು...ಚಿಕ್ಕಂದಿನಿಂದಲೂ ತಿರುಪತಿಯ ವೇಂಕಟೇಶ್ವರನೆಂದರೆ ಆ ಹುಡುಗನಿಗೆ ಅಪರಿಮಿತವಾದ ಭಕ್ತಿ.ಏಳುಗಿರಿಯೊಡನೆಯನ ಹೆಸರು ಹೇಳಿದರೇ ಚಪ್ಪಾಳೆ ತಟ್ಟುತ್ತಾ ಕುಣಿದಾಡುತ್ತಿದ್ದ



ನಂತೆ. ಚಿಕ್ಕಂದಿನಿಂದಲೂ ಭಕ್ತರೊಂದಿಗೆ ಭಜನೆಗಳು, ಸಂಕೀರ್ತನೆಗಳು,ಸುಳಾದಿಗಳನ್ನು ಹಾಡುತ್ತಿದ್ದರು. ದಾಸರ ಕೀರ್ತನೆಗಳನ್ನು ಹಾಡುತ್ತಾ ಪರವಶಗೊಳ್ಳುತ್ತಿದ್ದ. ಆ ರೀತಿ ಶ್ರೀನಿವಾಸನು ಎಲ್ಲರ ದೃಷ್ಟಿಯಲ್ಲಿ ಶ್ರೀನಿವಾಸ ದಾಸನಾಗಿ ಬದಲಾದ.

ಕುರುಡನಾದರೂ 'ಶ್ರೀದೇವಿ - ಭೂದೇವಿ' ಸಮೇತ ಶ್ರೀನಿವಾಸನ ಪೂಜೆ ಮಾಡಿ ನೈವೇದ್ಯ ಮಾಡಿದ್ದಲ್ಲದೇ ಊಟ ಮಾಡುತ್ತಿರಲಿಲ್ಲ. ತೀರ್ಥಯಾತ್ರೆಗಳೆಂದರೆ ಬಹಳ ಇಷ್ಟ. ಕನ್ಯಾಕುಮಾರಿಯಿಂದ ನೇಪಾಲ್‌ನವರೆಗೂ ಪುಣ್ಯ ಕ್ಷೇತ್ರಗಳನ್ನೆಲ್ಲಾ ತಿರುಗಾಡಿ ಕ್ರಿ.ಶ. ೧೯೦೨ ರ ಮೇಳೆಗೆ ತಿರುಪತಿ ಕ್ಷೇತ್ರಕ್ಕೆ ಬಂದ.



ಪ್ರತೀ ದಿನವೂ ತಿರುಚಾನೂರಿನಲ್ಲಿ ಪದ್ಮಾವತಿ ದೇವಿಯ 'ದರ್ಶನ' ಮಾಡಿಕೊಂಡು ತಿರುಮಲೆಯ ಬೆಟ್ಟಕ್ಕೆ ಹೊರಟ. ದೇವರ 'ದರ್ಶನ' ಮಾಡಿಕೊಂಡು ದೇವಾಲಯದಲ್ಲಿ ಪ್ರಸಾದವನ್ನು ಸ್ವೀಕರಿಸುತ್ತಿದ್ದ. ಆ ದಿನಗಳಲ್ಲಿ ಸಂಪ್ರದಾಯ ಬದ್ಧವಾಗಿ ಪೂಜೆ ಮಾಡುವ ಅಭ್ಯಾಸವಿರುವ ಭಕ್ತರಿಗೆ ಆಲಯದಲ್ಲಿ ಪ್ರಸಾದವನ್ನು ಖರೀದಿಸಿಕೊಂಡು ತಿನ್ನುವುದರಲ್ಲಿ ಬಹಳ ಇರಿಸುಮುರಿಸಾಗುತ್ತಿತ್ತು. ಕೆಲವು ದಿನಗಳು ಪ್ರಸಾದ ದೊರೆಯುತ್ತಿರಲಿಲ್ಲ. ದೊರೆತರೂ, ಬೇಕಾಗಿದ್ದು, ಬೇಕಾದಷ್ಟು ದೊರೆಯುತ್ತಿರಲಿಲ್ಲ.

ಈ ಶ್ರೀನಿವಾಸದಾಸ ಅಂತಹ ಯಾತ್ರಿಕರಿಗಾಗಿ ಬೆಟ್ಟದ ಮೇಲೆ ಒಂದು ಛತ್ರದಲ್ಲಿ ಅನ್ನದಾನವನ್ನು ಏರ್ಪಡಿಸಿದರು. ತಿರುಮಲೆಯಲ್ಲೇ ಇದ್ದು ಮೂರು ಹೊತ್ತಿನಲ್ಲೂ ದೇವರ ದರ್ಶನವನ್ನು ಮಾಡಿಕೊಂಡು ದೇವರಿಗೆ ಪ್ರತೀ ದಿನವೂ ಹೂವು, ಹಣ್ಣುಗಳನ್ನು ನೈವೇದ್ಯಕ್ಕಾಗಿ ತೆಗೆದುಕೊಂಡು ಹೋಗುತ್ತಾ, ಛತ್ರದಲ್ಲಿ ಅಡಿಗೆ ಮಾಡಿಸಿ, ದೇವರಿಗೆ ಅಲ್ಲಿಂದಲೇ ನೈವೇದ್ಯ ಮಾಡಿ, ಭಕ್ತರಿಗೆ ಅನ್ನದಾನ ಮಾಡುತ್ತಿದ್ದರಂತೆ, ಆ ರೀತಿಯಲ್ಲಿ ಮಾಡಿ ಕೆಲಕಾಲಗಳಿಗೆ ಈ ಶ್ರೀನಿವಾಸ ದಾಸನು "ಅನ್ನದಾನ ಶ್ರೀನಿವಾಸದಾಸನು" ಎಂದು ಪ್ರಸಿದ್ಧಿಗೆ ಬಂದರು.

ಈತ ಹುಟ್ಟು ಕುರುಡನಲ್ಲವೇ! ಪ್ರತೀ ನಿತ್ಯವೂ ದೇವಾಲಯಕ್ಕೆ 'ದರ್ಶನಕ್ಕೆ' ಹೋಗುವುದೇಕೆ? ಒಳಗೆ ಹೋಗಿ ಏನು ನೋಡಬಲ್ಲ? ಕಣ್ಣು ಕಾಣಿಸದೆಯೇ ಇದ್ದಾಗ ಆ ರೀತಿ ಹೋಗುವುದೇಕೆ?

ಈ ಅನುಮಾನ ಅನೇಕರಿಗೆ ಆ ದಿನಗಳಲ್ಲಿ ಬಂದುವಂತೆ, ಆಲಯದಲ್ಲಿನ ಅರ್ಚಕರಿಗೂ ಅದೇ ಅನುಮಾನ.

"ಪ್ರತೀ ದಿನವೂ ಮೂರು ಹೊತ್ತೂ ದರ್ಶನಕ್ಕೆ ಈ ಕುರುಡ ಬರುತ್ತಾನೆ. ದೇವರ ಸನ್ನಿಧಿಯಲ್ಲಿ ಏನೋ ಅನುಭೂತಿ ಹೊಂದಿದಂತೆ ಆನಂದೋದ್ರೇಕವನ್ನು ಪ್ರದರ್ಶಿಸುತ್ತಾನೆ. ಈತನೇನು ನೋಡುತ್ತಾನೆ. ಇವೆಲ್ಲಾ ಏನು? ಅರ್ಚಕರು ಸಂದೇಹ ಪಡುತ್ತಲೇ ಇದ್ದರು. ಒಂದು ದಿನ ಸುಮ್ಮನಿರಲಾರದೇ ಶ್ರೀನಿವಾಸದಾಸನನ್ನೇ ಕೇಳಿ ಬಿಟ್ಟರು.

"ಸ್ವಾಮಿ! ಶ್ರೀನಿವಾಸದಾಸರೇ! ನೀವೇನೋ ಅಂಧರು. ಅದರಲ್ಲೂ ಹುಟ್ಟಿನಿಂದಲೇ ಕಣ್ಣುಗಳು ಕಾಣಿಸುವುದಿಲ್ಲವೆನ್ನುತ್ತೀರಿ. ನಿಮಗೇನೂ ಕಾಣಿಸುವುದಿಲ್ಲ ಅಲ್ಲವೇ ! ಪ್ರತೀ ನಿತ್ಯ ಇಷ್ಟೊಂದು ಕಷ್ಟಪಟ್ಟು ಆಲಯಕ್ಕೇಕೆ ಬರುತ್ತೀರಿ?" ಎಂದು ಸಹಾನುಭೂತಿಯಿಂದ ಕೇಳಿದರು.

ಅದಕ್ಕೆ ಶ್ರೀನಿವಾಸದಾಸು ಕಿರುನಗೆ ಬೀರುತ್ತಾ,

"ಓ ಅರ್ಚಕ ಸ್ವಾಮಿಗಳೇ! ನನಗೆ ಲೌಕಿಕ ವಿಷಯಗಳು ಕಾಣಿಸುವುದಿಲ್ಲ ನಿಜ... ನಾನು ಕುರುಡನೇ... ಆದರೆ ದೇವರ ಮುಂದೆ ನಾನು ಕುರುಡನಲ್ಲ. ದೇವರೇ ನನಗೆ ದರ್ಶನವನ್ನು ನೀಡುತ್ತಿದ್ದಾನೆ. ಕೇಳಿದರಾದ್ದರಿಂದ ಹೇಳುತ್ತಿದ್ದೇನೆ...ಗರ್ಭಗುಡಿಯಲ್ಲಿ ಮೂಲ ಮೂರ್ತಿಗೆ ಅನಂತ ಕಲ್ಯಾಣ ಗುಣಪರಿಪೂರ್ಣನಾದ ಆ ಶ್ರೀನಿವಾಸನಿಗೆ ನೀವು ಮಾಡಿದ ಅಲಂಕಾರವೆಲ್ಲಾ ನನಗೆ ಸ್ಪಷ್ಟವಾಗಿ ಕಂಡು ಬರುತ್ತಿವೆ. ಯಾವ ಆಭರಣಗಳನ್ನು ಯಾವ ರೀತಿ ಅಲಂಕರಿಸಿದ್ದೀರೋ, ಯಾವ ಬಣ್ಣದ ಪೀತಾಂಬರವನ್ನು ಉಡಿಸಿದ್ದೀರೋ, ಯಾವ ಯಾವ ಹೂಗಳಿಂದ ಅಲಂಕರಿಸಿದ್ದೀರೋ ಎಲ್ಲಾ ನನಗೆ

ಕಣ್ಣಿಗೆ ಕಟ್ಟಿದಂತಿದೆ....ಎನ್ನುತ್ತಾ ಒಂದೊಂದು ಆಭರಣದ ಬಗೆಗೆ ಇತರ ವಸ್ತ್ರ ಪುಷ್ಪಾಲಂಕಾರಗಳ ಬಗೆಗೆ, ಮೂಲ ಮೂರ್ತಿಯನ್ನಲ್ಲದೇ, ಗರ್ಭಗುಡಿಯಲ್ಲಿನ ಇತರೆ ವಿಗ್ರಹಗಳು ಎಲ್ಲಿವೆ,ಯಾವ ರೀತಿ ಅಲಂಕರಿಸಿದ್ದಾರೆ, ಪೂಜೆಯನ್ನು ಯಾವ ರೀತಿ ಮಾಡುತ್ತಾರೆ.ಈ ಎಲ್ಲಾ ವಿಷಯಗಳನ್ನು ಎಲ್ಲಾ ಮಣಿಗಳನ್ನು ಪೋಣಿಸಿದಂತೆ ಹೇಳಿದರಂತೆ.

ಅವರ ವರ್ಣನೆಯನ್ನು ಕೇಳಿ ಸಂಭ್ರಮಾಶ್ಚರ್ಯಗಳಿಗೆ ಒಳಗಾದ ಅರ್ಚಕರು ಭಯಗೊಂಡರು.ಕೂಡಲೇ ಶ್ರೀನಿವಾಸ ದಾಸರಿಗೆ ನಮಸ್ಕರಿಸಿ,ತಾವಾರೀತಿ ಪ್ರಶ್ನಿಸಿದ್ದಕ್ಕೆ ಕ್ಷಮೆ ಕೇಳಿ ಕೊಂಡರಂತೆ. ಅಷ್ಟಕ್ಕೇ ಸುಮ್ಮನಿರದೇ,

"ದೇವರ ಅನುಗ್ರಹವನ್ನು ಇಷ್ಟರ ಮಟ್ಟಿಗೆ ಪಡೆದ ನೀವು ಸಾಮಾನ್ಯರಲ್ಲ. ಯಾವುದೋ ತಪಸ್ಸಂಪನರೋ,ಸಿದ್ಧ ಪುರುಷರೋ ಇರಬೇಕು" ಎಂದರಂತೆ.

ಅದಕ್ಕೆ ಶ್ರೀನಿವಾಸದಾಸರು ಉತ್ತರಿಸುತ್ತಾ.

"ನೀವು ಆ ದೇವದೇವನ ಆಂತರಂಗಿಕ ಸೇವಕರು. ನಿಮಗೆ ತಿಳಿಯದ್ದೇನಿದೆ? ಆದರೆ ಕೇಳಿದರಾದ್ದರಿಂದ, ನನಗೆ ತಿಳಿದಿರುವ ನನ್ನ ಜನ್ಮವೃತ್ತಾಂತವನ್ನು ಹೇಳುತ್ತೇನೆ. ನನಗೆ ಬಾಹ್ಯದೃಷ್ಟಿಯಿಲ್ಲ... ಆದರೆ ದೇವರ ಅನುಗ್ರಹದಿಂದ ಅಂತರಂಗದ ದೃಷ್ಟಿ ಪ್ರಾಪ್ತಿಯಾಗಿದೆ. ಈ ಸಿದ್ಧಿ ಇಂದಿನದಲ್ಲ. ನಮ್ಮ ಗುರುಗಳ ಮೂಲಕ ದೇವರು ಅನುಗ್ರಹಿಸಿದ್ದಾರೆ..." ಎನ್ನುತ್ತಾ ತಮ್ಮ ಪೂರ್ವಜನ್ಮದ ಕಥೆಯನ್ನು ನೆನಪಿಸಿಕೊಂಡು ದೇವರ ಸನ್ನಿಧಿಯಲ್ಲೇ ಅರ್ಚಕರಿಗೆ ಹೇಳಿದರಂತೆ.

"ನಿಮಗೆ ಶ್ರೀವ್ಯಾಸರಾಯ ತೀರ್ಥರ ಬಗೆಗೆ ತಿಳಿದಿದೆಯಲ್ಲವೇ..ಅದೃಷ್ಟವಶಾತ್ತು ಅವರು ವೈಖಾನಸರಲ್ಲದಿದ್ದರೂ. ಈ ಆಲಯದಲ್ಲಿ ದೇವರ ಅರ್ಚನಾದಿ ಕೈಂಕರ್ಯಗಳನ್ನು ಮಾಡುವಂತಹ ಅದೃಷ್ಟವನ್ನು ಆ ಶ್ರೀನಿವಾಸನು ಅವರಿಗೆ ಕರುಣಿಸಿದ.ಚರಿತ್ರೆಯಲ್ಲಿ ನೋಡಿದರೆ ಅವರು ಆ ರೀತಿ ದೇವರನ್ನು ಹನ್ನೆರಡು ವರ್ಷಗಳ ಕಾಲ ಸೇವಿಸಿರುವುದು ತಿಳಿದು ಬರುತ್ತದೆ.ಆ ಕಾಲದಲ್ಲಿ ಅವರಿಗೆ ಸೇವೆ ಮಾಡುವ ಪರಿಚಾರಕರಲ್ಲಿ ಒಬ್ಬ ಗುರುಗಳ ಪೂಜೆ ನೈವೇದ್ಯಗಳಿಗೆ ಏರ್ಪಾಟು ಮಾಡುತ್ತಿದ್ದ...

"ಒಂದು ದಿನ ವ್ಯಾಸತೀರ್ಥರು ಸ್ನಾನ ಸಂಧ್ಯಾ ವಂದನೆಗಳನ್ನು ಮುಗಿಸಿಕೊಂಡು ಪೂಜೆ ನೈವೇದ್ಯಗಳ ನಂತರ ಭಿಕ್ಷೆಗೆ ಕುಳಿತರು...ಈ ಪರಿಚಾರಕ ಆ ದಿನ ಗುರುಗಳ ಸೇವೆ ಮಾಡುತ್ತಿದ್ದ...ಗುರುಗಳ ಭೋಜನದಲ್ಲಿ ಒಂದು ಕೂದಲು ಬಂತು.ಅಂತಹ ಭೋಜನದಿಂದ ವಿಮುಖರಾದ ವ್ಯಾಸ ತೀರ್ಥರು.

"ನಿನಗೆ ಕಣ್ಣುಗಳಿಲ್ಲವೇ? ಅಥವಾ ಇದ್ದರೂ ಕಾಣೋಲ್ವೇ ಎಂದು ಶಿಷ್ಯ ಪರಿಚಾರಕನ ಮೇಲೆ ಕೋಪಗೊಂಡರು.

"ವ್ಯಾಸತೀರ್ಥರು ಮಹಾತಪಸ್ವಿಗಳು. ಶ್ರೀಕೃಷ್ಣ ದೇವ ರಾಯರನ್ನು ಕುಜ ಯೋಗದಿಂದ ಕಾಪಾಡುವುದಕ್ಕೆ ಆ ಗ್ರಹ ಕೂಟವಿರುವವರೆಗೂ ತಾವೇ ರಾಜನಾಗಿದ್ದ, ದುಷ್ಟಗ್ರಹ ಪ್ರಭಾವವನ್ನು ತಮ್ಮ ಮೇಲೆ ಎಳೆದುಕೊಂಡು, ರಾಜನನ್ನು ರಕ್ಷಿಸಿ ಪುನಃ ಕೃಷ್ಣದೇವರಾಯರಿಗೆ ಪಟ್ಟಾಭಿಷೇಕ ಮಾಡಿದ ತಪೋ ಧನರು, ವಿಜಯನಗರ ಸಾಮ್ರಾಜ್ಯದ ರಕ್ಷಣೆಗಾಗಿ ಹಂಪೆಯ ತುಂಗಭದ್ರಾ ತೀರದಲ್ಲಿ ಆಂಜನೇಯ ಸ್ವಾಮಿಯನ್ನು ಪ್ರತಿಷ್ಠೆ ಮಾಡಬೇಕೆಂದು ಕೊಂಡರು.ಕೆಲವು ಬಾರಿ ನೋಡಿ,ಆಂಜನೇಯ ಸ್ವಾಮಿಯನ್ನು ಪ್ರಾರ್ಥಿಸಿ, ಮೂಲ ಮಂತ್ರದಿಂದ ಒಂದು ದೊಡ್ಡ ಯಂತ್ರವನ್ನು ತಯಾರಿಸಿ ಆಂಜನೇಯ ಸ್ವಾಮಿಯನ್ನು ಆ ಯಂತ್ರದ ಮಧ್ಯೆ ಪ್ರತಿಷ್ಠಾಪಿಸಿ, ಪ್ರತಿಷ್ಠಾಪನೆ ಮಾಡಿದ ಆಲಯದಲ್ಲಿ ಮೂರುತಿ ಸ್ಥಿರವಾಗಿರುವಂತೆ ಮಾಡಿದ ಮಂತ್ರ ಶಕ್ತಿಯುಳ್ಳವರು. ಇಂದಿಗೂ "ಯಂತ್ರೋದ್ಧಾರಕ ಹನುಮಂತ ನನ್ನು" ಹಂಪೆಯಲ್ಲಿ ನೋಡಬಹುದು. ಕೆಳವರ್ಗದ ಕುಲದಲ್ಲಿ ಜನಿಸಿದ ಕನಕದಾಸನನ್ನು ಗುರುತಿಸಿ,ಕನಕದಾಸ ಎಂತಹ ಜ್ಞಾನಿ, ಭಕ್ತನೇ ತಿಳಿಯುವಂತೆ ಮಾಡಿ, ತಮ್ಮ ಇತರ ಬ್ರಾಹ್ಮಣ ಪಂಡಿತ ಶಿಷ್ಯರಿಗೆ ತಿಳಿಯುವಂತೆ ಮಾಡಿದ ಸಂಸ್ಕರ್ತರು. ಇವರನ್ನು ಪ್ರಹ್ಲಾದನ ಅವತಾರವೆಂದು ಭಾವಿಸುತ್ತಾರೆ ಇವರೇ ನಂತರ ಕಾಲದಲ್ಲಿ ರಾಘವೇಂದ್ರ ಸ್ವಾಮಿಗಳಾಗಿ (ಮಂತ್ರಾಲಯ) ಇನ್ನೊಂದು ಅವತಾರವನ್ನು ತಳೆದರೆಂದು ಭಕ್ತರ ನಂಬಿಕೆ.

"ಅವರಿಗೆ ಆ ತಪಸ್ಸಾಧನೆಯಿಂದಾಗಿ 'ವಾಕ್ಶುದ್ಧಿ' ಇತ್ತು. ಅವರ ಬಾಯಿಂದ ಅಸತ್ಯಗಳೆಂದೂ ಬರುತ್ತಿರಲಿಲ್ಲ. ಅವರು ಹೇಳಿದ್ದು ನಡೆದೇ ನಡೆಯುತ್ತದೆ.ಅಂದರೆ ಅವರು ಭಗವಂತನ ಇಚ್ಛೆಯನ್ನು ತಿಳಿದು ಮಾತನಾಡುವವರೆಂದು ಅರ್ಥ.ಭಗವಂತನ ಆದೇಶದಂತೆ ಅವರ ಬಾಯಿಂದ ಕುರುಡನೇ? ಕಣ್ಣಿದ್ದರೂ ಕಾಣೋಲ್ಲವೇ? ಎಂಬ ಮಾತುಗಳು ಬಂದ ನಂತರ ಅದು ಸತ್ಯವಾಗಬೇಕಲ್ಲವೇ! ಅಷ್ಟೇ ಆ ಪರಿಚಾರಕ ಕುರುಡನಾದ ಅಂದರೆ ವ್ಯಾಸರಾಯರ ಮಾತುಗಳು ಶಾಪವಾಗಿ ತಮ್ಮ ಪ್ರಭಾವವನ್ನು ತೋರಿದುವು.

"ಆ ಪರಿಚಾರಕ ಬಹಳ ಸಾತ್ವಿಕನು, ಗುರುಭಕ್ತಿ, ಹರಿಭಕ್ತಿಯನ್ನೂ ಹೊಂದಿದ್ದು ಅವನ ಪ್ರಾರಬ್ಧ ಆ ರೀತಿ ಇದ್ದುದರಿಂದ ಅಂದು ಆ ಪರಿಸ್ಥಿತಿ ಎದಿರಾಗಿತ್ತು. ಅದಕ್ಕೆ ಅವನು ಕುಗ್ಗುತ್ತಾ, ಮಾಡಿದ ತಪ್ಪಿಗೆ ಪಶ್ಚಾತ್ತಾಪದಿಂದ ಚಿಂತಿಸುತ್ತಾ, ಗುರುಗಳನ್ನು ಮರೆಯದೇ, ಪರಿಚಾರಕ ವೃತ್ತಿಯಿಂದಲೇ ಹೊರಬಂದರೂ, ಗುರುಭಕ್ತಿ ಕಡಿಮೆಯಾಗದೇ, ಹರಿಗುರುಸ್ಮರಣೆಯಲ್ಲೇ ಕಾಲವನ್ನು ಮುಂದೂಡುತ್ತಿದ್ದ.

"ಕೆಲ ಕಾಲಕ್ಕೆ ವ್ಯಾಸತೀರ್ಥರಿಗೆ ಆ ಶಿಷ್ಯನ ಮೇಲೆ ದಯೆಯುಂಟಾಗಿ ಶಿಷ್ಯನ ಕನಸಿನಲ್ಲಿ ಕಾಣಿಸಿಕೊಂಡು.

"ಮಗೂ,ನಿನಗೆ ಕೇವಲ ಬಾಹ್ಯದೃಷ್ಟಿ ಬೇಕೋ, ಅಥವಾ ಅಂತರಂಗಜ್ಞಾನ ದೃಷ್ಟಿಬೇಕೋ?"ಎಂದು ಪ್ರಶ್ನಿಸಿದರೂ. ಅದಕ್ಕೆ ಕುರುಡನಾದ ಪರಿಚಾರಕ,ಸ್ವಾಮಿ ಕೇವಲ ಬಾಹ್ಯದೃಷ್ಟಿ ನನಗೆ



ಬೇಡವೇ ಬೇಡ.ಜ್ಞಾನಪೂರ್ವಕವಾದ ಅಂತರಂಗ ದೃಷ್ಟಿಯನ್ನು ಪ್ರಸಾದಿಸು ಸ್ವಾಮಿ" ಎಂದು ಬೇಡಿಕೊಂಡ.

"ಈ ಜನ್ಮದಲ್ಲಿ ಈ ಪ್ರಾರಬ್ಧಕರ್ಮವನ್ನು ಬಿಡಿಸಿಕೊಳ್ಳು ವಂತಿಲ್ಲ. ನೀನು ಕೇಳಿದ ಅಂತರಂಗಿಕ ಜ್ಞಾನದೃಷ್ಟಿ ಕೆಲಕಾಲದ ನಂತರ ನಿನಗೆ ಮುಂಬರುವ ಮಾನವ ಜನ್ಮದಲ್ಲಿ ಉಂಟಾಗುತ್ತದೆ. ಹುಟ್ಟು ಕುರುಡನಾದರೂ ಭಗವದ್ಭಕ್ತನಾಗಿ,ಅಂತರಂಗ ಜ್ಞಾನ ದೃಷ್ಟಿ ಯಿಂದ ಸಾಧನೆ ಮಾಡಿ,ಭಗವಂತನ ಸಾಕ್ಷಾತ್ಕಾರವನ್ನು ಪಡೆದು ಜನ್ಮವನ್ನು ಸಾರ್ಥಕಪಡಿಸಿಕೊಳ್ಳುತ್ತೀ.ಆ ಜನ್ಮದಲ್ಲಿ ನಿನಗೆ ಈ ಪೂರ್ವಜನ್ಮದ ಜ್ಞಾನವೂ ಇದ್ದು ಸನ್ಮಾರ್ಗದಲ್ಲಿ ಸಾಧನೆ ಮಾಡಿ, ದೇವರ ಭಕ್ತರ ಸೇವೆಯಲ್ಲಿ ಧನ್ಯನಾಗುತ್ತೀ" ಎಂದು ಆಶೀರ್ವದಿಸಿ, ಗುರುಗಳಾದ ವ್ಯಾಸತೀರ್ಥರು ಅಂತರ್ಧಾನರಾದರು.

"ಆಪರಿಚಾರಕ ನಾನೇ! ಈ ಜನ್ಮದಲ್ಲಿ ಶ್ರೀನಿವಾಸ ದಾಸ ನಾಗಿ ಹುಟ್ಟಿ,ನನ್ನ ಯೋಗ್ಯತೆಗೆ ತಕ್ಕಂತೆ ಭಗವಂತನನ್ನು , ಆತನ ಭಕ್ತರನ್ನು ಸೇವಿಸುತ್ತಾ ನನ್ನ ಸಾಧನೆಯನ್ನು ಮುಂದುವರೆಸು ತ್ತಿದ್ದೇನೆ"ಎಂದು ಅರ್ಚಕರೊಂದಿಗೆ ಶ್ರೀನಿವಾಸದಾಸರು ಎಲ್ಲಾ ವೃತ್ತಾಂತವನ್ನು ವಿವರಿಸಿದರು.

ಆ ರೀತಿ ಆತನಿಗೆ ಬಾಹ್ಯದೃಷ್ಟಿ ಇಲ್ಲದಿರುವುದೂ ಒಂದು ರೀತಿ ಯಲ್ಲಿ ಸನ್ಮಾರ್ಗದಲ್ಲಿ ಸಾಧನೆ ಮಾಡಿಕೊಳ್ಳುವುದಕ್ಕೆ ಅವಕಾಶವಾಗಿ, ವರವಾಗಿ ಪರಿಣಮಿಸಿತ್ತು. ಬೆಟ್ಟ ಹತ್ತಬೇಕೆಂದರೂ, ದೇವಾಲಯಕ್ಕೆ ಹೋಗಬೇಕೆಂದರೂ, ಒಳಗೆ ದೇವರ ದರ್ಶನ ನೋಡದೇ ಇದ್ದರೂ ಹಸ್ತರೇಖೆಗಳು ಕಂಡು ಬರದಿದ್ದರೂ ತನ್ನ ಬಳಿಗೆ ಬಂದ ಭಕ್ತರಿಗೆ ಅವರ ಹಸ್ತವನ್ನು ಸ್ಪರ್ಶಿಸಿ,ಅವರ ಭವಿಷ್ಯವನ್ನು ಹೇಳುತ್ತಿದ್ದರಂತೆ. ಬೆಟ್ಟಕ್ಕೆ ಕೋಲಿಕೆಗಳಿಂದ ಬರುತ್ತಿದ್ದವರು, ಇವರ ಅನ್ನದಾನ ಛತ್ರದಲ್ಲಿ ಭೋಜನವನ್ನು ಮುಗಿಸಿ,ಅವರ ಆಶೀರ್ವಾದ ಮಂತ್ರಾಕ್ಷತೆಗಳನ್ನು ತೆಗೆದುಕೊಂಡರೆ, ಅವರ ಆಸೆಗಳು ನೆರವೇರುತ್ತಿತ್ತಂತೆ ಸಂತಾನ ಪ್ರಾಪ್ತಿಯಾಗುತ್ತಿತ್ತಂತೆ. ಅವೆಲ್ಲವೂ ಹರಿ ಗುರುಗಳ ಅನುಗ್ರಹವೆಂದೇ ಶ್ರೀನಿವಾಸದಾಸರು ಭಾವಿಸುತ್ತಿದ್ದರಂತೆ.

ಅನ್ನದಾನದೊಂದಿಗೆ, ಜ್ಞಾನಕಾರ್ಯಕ್ಕೂ ಹೆಚ್ಚಿನ ಪ್ರಾಮು ಖ್ಯತೆಯನ್ನು ಶ್ರೀನಿವಾಸದಾಸರು ನೀಡುತ್ತಿದ್ದರು.ದೊಡ್ಡ ದೊಡ್ಡ ಉತ್ಸವಗಳಲ್ಲಿ, ಮುಖ್ಯವಾಗಿ ತಿರುಮಲೆಯ ಬ್ರಹ್ಮೋತ್ಸವ ಗಳಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೂ ಪ್ರತೀ ನಿತ್ಯ ಪಂಡಿತರಿಂದ ಪ್ರವಚನಗಳು, ವೈಷ್ಣವ ಹೋಮಗಳನ್ನು ಮಾಡಿಸುತ್ತಾ ಭಕ್ತರನ್ನು ಜ್ಞಾನಕಾರ್ಯದಲ್ಲಿ ನಿಮಗ್ನನ ರಾಗಿ, ದೇವರ ವಾಹನೋತ್ಸವಗಳಲ್ಲಿ ಪ್ರಕಾರದ ಬೀದಿ ಗಳಲ್ಲಿ ಬಂದಾಗ ಮಾತ್ರಾ ದರ್ಶನ ಮಾಡಿಕೊಳ್ಳುತ್ತಿದ್ದರು.

ಪ್ರಾಚೀನಕಾಲದಲ್ಲಿ ಬ್ರಹ್ಮೋತ್ಸವಗಳ ಸಮಯ ದಲ್ಲಿ ದೇವರ ವಾಹನ ಸೇವೆಗಳಿಗಾಗಿ ಆಲಯದ ಹೊರಗೆ ಬಂದಾಗ ದೇವಾಲಯವನ್ನು ಮುಚ್ಚುತ್ತಿದ್ದರಂತೆ. ಬ್ರಹ್ಮಾದಿ ದೇವತೆಗಳೇ ಸ್ವತಹಾ ಮೆರವಣಿಗೆಯಲ್ಲಿ ಬರುತ್ತಾರೆಂಬ ನಂಬಿಕೆ.ನಂತರದ ಕಾಲದಲ್ಲಿ, ಹೊರಗೆ ವಾಹನ ಉತ್ಸವ,ಮಲೆಯಪ್ಪಸ್ವಾಮಿಗೆ ಶ್ರೀದೇವಿ, ಭೂದೇವಿಗೆ ನಡೆ ಯುತ್ತಿದ್ದರೂ, ಒಳಗೆ ದರ್ಶನಕ್ಕೆ ಭಕ್ತರನ್ನು ಬಿಡುವ ಸಂಪ್ರ ದಾಯ ಪ್ರಾರಂಭವಾಯ್ತು.

ಈ ಶ್ರೀನಿವಾಸದಾಸರ ಭಕ್ತರಿಗೆ, ದೇವರೇ ಹೊರಗೆ ಸ್ವತಹಾ ಮೆರವಣಿಗೆಯಲ್ಲಿ ಬರುತ್ತಾರೆಂಬ ಗಾಢವಾದ ನಂಬಿಕೆಯಿದೆ. ಈ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಇವರಿಗೆ ಒಂದು ಪ್ರತ್ಯೇಕ ಪ್ರದೇಶ ಇರುತ್ತಿ ರಲಿಲ್ಲ.ಮೊದಮೊದಲು ತಿರುಮಲೆಯ ಹೂತೋಟದಲ್ಲಿ ಮಾಡುತ್ತಿದ್ದರು. ಆದರೆ ಬ್ರಹ್ಮೋತ್ಸವದಲ್ಲಿ ಮಳೆ ಬರುವ ಅವಕಾಶ ಹೆಚ್ಚು.ಆದ್ದರಿಂದ ಬಹಳ ಕಷ್ಟವಾಗುತ್ತಿತ್ತು ನಂತರ ಶ್ರೀರಾಮಲಕ್ಷ್ಮಣದಾಸ ಛತ್ರದಲ್ಲೂ,ಹಾಥೀ ರಾಂಜೀ ಮಠಗಳಲ್ಲೂ ಈ ಜ್ಞಾನ ಛತ್ರಗಳು, ಅನ್ನ ಸಂತ ರ್ಪಣೆಯನ್ನು ಮಾಡುತ್ತಿದ್ದರು.ಬರುಬರುತ್ತಾ ಈ ಕಾರ್ಯ ಕ್ರಮವನ್ನು ಬ್ರಹ್ಮೋತ್ಸವಗಳಲ್ಲಿ ಮಾತ್ರ ತಿರುಮಲೆಯಲ್ಲಿ ಮಾಡುತ್ತಾ, ಉಳಿದ ದಿನಗಳಲ್ಲಿ ದೇಶದಲ್ಲೆಡೆಯಲ್ಲೂ ಏರ್ಪಾಟು ಮಾಡುತ್ತಾ ಶ್ರೀನಿವಾಸ ತತ್ತ್ವವನ್ನು ಪ್ರಚಾರ ಮಾಡುತ್ತಾ ಬಂದರು.

ದಾಸರು ಬಳ್ಳಾರಿ ಜಿಲ್ಲೆಯ ಪರ್ಯಟನೆಯಲ್ಲಿ ನಡೆದ ಒಂದು ಘಟನೆ ಎಲ್ಲೆಡೆ ಪ್ರಚಾರದಲ್ಲಿದೆ. ಬಳ್ಳಾರಿ ಜಿಲ್ಲೆಯ ಕೆಂಚಿನಗಡ್ಡ ಗ್ರಾಮದಲ್ಲಿ ಪರ್ಯಟನೆಗಾಗಿ ಶ್ರೀನಿ ವಾಸದಾಸರು ಬಂದರು.ಆಗಲೇ ದಾಸರ ಆಧ್ಯಾತ್ಮಿಕ ಚಿಂತನೆ, ಜ್ಞಾನ ಪ್ರಚಾರ, ಅನ್ನ ಸಂತರ್ಪಣೆ ಭಕ್ತರಿಗೆ ತಿಳಿಸಿ,ಅವರೆಲ್ಲಿಗೆ ಹೋದರೂ ಒಳ್ಳೆಯ ಸ್ವಾಗತ ದೊರೆ ಯುತ್ತಿತ್ತು ಆ ರೀತಿಯಲ್ಲೇ ಆ ಗ್ರಾಮದ ಹಿರಿಯರೂ ದಾಸ ರನ್ನು ಆಹ್ವಾನಿ,ಅವರಿಗೆ ಬೇಕಾದ ಎಲ್ಲಾ ಸೌಕರ್ಯ ಗಳನ್ನೂ ಕಲ್ಪಿಸಿದರು.ಆ ಗ್ರಾಮ ತುಂಗಭದ್ರಾ ನದಿ ತೀರದ ಲ್ಲಿದೆ. ನದಿಯ ಮತ್ತೊಂದು ತೀರದಲ್ಲಿ ಶ್ರೀವಸುಧೇಂದ್ರ ತೀರ್ಥರ ಬೃಂದಾವನವಿದೆ. ಇವರು ಶ್ರೀ ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಪರಂಪರೆಯಲ್ಲಿ ಪ್ರಸಿದ್ಧರಾದ ಯತಿಗಳು.ಆ ನದೀ ತೀರದಲ್ಲೇ ಸ್ವರ್ಗಸ್ಥರಾಗಿ ಬೃಂದಾ ವನವನ್ನು ಹೊಂದಿದರು.

# ಭಾರತದಲ್ಲಿ ಶಕ್ತಿದೇವತೆಯ ಆರಾಧನೆ ಮತ್ತು ಸಪ್ತಮಾತೃಕೆಯರು





ಭಾರತದಲ್ಲಿ ಶಕ್ತಿ ಪೂಜೆಯ ಕುರುಹುಗಳು ಸುಮಾರು ಕ್ರಿಸ್ತಪೂರ್ವ 5000 ವರ್ಷಗಳಿಗೂ ಹಿಂದಿನ ಸಿಂಧೂ, ಸರಸ್ವತಿ ನದಿ ಬಯಲಿನ ನಾಗರಿಕತೆಯಲ್ಲಿಯೇ ಕಂಡು ಬರುತ್ತದೆ.ಶಕ್ತಿ, ಶಿವ ಮತ್ತು ಮಾತೃದೇವತೆಯ ಆರಾಧನೆಯು ವಿಶೇಷವಾಗಿದ್ದುದು ಅಲ್ಲಿ ಸಿಕ್ಕಿರುವ ಮುದ್ರಿಕೆಗಳು ಮತ್ತು ವಿಗ್ರಹಗಳಿಂದ ತಿಳಿದು ಬರುತ್ತದೆ.ಮಾತೃದೇವತೆಯ ಮೂರ್ತಿಗಳು ಹಿಂದೂ ಧರ್ಮದ ದುರ್ಗಿ, ಕಾಳಿ, ಅಂಬಾ ಮೊದಲಾದ ದೇವತೆಗಳ ರೂಪಗಳು ಎಂದು ವಿದ್ವಾಂಸರು ನಿರ್ಣಯಿಸಿದ್ದಾರೆ.ನಂತರದ ವೇದ ಕಾಲದ ಸಂಸ್ಕೃತಿಯಲ್ಲಿ ಉಷಾ, ಪೃಥ್ವಿ, ಅದಿತೀ ಮೊದಲಾದ ಸ್ತ್ರೀ ದೇವತೆಗಳನ್ನು ಸ್ತುತಿಸುವ ಸೂಕ್ತಗಳು ಕಂಡು ಬರುತ್ತವೆ. ಋಗ್ವೇದದಲ್ಲಿ ದುರ್ಗಾಸೂಕ್ತ ದೇವೀ ಸೂಕ್ತ, ರಾತ್ರೀ ಸೂಕ್ತ, ಶ್ರೀಸೂಕ್ತ ಎಂಬ ಸೂಕ್ತಗಳು ಸ್ತ್ರೀ ದೇವತೆಗಳನ್ನು ಕುರಿತದ್ದಾಗಿವೆ.ವೈದಿಕ ಸಂಸ್ಕೃತಿಯ ಉತ್ತರಾರ್ಧದ ಪುರಾಣಗಳಲ್ಲಿ ಮಹಾಕಾವ್ಯಗಳಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಹಾಗೂ ಅವರ ಪತ್ನಿಯರಾದ ಸರಸ್ವತಿ,ಲಕ್ಷ್ಮೀ,ಪಾರ್ವತಿ ಇವರ ವರ್ಣನೆಯು ಕಂಡು ಬರುತ್ತದೆ.





ಮಾತೃದೇವತೆ ಅಥವಾ ಶಕ್ತಿಯನ್ನು ಪ್ರಧಾನವಾಗಿ ಪೂಜಿಸುವ ಶಾಕ್ತಮತವು ದೇಶದ ಎಲ್ಲೆಡೆ ವ್ಯಾಪಿಸಿತ್ತು.ಈಗಲೂ ಬಂಗಾಳದಲ್ಲಿ ಪ್ರಾಂತ್ಯದಲ್ಲಿ ಅಸ್ತಿತ್ವದಲ್ಲಿದೆ. ಕರ್ನಾಟಕ, ಆಂಧ್ರ ಪ್ರಾಂತ್ಯದಲ್ಲಿಯೂ ಶಾಕ್ತ ಮತದ ಪ್ರಭಾವ ಹೆಚ್ಚಾಗಿ ಇತ್ತು. ಈ ಮತದ ಆರಾಧ್ಯ ದೇವತೆ ದೇವಿಯ ರೂಪವಾದ ಕಾಳಿ ಅಥವಾ ಶಕ್ತಿ. ಶಾಕ್ತ ಮತದಲ್ಲಿ ವಾಮಾಚಾರ ಮತ್ತು ದಕ್ಷಿಣಾಚಾರ ಅಥವಾ ಸೌಮ್ಯಾ ಚಾರಗಳೆಂಬ ಎರಡು ಪಂಥವಿದೆ. ರಾಮಾಯಣದಲ್ಲಿ ಇಂದ್ರಜಿತವು ತನಗೆ ಜಯ ದೊರೆಯಲೆಂದು ನಿಕುಂಬಿಲಾದೇವಿಯನ್ನು ವಾಮಾಚಾರದಿಂದ ಪೂಜಿಸಿದನು.ಮಹಾಭಾರತದಲ್ಲಿ ಕೃಷ್ಣನ ಸೂಚನೆಯ ಮೇರೆಗೆ ತನಗೆ ಜಯ ದೊರೆಯಲೆಂದು ಅರ್ಜುನನು ದುರ್ಗಾ ದೇವಿಯ ಸ್ತೋತ್ರವನ್ನು ಮಾಡಿದನು.ಶಂಕರಾಚಾರ್ಯರು ಕರಾಳ ಸ್ವರೂಪಳಾದ ದೇವಿಯನ್ನು ಸೌಮ್ಯರೂಪಕ್ಕೆ ಬದ ಲಾಯಿಸಿದ ರೆಂಬುದು ಪ್ರಸಿದ್ಧವಾಗಿದೆ.ಶಂಕರಾಚಾರ್ಯರು ಪಂಚಾಯತನ ಪದ್ಧತಿಯಲ್ಲಿ ಅಂಬಿಕೆ ಅಥವಾ ದೇವಿಗೂ ಕೂಡಾ ಸ್ಥಾನ ನೀಡಿ ಶಾಕ್ತಮತದ ಸೌಮ್ಯರೂಪದ ಪೂಜಾ ವಿಧಾನಕ್ಕೆ ಮಹತ್ವ ನೀಡಿದರು.ಶ್ರೀವಿದ್ಯೋಪಾಸಕರಾಗಿ ಸೌಂದರ್ಯಲಹರಿ ಮೊದಲಾದ ದೇವೀಸ್ತೋತ್ರಗಳನ್ನು ರಚಿಸಿ ದೇವಿಯನ್ನು ಸ್ತುತಿಸಿದರು.







- ಡಾ॥ ಎಸ್. ನಂಜುಂಡಸ್ವಾಮಿ

78990 11310

ಪುರಾಣಗಳ ಕಾಲಕ್ಕೆ ಬಂದರೆ ಮುಖ್ಯ ಪುರಾಣಗಳೆನಿಸಿದ ಬ್ರಹ್ಮಾಂಡ, ಮಾರ್ಕಂಡೇಯ, ಶಿವ, ಲಿಂಗ, ಸ್ಕಂದ ಪುರಾಣಗಳಲ್ಲಿ ದೇವಿಯ ಮಹಿಮೆಯು ವರ್ಣಿತವಾಗಿದೆ. ಬ್ರಹ್ಮಾಂಡಪುರಾಣದಲ್ಲಿ ಹಯಗ್ರೀವ ಮುನಿಯು ಹೇಳಿದ ಲಲಿತಾ ತ್ರಿಪುರ ಸುಂದರಿ ಮಹಿಮೆಯನ್ನು ವರ್ಣಿಸಿದೆ ಈ ಪುರಾಣದಲ್ಲಿ ಲಲಿತಾಂಬಿಕೆಯು ಭಂಡಾಸುರನನ್ನು ವಧಿಸಿದ ವಿಷಯವನ್ನು, ಅವಳ ನಿವಾಸವನ್ನು, ಮಹಿಮೆಯನ್ನೂ ವರ್ಣಿಸಿದೆ. ಲಲಿತೋಪಖ್ಯಾನದಲ್ಲಿ ಹಾಗೂ ಶ್ರೀವಿದ್ಯೋಪಾಸಕ ತಾಂತ್ರಿಕ ಪಂಥಗಳಲ್ಲಿ ಶ್ರೀಚಕ್ರದ ಮಹಿಮೆಯನ್ನು, ಶಕ್ತಿಪೀಠಗಳನ್ನೂ ವರ್ಣಿಸಿದೆ. ಉಪಪುರಾಣಗಳಾದ ದೇವೀ ಭಾಗವತದಲ್ಲಿ ಮತ್ತು ಕಾಳಿಕಾಪುರಾಣದಲ್ಲಿ ದೇವಿಯ ಮಹಿಮೆ ಮತ್ತು ಶಕ್ತಿ ಪೀಠಗಳು ವರ್ಣಿತವಾಗಿದೆ.

## ಶಕ್ತಿ ಪೀಠಗಳು





ಶ್ರೀಚಕ್ರದ ಮಧ್ಯದಲ್ಲಿರುವ ಬಿಂದುಮಂಡಲವನ್ನು ಓಡ್ಯಾಣಪೀಠವೆಂದು, ತ್ರಿಕೋಣಾಗ್ರಗಳಲ್ಲಿರುವ ಸ್ಥಾನಗಳಿಗೆ ಪೂರ್ಣಗಿರಿ,ಜಾಲಂಧರ ಮತ್ತು ಕಾಮೇಶ್ವರಿ ಪೀಠಗಳೆಂದು ಹೆಸರು, ಓಡ್ಯಾಣ ಪೀಠವು ವಾಯುವ್ಯದ ಸ್ವಾತೀ ಕಣಿವೆಯಲ್ಲಿರುವ ಓಡ್ಯಾನ್ (ಔಡ್ರ) ಅಥವಾ ವೃಂದಾವನ ಅಥವಾ ಉದ್ಯಾನವೆಂಬ ಸ್ಥಳ.ಇಲ್ಲಿಯ ದೇವತೆ ಕಾತ್ಯಾಯಿನಿ. ಪೂರ್ಣಗಿರಿಯು ಉತ್ತರ ಖಾಂಡದ ಶಾರದಾನದಿ ದಡದಲ್ಲಿರುವ ಉತ್ತರ ಬದರಿ. ಜಾಲಂಧರ ಪೀಠವು ಪಂಜಾಬಿನ ಜಲಂಧರ್, ಇಲ್ಲಿನ ದೇವತೆ ಚಂಡಿ. ಕಾಮೇಶ್ವರಿ ಪೀಠವು ಕಾಮರೂಪ ಅಂದರೆ ಆಸ್ಸಾಂನ ಗೌಹತಿ, ಇಲ್ಲಿನ ದೇವತೆ ಕಾಮಾಖ್ಯ ಅಥವಾ ಕಾಮೇಶ್ವರಿ. ಮೊದಲಿಗೆ ಇವು ನಾಲ್ಕು ಶಕ್ತಿ ಪೀಠಗಳಾಗಿದ್ದವು.





ಶಕ್ತಿಪೂಜೆಯು ಹೆಚ್ಚು ವ್ಯಾಪಕವಾಗಿ 108, 51, 28, 18 ಶಕ್ತಿಪೀಠಗಳ ಪ್ರಸ್ತಾಪ ಅನೇಕ ತಾಂತ್ರಿಕ ಮತ್ತು ಶ್ರೀ ವಿದ್ಯೋಪಾಸಕ ಗ್ರಂಥಗಳಲ್ಲಿ ಕಂಡು ಬರುತ್ತದೆ. ಶಕ್ತಿ ಪೀಠಕ್ಕೆ ಸಂಬಂಧಿಸಿದಂತೆ ಇರುವ ಪೌರಾಣಿಕ ಕಥೆ ಹೀಗಿದೆ. ದಕ್ಷ ಪ್ರಜಾಪತಿಯು ಯಜ್ಞ ಮಾಡುತ್ತಿದ್ದಾಗ, ಮಗಳಾದ ಸತೀದೇವಿ ಅಥವಾ ಪಾರ್ವತಿಯು ಆಹ್ವಾನ ವಿಲ್ಲದಿದ್ದರೂ ಹೋದಳು.ತಂದೆಯು ತನ್ನ ಪತಿ ಶಿವನನ್ನು ಹಳಿದಾಗ,ಯಜ್ಞಕುಂಡದೊಳಗೆ ಬಿದ್ದು ದಗ್ಧಳಾದಳು. ಇದನ್ನು ಕೇಳಿದ ಶಿವನು ಅಲ್ಲಿಗೆ ಬಂದು ಕೋಪದಿಂದ ವೀರಭದ್ರನನ್ನು ಸೃಷ್ಟಿಸಿ,ಯಜ್ಞವನ್ನು ಧ್ವಂಸ ಮಾಡಿ ದಕ್ಷನನ್ನು ಸಂಹರಿಸಿದನು. ಅಗ್ನಿಯಲ್ಲಿದ್ದ ಸತಿಯ ಕಳೇಬರವನ್ನು ಶಿವನು ಹೆಗಲ ಮೇಲೆ ಹೊತ್ತುಕೊಂಡು ಅಲೆದಾಡತೊಡಗಿದನು. ಶಿವನನ್ನು ವಿಹ್ವಲತೆಯಿಂದ ದೂರ ಮಾಡಲು ವಿಷ್ಣುವು ತನ್ನ ಚಕ್ರವನ್ನು ಬಿಟ್ಟು ಸತೀದೇವಿಯ ದೇಹವನ್ನು ಚೂರು ಚೂರು ಮಾಡಿದನು. ಅವು ಬಿದ್ದ ಸ್ಥಳಗಳೇ ಶಕ್ತಿಪೀಠಗಳು,ಚೂರಾದ ಸತೀದೇವಿಯ ದೇಹದ ಸ್ಥನಗಳು ಜಾಲಂಧರದಲ್ಲಿ, ತೊಡೆಗಳು ಓಡ್ಯಾಣದಲ್ಲಿ, ಕತ್ತು ಮತ್ತು ಭುಜಗಳು ಪೂರ್ಣಗಿರಿಯಲ್ಲಿ,ಯೋನಿ ಮಂಡಲವು ಕಾಮರೂಪದಲ್ಲಿ,ಕಾಲುಗಳು ದೇವಿಕೂಟದಲ್ಲಿ ನಾಭೀ ಮಂಡಲವು ದಿಕ್ಕರ ವಾಸಿನಿಯಲ್ಲಿ,ತಲೆಯು ಲಲಿತಾ ಕಾಂತಾ ಕ್ಷೇತ್ರದಲ್ಲಿ ಬಿದ್ದವು. ಈ ಶಕ್ತಿಪೀಠಗಳಲ್ಲಿ ಶಿವನು ಕೂಡಾ ತನ್ನ ಒಂದೊಂದು ಅಂಶದಿಂದ ನೆಲೆಸಿ ಶಕ್ತಿ ಯೊಡಗೂಡಿ ಭಕ್ತಾದಿಗಳನ್ನು ಹರಸುತ್ತಿದ್ದಾನೆ. ಈ ಎಲ್ಲಾ ಶಕ್ತಿ ಪೀಠಗಳಲ್ಲಿ ದೇವಿಗೆ ಪ್ರತ್ಯೇಕ ಬೃಹತ್ ದೇವಾಲಯಗಳಿದ್ದು ಭಕ್ತರ ಸಂಖ್ಯೆ ಅಗಣಿತವಾಗಿದೆ.







## ಅಷ್ಟಾದಶ ಶಕ್ತಿಪೀಠಗಳು

ಅಷ್ಟಾದಶ ಶಕ್ತಿಪೀಠಗಳ ಬಗ್ಗೆ ಒಂದು ಪ್ರಸಿದ್ಧವಾದ ಶ್ಲೋಕ ಈ ರೀತಿ ಇದೆ. "ಲಂಕಾಯಾಂ ಶಾಂಕರೀದೇವಿ, ಕಾಮಾಕ್ಷಿ ಕಾಂಚಿಕಾಪುರೇ,ಪ್ರದ್ಯುಮ್ನೇ ಶೃಂಖಲಾದೇವಿ, ಚಾಮುಂಡಿ ಕ್ರೌಂಚಪಟ್ಟಣೇ, ಅಲಂಪುರೇ ಜೋಗುಳಾಂಬಾ, ಶ್ರೀಶೈಲೇ ಭ್ರಮರಾಂಬಿಕಾ,

ಮಾಹುರ್ಯೇ ಏಕವೀರಿಕಾ, ಉಜ್ಜಯ್ಯಾಂ ಮಹಾಕಾಳೀ, ಪೀಠಿಕಾಯೇ ಪುರುಹೂತಿಕಾ, ಬಡನ್ನವೇ ಗಿರಿಜಾದೇವಿ, ಮಾಣಿಕ್ಯೇ ದಕ್ಷ ವಾಟಿಕಾ, ಹರಿಕ್ಷೇತ್ರೇ ಕಾಮರೂಪಿ, ಪ್ರಯಾಗೇ ಮಾಧವೇಶ್ವರಿ, ಜ್ವಾಲಾಯಾಂ ವೈಷ್ಣವೀ ದೇವಿ, ಗಯಾಯಾಂ, ಮಾಂಗಲ್ಯಾ ಗೌರಿಕಾ, ವಾರಣಾಸ್ಯಂತು ವಿಶಾಲಾಕ್ಷಿ, ಕಾಶ್ಮೀರೇತು ಸರಸ್ವತಿ, ಅಷ್ಟಾದಶ ಶಕ್ತಿಪೀಠಾಣಿ ಯೋಗಿಣಾ ಭವತು ದುರ್ಲಭಂ".

ಹೆಚ್ಚು ಪ್ರಸಿದ್ಧಿಯನ್ನು ಪಡೆದಿರುವ ಕೆಲವು ಶಕ್ತಿಪೀಠಗಳ ಈ ಕೆಳಗಿನಂತಿವೆ. ಆಸ್ಸಾಮಿನ ಕಾಮಾಖ್ಯ ಮತ್ತು ಬಾಂಗ್ಲಾದೇಶದ ಶ್ರೀಹಟ್ಟ (ಮಹಾಲಕ್ಷ್ಮೀ - ಸಿಲೆಟ್), ಪಶ್ಚಿಮ ಬಂಗಾಳದ ಕಲ್ಕತ್ತಾ (ಮಹಾಕಾಳಿ), ಮಹಾರಾಷ್ಟ್ರದ ಕೊಲ್ಹಾಪುರ (ಮಹಾಲಕ್ಷ್ಮೀ), ತುಳಜಾಪುರ (ಭವಾನಿ), ಮಾಹೂರ್ (ರೇಣುಕಾ), ಕರ್ನಾಟಕದಲ್ಲಿ ಕೊಲ್ಲೂರು (ಮೂಕಾಂಬಿಕಾ), ಶೃಂಗೇರಿ (ಶಾರದಾಂಬಾ), ಮೈಸೂರು (ಚಾಮುಂಡೇಶ್ವರಿ), ತಮಿಳುನಾಡಿನ ಕಾಂಚೀಪುರ(ಕಾಮಾಕ್ಷಿ), ಮಧುರೈ (ಮೀನಾಕ್ಷಿ), ಕೇರಳದ ಕ್ರಾಂಗನೂರು (ಕುರುಂಬ ಭಗವತಿ).ಮನ್ನಡಿ (ಕಾಳಿ), ತೆಲಂಗಾಣಾದ ಅಲಂಪುರ(ಜೋಗುಳಾಂಬಾ), ಆಂಧ್ರಪ್ರದೇಶದ ವಿಜಯ ವಾಡ (ಕನಕ ದುರ್ಗಾ), ಮಹಾದೇವಿ (ಜಾಲಂಧರ), ಕುಬ್ಜೆ (ಕನ್ಯಾಕುಬ್ಜ - ಕನೌಜ್), ಸಿಂಹಿಕೆ (ಟ್ರಿಂಕಾಮಲಿ - ಶ್ರೀಲಂಕಾ),ಉಜ್ಜಯಿನಿ (ಮಹಾಕಾಳಿ ಅಥವಾ ಮಹಾಕಾಳೇಶ್ವರಿ)





## ಮಾರ್ಕಂಡೇಯ ಪುರಾಣದ ದುರ್ಗಾ ಸಪ್ತಶತಿ ಅಥವಾ ದೇವಿ ಮಾಹಾತ್ಮೆ





ಮಾರ್ಕಂಡೇಯ ಪುರಾಣಾಂತರ್ಗತವಾದ 13 ಅಧ್ಯಾಯಗಳ 700 ಶ್ಲೋಕಗಳ ಶ್ರೀದುರ್ಗಾ ಸಪ್ತಶತಿಯು ದೇವಿಯ ಮಹಿಮೆಯನ್ನು ವರ್ಣಿಸುವ ಅತ್ಯಂತ ಜನಪ್ರಿಯ ದೇವಿ ಮಾಹಾತ್ಮೈಯಾಗಿದೆ. ಮಾರ್ಕಂಡೇಯ ಮುನಿಯು ಸುರಥ ಎಂಬ ರಾಜ ಮತ್ತು ಸಮಾಧಿ ಎಂಬ ವೈಶ್ಯನಿಗೆ ದೇವಿ ಮಾಹಾತ್ಮೆಯನ್ನು ವರ್ಣಿಸಿದನು.ವೈದಿಕ ಯುಗದಲ್ಲಿ ಆಂಭ್ರಣ ಎಂಬ ಋಷಿಯ ಮಗಳಾದ ವಾಕ್ ಎಂಬುವವಳೇ ಈ ದೇವೀ ಸೂಕ್ತದ ಋಷಿಯಾಗಿದ್ದಾಳೆ. ವಿಪತ್ತುಗಳ ನಿವಾರಣೆಗೆ ಮನೆಮನೆಯಲ್ಲಿಯೂ ಇದರ ಪಾರಾಯಣ ನಡೆಯುತ್ತಿರುತ್ತದೆ.ಇದು ಸಾಹಿತ್ಯದ ದೃಷ್ಟಿಯಿಂದಲೂ ಅತ್ಯಂತ ಸರಳವಾದ ಸುಂದರವಾದ ದೇವಿ ಸ್ತುತಿಯಾಗಿದೆ. ದುರ್ಗಾ ಸಪ್ತಶತಿಯಲ್ಲಿ ದೇವಿಯ ಮೂರು ಚರಿತೆಗಳಿವೆ. ಪ್ರಥಮ ಚರಿತೆಯಲ್ಲಿ ಮಹಾಕಾಳಿಯ, ದ್ವಿತಿಯ ಚರಿತ್ರೆಯಲ್ಲಿ ಮಹಾಲಕ್ಷ್ಮಿಯ ತೃತೀಯ ಚರಿತ್ರೆ ಯಲ್ಲಿ ಮಹಾ ಸರಸ್ವತಿಯ ಅವತಾರದ ಮಹಿಮೆಗಳನ್ನು ವರ್ಣಿಸಲಾಗಿದೆ.



## ನವದುರ್ಗೆಯರು

ದೇವೀ ಮಹಾತ್ಮೈಯಲ್ಲಿ ಆರಂಭದಲ್ಲಿ ಬರುವ ದೇವಿ ಕವಚದಲ್ಲಿ ದೇವಿಯ ಒಂಬತ್ತು ಅವತಾರಗಳನ್ನು ವರ್ಣಿಸಿದೆ.ಚಾಮುಂಡಾಂಬಿಕೆಗೆ ಪ್ರೇತವೇ ಆಸನ. ವಾರಾಹಿ ಮಹಿಷ ವಾಹನಾರೂಢಳು.ಐಂದ್ರಿಗೆ ಆನೆ, ವೈಷ್ಣವಿಗೆ ಗರುಡ, ಮಾಹೇಶ್ವರಿಗೆ ವೃಷಭ, ಕೌಮರಿಗೆ ನವಿಲು,ಲಕ್ಷ್ಮಿಗೆ ಕಮಲ ಬ್ರಾಹ್ಮೀಣಿ. ಹಂಸ ಮತ್ತು ಈಶ್ವರಿಗೆ ಕೂಡಾ ವೃಷಭವೇ ವಾಹನಗಳಾಗಿವೆ .ಇವರನ್ನು ನವದುರ್ಗೆಯರು ಎಂದು ಕರೆಯಲಾಗಿದೆ. ಪುರಾಣೋಕ್ತ ಇನ್ನೊಂದು ಮೂಲದ ಪ್ರಕಾರ ನವದುರ್ಗೆಯವರು ಹಾಗೂ ಅವರ ವಾಹನಗಳು ಹೀಗಿವೆ. ಶೈಲಪುತ್ರಿ-ವೃಷಭ,ಬ್ರಹ್ಮಚಾರಿಣಿ ನಿಂತಿರುತ್ತಾಳೆ. ಚಂದ್ರಘಂಟಾ-ವ್ಯಾಘ್ರ,ಕೂಷ್ಮಾಂಡಾ-ವ್ಯಾಘ್ರ,ಸ್ಕಂದ ಮಾತಾ-ಸಿಂಹ, ಕಾತ್ಯಾಯಿನಿ-ಸಿಂಹ,ಕಾಲರಾತ್ರಿ-ಕತ್ತೆ,ಮಹಾಗೌರಿ-ವೃಷಭ,ಸಿದ್ಧಿ ಧಾತ್ರೀ-ಕಮಲ ಇವರನ್ನೂ ನವದುರ್ಗೆಯರೆಂದು ಪುರಾಣಗಳಲ್ಲಿ ಹೇಳಿದೆ. ನವರಾತ್ರಿಯ ಒಂಬತ್ತು ದಿನವೂ ದೇವಿಯ ಈ ಅವತಾರಗಳನ್ನು ಪೂಜಿಸಲಾಗುತ್ತದೆ.





ದೇವಿ ಮಾಹಾತ್ಮ್ಯದ ಪ್ರಥಮ ಚರಿತ್ರೆಯಲ್ಲಿ ತಾಮಸ ರೂಪಿಣಿಯಾದ ಮಹಾಮಾಯೆಯು, ಯೋಗನಿದ್ರೆಯಲ್ಲಿದ್ದ ವಿಷ್ಣುವಿನ ಕಿವಿಗಳಿಂದ ಹುಟ್ಟಿದ ಮಧು ಕೈಟಭರೆಂಬ ರಾಕ್ಷಸರನ್ನು, ಯೋಗ ನಿದ್ರೆಯ ರೂಪದಿಂದ ವಿಷ್ಣುವನ್ನು ಎಚ್ಚರಿಸಿ, ವಿಷ್ಣುವಿನ ಮೂಲಕವೇ ಮಧುಕೈಟಬರು ಸಂಹಾರ ವಾಗುವಂತೆ ಮಾಡಿದಳು. ದ್ವಿತೀಯ ಚರಿತೆಯಲ್ಲಿ ಹರಿಹರಬ್ರಹ್ಮರ ಮುಖದಿಂದ ತೇಜೋ ರೂಪವಾಗಿ ಬಂದ ಮಹಾಲಕ್ಷ್ಮಿಯು ಆವಿರ್ಭವಿಸಿದಳು. ಜಗನ್ಮಾತೆಯಾದ ಮಹಾಲಕ್ಷ್ಮಿಯು ಮಹಿಷಾಸುರ ನನ್ನು ವಧಿಸಿ,ಮಹಿಷಶರೀರದಿಂದ ಅವನನ್ನು ಮುಕ್ತನನ್ನಾಗಿ ಮಾಡಿದಳು. ಮಹಿಷಾಸುರ ಮರ್ದಿ ನಿಯಾದ ಮಹಾಲಕ್ಷ್ಮಿಯು ರಜೋಗುಣ ಪ್ರವರ್ತ ಕಳೆನಿಸಿದಳು.

### ಸಪ್ತಮಾತೃಕೆಯರು

ದುರ್ಗಾ ಸಪ್ತಶತಿಯ ಉತ್ತಮ ಚರಿತೆಯಲ್ಲಿ ದೇವತೆಗಳ ಪ್ರಾರ್ಥನೆಯಂತೆ ಸತ್ವಗುಣಾಧಿ



**ಸೂರ್ಯಪ್ರಭ ವಾಹನ**

ಏಳನೇ ದಿನದ ಬೆಳಗ್ಗೆ ಶ್ರೀ ವೇಂಕಟೇಶ್ವರನು ಪ್ರತಿಮೂರ್ತಿಯಾದ ಮಲೆಯಪ್ಪಸ್ವಾಮಿ ಏಳು ಕುದುರೆಗಳುಳ್ಳ ರಥದಲ್ಲಿ ಸೂರ್ಯದೇವನೇ ಸಾರಥಿಯಾಗಿರಲು ಸ್ವರ್ಣಾಚಿತ ಸೂರ್ಯಪ್ರಭಾ ವಾಹನದಲ್ಲಿ ಭಕ್ತರಿಗೆ ದರ್ಶನ ನೀಡುತ್ತಾನೆ. ಅನಂತ ವಿಶ್ವಕ್ಕೆ ತಾನೇ ವಿಶ್ವಪತಿಯಾಗಿದ್ದೇನೆಂದು, ಸರ್ವಜೀವಿಗಳಿಗೆ ತಾನೇ ಅನ್ನಪ್ರದಾತನೆಂದೂ ಭಕ್ತರಿಗೆ ಸಂದೇಶ ನೀಡುತ್ತಾನೆ.

ಕಳಾದ ಪಾರ್ವತಿಯು ಶರೀರ ಕೋಶದಿಂದ ಮಂಗಳ ಮೂರ್ತಿಯೂ, ಅತಿಲೋಕ ಸುಂದರಿಯೂ ಆದ ಕೌಶಿಕಿ ಎಂಬ ದೇವಿಯು ಉದ್ಭವಿಸಿ ಧೂಮ್ರಲೋಚನವೆಂಬ ರಕ್ಕಸನನ್ನು ವಧಿಸಿದಳು.ತದ ನಂತರ ಕಾಳಿಕಾ ರೂಪದಿಂದ ಚಂಡ - ಮುಂಡರನ್ನು ವಧಿಸಿದಳು.ಚಂಡಮುಂಡರನ್ನು ವಧಿ ಸಿದ್ದರಿಂದ ಈಕೆಗೆ ಚಾಮುಂಡಾ ಎಂಬ ಹೆಸರು ಬಂದಿತು. ಕೊನೆಯದಾಗಿ ರಕ್ತಬೀಜಾಸುರ, ಶುಂಭ ನಿಶುಂಭರೊಡನೆ ಸಿಂಹವಾಹಿನಿಯಾದ ಕೌಶಿಕಿ ರೂಪದ ದುರ್ಗಾದೇವಿಯು ಯುದ್ಧೋನ್ಮುಖಳಾದಳು. ಬ್ರಹ್ಮ, ಈಶ್ವರ, ಸ್ಕಂದ, ವಿಷ್ಣು ಮತ್ತು ಇಂದ್ರ ಈ ದೇವತೆಗಳ ಶಕ್ತಿಗಳು ಆ ದೇವತೆಗಳ ರೂಪ ದಿಂದಲೇ ದೇವಿಯಲ್ಲಿ ಐಕ್ಯವಾದವು.

ಅಸುರರ ಬಲವು ಹೆಚ್ಚಾದಾಗ, ಅವರೊಡನೆ ಹೋರಾಡಲು, ದೇವಿಯು ತನ್ನಿಂದಲೇ ಏಳು ಶಕ್ತಿಯ ರೂಪಗಳು ಉದ್ಭವವಾಗುವಂತೆ ಮಾಡಿ ದಳು. ಇವರೇ ಸಪ್ತ ಮಾತೃಕೆಯರಾದ ಬ್ರಾಹ್ಮೀ ಅಥವಾ ಬ್ರಹ್ಮಾಣಿ, ಮಾಹೇ ಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ,ನಾರಸಿಂಹೀ ಮತ್ತು ಇಂದ್ರಾಣಿ ಅಥವಾ ಐಂದ್ರಿ ಇವರು ಕ್ರಮವಾಗಿ ಬ್ರಹ್ಮ, ಮಹೇಶ್ವರ, ಕುಮಾರ (ಸ್ಕಂದ), ವಿಷ್ಣು, ವರಾಹ, ನರಸಿಂಹ ಮತ್ತು ಇಂದ್ರ ಈ ದೇವರುಗಳ ಪತ್ನಿಯರು. ಆದಕಾರಣ ಅವರಿಗೂ ಆ ದೇವತೆಗಳ ರೂಪ, ಆಯುಧ ಮತ್ತು ವಾಹನಗಳು ಇರುತ್ತವೆ. ಕೆಲವು ಕಡೆ ನಾರಸಿಂಹಿಗೆ ಬದಲು ಚಾಮುಂಡಾ ಎಂಬ ರೂಪವೇ ಹೆಚ್ಚಾ ಗಿರುತ್ತದೆ. ಆದರೆ ಇವರೆಲ್ಲರ ಮೂಲ ಶಕ್ತಿ ದುರ್ಗೆ.

ಸಾಮಾನ್ಯವಾಗಿ ಶಿಲ್ಪ ಅಥವಾ ಮೂರ್ತ ರೂಪದಲ್ಲಿ ಇವರು ಏಳು ಜನರೂ ಸಾಲಾಗಿ ಆಯುಧಗಳ ಸಮೇತ ವೀರಾಸನದಲ್ಲಿ ಕುಳಿತಿರುತ್ತಾರೆ. ಇವರ ಪೀಠದ ಕೆಳಗೆ ಇವರ ವಾಹನಗಳು ಇರುತ್ತವೆ. ಏಳು ಜನರ ಭಾಗದಲ್ಲಿ ಗಣಪತಿಯ ಬಲಭಾಗದಲ್ಲಿ ವೀಣಾಧರಿ ಶಿವನ ಅಥವಾ ಪ್ರತಿಮೆ ಗಳೂ ಇರುವುದುಂಟು.ಇವರ ವಾಹನಗಳು ಇಂತಿವೆ. ಬ್ರಾಹ್ಮೀ - ಹಂಸ, ಮಾಹೇಶ್ವರಿ - ವೃಷಭ,ಕೌಮಾರಿ- ನವಿಲು, ವೈಷ್ಣವಿ - ಗರುಡ, ವಾರಾಹಿ- ವರಾಹ, ಇಂದ್ರಾಣಿ (ಐಂದ್ರಿ)- ಆನೆ, ಚಾಮುಂಡಾ-ಸಿಂಹ. ತಂತ್ರ ಶಾಸ್ತ್ರದ ಪ್ರಕಾರ ಓಂಕಾರವನ್ನು ಪ್ರತಿನಿಧಿಸುವ ಶಕ್ತಿ ಬ್ರಾಹ್ಮೀ, ವಿಶ್ವವನ್ನು ಸಂಘಟಿಸಿ ಸುವ್ಯವಸ್ಥೆಗೊಳಿಸುವವಳು ವೈಷ್ಣವಿ, ಮಾಹೇಶ್ವರಿಯೂ ಭೂಮಿಯ ಮೇಲಿನ ಜೀವಿಗಳಲ್ಲಿ ಅಂತಸ್ಥವಾಗಿದ್ದು ಕೊಂಡು ಅವರಿಗೆ ವ್ಯಕ್ತಿತ್ವ ಹಾಗೂ ಶಕ್ತಿಯನ್ನು ನೀಡುತ್ತಾ ಅವರನ್ನು ಕರ್ಮ ಮಾರ್ಗದಲ್ಲಿ ತೊಡಗಿಸುವವಳು.ಕೌಮಾರಿಯು ಆತ್ಮದಲ್ಲಿ ನೆಲೆಸಿ ಆಸೆ ಆಕಾಂಕ್ಷೆಗಳನ್ನು ಪ್ರಚೋದಿಸುವ ಚಿರಯೌವ್ವನಸ್ಥೆ. ವಾರಾಹಿಯು ಜೀವಿಗಳಿಗೆ ಆಹಾರವನ್ನು ನೀಡುವವಳು ಹಾಗೂ ಎಲ್ಲವನ್ನು ನುಂಗಿ ನೊಣೆಯುವವಳು.ಇಂದ್ರಾಣಿಯು ಆಧ್ಯಾತ್ಮಿಕ ಶಕ್ತಿಯನ್ನು ನೀಡು ವವಳು.

### ಸಪ್ತಮಾತೃಕೆಯರು ಮತ್ತು ದೇವಿಯ ಮೂರ್ತಿಶಿಲ್ಪ

ಸಪ್ತ ಮಾತೃಕೆಯರ ಮೂರ್ತಿ ಶಿಲ್ಪದ ಆರಾಧನೆಯು ಗುಪ್ತರ ಕಾಲ ದಲ್ಲಿಯೇ ಹೆಚ್ಚಾಗಿ ಪ್ರಚಲಿತದಲ್ಲಿತ್ತು.ಗುಪ್ತರ ಶಾಸನಗಳಲ್ಲಿ ಮಾತೃಕೆಯರನ್ನು ಸ್ತುತಿಸಲಾಗಿದೆ. ಸ್ಕಂದಗುಪ್ತನ ಕಾಲದ ವಿಹಾರ ಶಿಲ್ಪದಲ್ಲಿ ಸಪ್ತಮಾತೃಕೆಯರ ಶಿಲ್ಪಗಳಿವೆ.ಕದಂಬರು ಮತ್ತು ಚಾಲುಕ್ಯರು ಮಾತೃಗಣದ ಆರಾಧಕರು. ಕದಂಬ ರಾಜರು ಮಹಾಸೇನ ಅಂದರೆ ಕಾರ್ತಿಕೇಯ ಮತ್ತು ಸಪ್ತ ಮಾತೃಕಾ ಗಣಗಳಿಂದ ಅಭಿಷಿಕ್ತರಾದವರು ಎಂದು ಹೇಳಿಕೊಂಡಿದ್ದು, ಅವರ ಶಾಸನಗಳು"ಸ್ವಾಮಿ ಮಹಾಸೇನಾ ಮಾತೃಗಣಾನುದ್ಯ ತಾಭಿಷಿ ಕ್ತಾನಾಂ"ಎಂದು ಆರಂಭವಾಗುತ್ತವೆ. ಆದರೆ ಕದಂಬರ ಕಾಲದ ಮಾತೃ ದೇವತೆಗಳ ವಿಗ್ರಹಗಳು ಈಗ ಎಲ್ಲೂ ಕಂಡು ಬರುತ್ತಿಲ್ಲ.



ಕ್ರಿ.ಶ. 570 ರಲ್ಲಿ ನಿರ್ಮಿತವಾದ ಬಾದಾಮಿ ಚಾಲುಕ್ಯರ ಗುಹಾ ದೇವಾಲಯಗಳಲ್ಲಿ ಮಹಿಷಮರ್ದಿನಿಯ ಬೃಹತ್ ಶಿಲ್ಪಗಳು ಕಂಡು ಬರುತ್ತವೆ. ಇವರ ಕಾಲದಲ್ಲಿ ರಚಿತವಾದ ಐಹೊಳೆಯ ದುರ್ಗಾ ದೇವಾಲಯವು ಪ್ರಸಿದ್ಧವಾಗಿದೆ. ಸಪ್ತ ಮಾತೃಕೆಯರು ಒಟ್ಟಾಗಿ ಅಥವಾ ಬಿಡಿ ಬಿಡಿಯಾಗಿ ಪೂಜಿಸಲ್ಪಡುತ್ತಾರೆ. ಮಹಿಷಾಸುರನನ್ನು ಕೊಲ್ಲುತ್ತಿರುವ ಮಹಿಷಮರ್ದಿನಿ, ದುರ್ಗಿ ಅಥವಾ ಚಾಮುಂಡಾಂಬಿಕೆಯ ವಿಗ್ರಹ ರೂಪದಲ್ಲಿ ಪ್ರತ್ಯೇಕ ಆಲಯಗಳಲ್ಲಿ ಅಥವಾ ಶಿವಾಲಯದ ಪರಿಹಾರ ದೇವತೆಗಳೊಡಗೊಡಿ ಹೆಚ್ಚಾಗಿ ಪೂಜಿಸಲ್ಪಡುತ್ತಾಳೆ. ಕರ್ನಾಟಕ ಮತ್ತು ಏಳೂರಮ್ಮ, ಪಟ್ಟಣದಮ್ಮ, ಮಹಾಲಕ್ಷ್ಮೀ ಮೊದಲಾದ ಹೆಸರಿನ ಗ್ರಾಮ ದೇವತೆಗಳಿದ್ದು, ಅವರೆಲ್ಲರೂ ಶಕ್ತಿ ಅಥವಾ ದುರ್ಗೆಯ ಸ್ವರೂಪರೇ.

**ನವರಾತ್ರಿ**

ನವರಾತ್ರಿ ಹಬ್ಬವು ಶಕ್ತಿಯ ಆರಾಧನೆಯ ಸಮಯವಾಗಿದೆ. ಇತಿಹಾಸ ಕಾಲದಲ್ಲಿ ರಾಜರು ವಿಜಯ ದಶಮಿಯಂದು ದೇವಿಯನ್ನು, ಶಮೀವೃಕ್ಷವನ್ನು ಪೂಜಿಸಿ ಜೈತ್ರಯಾತ್ರೆಗೆ ಹೊರಡುತ್ತಿದ್ದರು ಅಥವಾ ಜೈತ್ರಯಾತ್ರೆಯ ನಂತರ ವಿಜಯೋತ್ಸವವನ್ನು ಆಚರಿಸುತ್ತಿದ್ದರು. ದಕ್ಷಿಣಭಾರತದಲ್ಲಿ ಕಾಳಿಯನ್ನು ಚಾಮುಂಡಿ ಅಥವಾ ದುರ್ಗಾ ಎಂದು ಪೂಜಿಸುತ್ತಾರೆ. ಮೈಸೂರು ಅರಸರ ಮನೆದೇವತೆ ಚಾಮುಂಡೇಶ್ವರಿ, ಶಿವನು ಮಹಾಬಲನ ರೂಪದಲ್ಲಿ ನೆಲೆಸಿರುವ ಈ ಬೆಟ್ಟವನ್ನು ಮಹಾಬಲಾದ್ರಿ ಅಥವಾ ಚಾಮುಂಡಿಬೆಟ್ಟ ಎನ್ನುತ್ತಾರೆ. ವಿಜಯನಗರ ಕಾಲದಲ್ಲಿ ವೈಭವಯುತವಾಗಿ ನಡೆಯುತ್ತಿದ್ದ ನವರಾತ್ರಿ ಅಥವಾ ಹತ್ತುದಿನಗಳ

ಏಳನೇ ದಿನದ ರಾತ್ರಿಗೆ ಶ್ರೀನಿವಾಸಸ್ವಾಮಿ ಬಿಳಿಯ ವಸ್ತ್ರಧಾರಿಯಾಗಿ, ಮಲ್ಲಿಗೆ ಜಾಜಿ ಹೂಮಾಲೆಗಳನ್ನು ಧರಿಸಿ ಚಂದ್ರವಾಹನದಲ್ಲಿ ಕುಳಿತು ದರ್ಶನ ನೀಡುತ್ತಾನೆ. ಚಂದ್ರನು ಉತ್ಪನ್ನ ಕಾರಣನು. ಸ್ಥಾವರ ಜಂಗಮಾದಿಗಳ ವೃದ್ಧಿಕಾರಕನಾದ ಚಂದ್ರನ ವಾಹನದಲ್ಲಿ ಕುಳಿದ ಶ್ರೀನಿವಾಸನು ಕೂಡ ವೃದ್ಧಿ ಕಾರಣನೇ ಅಲ್ಲವೇ!



ಆಂಧ್ರಪ್ರದೇಶದ ಭಾಗವನ್ನು ಸುಮಾರು 600 ವರ್ಷಗಳ ಕಾಲ ಆಳಿದ ಗಂಗರಸರ ಕಾಲದ ಶಿವಾಲಯಗಳಲ್ಲಿ, ನಂತರ ಆಳ್ವಿಕೆ ನಡೆಸಿದ ಕಲ್ಯಾಣದ ಚಾಲುಕ್ಯರು ಮತ್ತು ಹೊಯ್ಸಳರು ನಿರ್ಮಿಸಿದ ಶಿವಾಲಯಗಳಲ್ಲಿ ಸಾಮಾನ್ಯವಾಗಿ ಸಪ್ತಮಾತೃಕೆಯರ ಸಮೂಹ ವಿಗ್ರಹಗಳು ಇದ್ದೇ ಇರುತ್ತವೆ. ಕೆಲವು ಪ್ರಮುಖ ದೇವಾಲಯಗಳಲ್ಲಿ ಸಪ್ತಮಾತೃಕೆಯರ ದೊಡ್ಡದಾದ ಬಿಡಿ ವಿಗ್ರಹಗಳನ್ನೂ ಪ್ರತ್ಯೇಕ ಆಲಯಗಳನ್ನೂ ನೋಡಬಹುದು. ವಿಜಯನಗರ ಕಾಲದಲ್ಲಿ ಶಿವಾಲಯಗಳ ಪಕ್ಕದಲ್ಲಿ ಪಾರ್ವತಿ ದೇವಿಗೆ ಪ್ರತ್ಯೇಕ ಆಲಯವನ್ನು ನಿರ್ಮಿಸುವ ಪರಿಪಾಠ ಬೆಳೆಯಿತು. ಪಾರ್ವತಿಯ ರೂಪವಾದ ದುರ್ಗಿಗೆ, ಚಾಮುಂಡಿಗೆ ಭಾರತಾದ್ಯಂತ ಅನೇಕ ಕಡೆ ಪ್ರತ್ಯೇಕ ದೇವಾಲಯಗಳಿವೆ. ದಕ್ಷಿಣ ಭಾರತದ ಪ್ರತಿಯೊಂದು ಊರಿಗೂ, ಎಲ್ಲಮ್ಮ, ಚೌಡೇಶ್ವರಿ, ಕಾಲದ ದಸರಾ ಹಬ್ಬವನ್ನು ಮೈಸೂರು ಒಡೆಯರು ಮುಂದುವರಿಸಿಕೊಂಡು ಬಂದರು. ಶರದ್ ಋತುವಿನ, ಆಶ್ವಯುಜ ಮಾಸದ ಪಾಡ್ಯದಿಂದ ಆರಂಭವಾಗುವ ನವರಾತ್ರಿಯನ್ನು ಶರನ್ನವರಾತ್ರಿ ಎನ್ನುತ್ತಾರೆ. ಇದು ಶಕ್ತಿ ದೇವತೆಯ ಆರಾಧನೆಯ ಉತ್ಸವ. ಈ ಕಾಲದಲ್ಲಿ ಲಕ್ಷ್ಮೀಪೂಜೆ, ಸರಸ್ವತಿ ಪೂಜೆ, ಚಂಡಿ ಹೋಮ, ಚಂಡೀ (ದುರ್ಗಾ ಸಪ್ತಶತಿ) ಪಾರಾಯಣ, ಆಯುಧಗಳ ಪೂಜೆ, ಜೈತ್ರಯಾತ್ರೆ, ಶಮೀ ಪೂಜೆ ಮೊದಲಾದವು ಗಳು ಯಥೇಚ್ಛವಾಗಿ ನಡೆಯುತ್ತವೆ. ನವರಾತ್ರಿ ಉತ್ಸವದ ಒಂಭತ್ತು ದಿನಗಳಲ್ಲಿ ಶಕ್ತಿ ಸ್ವರೂಪಿಣಿಯನ್ನು ಮೊದಲ ಮೂರು ದಿನ ಮಹಾಲಕ್ಷ್ಮೀ ರೂಪದಲ್ಲಿ,ಎರಡನೆಯ ಮೂರು ದಿನ ಸರ ಸ್ವತಿ ರೂಪದಲ್ಲಿ, ಮೂರನೆಯ ಮೂರು ದಿನಗಳಲ್ಲಿ ದುರ್ಗಾ ಅಥವಾ ಪಾರ್ವತಿ ರೂಪದಲ್ಲಿ ಪೂಜಿಸುತ್ತಾರೆ. ಹತ್ತನೆಯ ದಿನ ವಿಜಯ ದಶಮಿಯಂದು ಜೈತ್ರ ಯಾತ್ರೆಯನ್ನು ಮಾಡಿ ಶಮೀ ಪೂಜೆಯನ್ನು ಮಾಡಲಾಗುತ್ತದೆ.

# ಇಂದೆನಗೆ ಗೋವಿಂದನ ದರುಶನಾ

-ಡಾ॥ ಸುಭಾಸ ಕಾಖಂಡಕಿ



ಇಂದೆನೆಗೆ ಗೋವಿಂದನ ದರುಶನಾ
ನಂದ ಭಾಗ್ಯವು ಬಂದೊದಗಿದೆ ॥ಪ॥

ಈ ಕೀರ್ತನೆಯು ಬಹುಶಃ ದಾಸರು ತಮಗೆ ಶ್ರೀನಿವಾಸನು ಪ್ರತ್ಯಕ್ಷನಾಗಿ ದರುಶನ ಕೊಟ್ಟು ಅಂಕಿತ ನೀಡಿ, ಅಪರೋಕ್ಷ ಜ್ಞಾನ ಪ್ರಾಪ್ತಿ ಆಗುವ ಹಾಗೆ ಮಾಡಿದಾಗ ರಚಿಸಿದ ಕೃತಿ ಎಂದು ಮೇಲ್ನೋಟಕ್ಕೆ ಕಂಡು ಬರುವುದು. ಶ್ರೀಪ್ರಸನ್ನ ವೆಂಕಟದಾಸರು ಶ್ರೀನಿವಾಸನಿಂದ ನೇರವಾಗಿ ಅಂಕಿತಪಡೆದ ಏಕೈಕ ಹರಿದಾಸರು.

ತಮ್ಮ ಮನಸ್ಸಿನಲ್ಲಿರುವದನ್ನೆಲ್ಲಾ ದಾಸರು ಭಗವಂತನ ಮುಂದೆ ನೀವೇದಿಸಿಕೊಳ್ಳುತ್ತಾರೆ."ಇಂದು ನನಗೆ ಗೋವಿಂದನ ನಿಜರೂಪ ದರುಶನದ ಆನಂದ ಭಾಗ್ಯವು ಬಂದೊದಗಿದೆ" ಎನ್ನುತ್ತಾ ಮುಂದಿನ ನುಡಿಯಲ್ಲಿ ಹೇಗೆ ಭಗವಂತನು ಘೋರ ಸಂಸಾರ ಬಂಧನಗಳಿಂದ ಪಾರುಮಾಡಿದ ಎಂದು ನೀವೇದಿಸಿಕೊಳ್ಳುತ್ತಾರೆ.

"ಘೋರ ಸಂಸಾರ ಸಾಗರದಿ ಮುಳಗಿರೆ
ಧೀರ ಸುಖತೀರ್ಥರ ಹೃನ್ಮೂರುತಿ ತಾ -
ಕರುಣೇ ತೋರಿ ಕರುಣಾಕರ ಹರಿ
ಮರೆಯದೆ ಕಂಡಾಯೆನ್ನಾರ್ತವ ಕೇಳಿ ॥೧॥

"ದಾಸರು ಚಿಕ್ಕ ಬಾಲಕನಾಗಿದ್ದಾಗ, ತಂದೆ - ತಾಯಿಯರನ್ನು ಕಳೆದು ಕೊಂಡು ಅನಾಥರಾದಾಗ, ಅತ್ತಿಗೆಯ ಆಜ್ಞೆಯಂತೆ, ಓದು-ವಿದ್ಯೆ ಕಲಿಯಲು ಹೋಗದೇ ಹಸುಗಳನ್ನು ಮೇಯಿಸಿ, ಮನೆಕೆಲಸಗಳನ್ನು ಮಾಡಿಕೊಂಡು, ಒಂದು ತುತ್ತು ಅನ್ನ, ಒಂದು ಲೋಟ ಮಜ್ಜಿಗೆಗಾಗಿ ಹೀನಾಯವಾದ ಬೈಗಳುಗಳನ್ನು, ನೋವು - ನಿಂದನೆಗಳನ್ನು ಸಹಿಸುತ್ತಾ ಸಂಸಾರ ಸಾಗರದೊಳಗೆ ಮುಳಗಿದ್ದಾಗ,ಪರಮ ಗುರುಗಳಾದ ಶ್ರೀಮಧ್ವಾಚಾರ್ಯರ ಅಂತರ್ಗತನಾದ ಕರುಣಾಕರನಾದ ಶ್ರೀಹರಿಯನ್ನು ಕಾಣುವಂತಾದರು. ಎನ್ನ ಆರ್ತನಾದ ಕೇಳಿ ಕರುಣೆಯಿಂದ ದರ್ಶನ ನೀಡಿದೆ" ಎಂದು ದಾಸರು ಸ್ತುತಿಸಿದ್ದಾರೆ -ಎಂಬ ಭಾವವನ್ನು ಅರ್ಥೈಸಬಹುದು.

ಮುಂದಿನ ನುಡಿಯಲ್ಲಿ ಯಾವ ರೀತಿ ಶ್ರೀನಿವಾಸದೇವರು ದಾಸರಿಗೆ ಅನುಗ್ರಹ ಮಾಡಿದ ಎಂಬುದನ್ನು ವಿವರಿಸಿದ್ದಾರೆ.

ದೇಹಾದಿ ವಿಷಯ ಮೋಹ ದೂರವಾಯ್ತು।
ಅಹಂ ಮಮಕೇಹ ಹಾರಿ ಹೋಯ್ತು॥
ಬಾಹ್ಯಾಂತ್ರ್ಯ ಸ್ವಾತಂತ್ರ ದೇವನಲ್ಲಿ
ಬಾಹ್ಯಮತಿ ಹೃತ್ವಾಹ್ವ್ಹ ವಾಯ್ತು ॥೨॥

"ಪರಮ ಗುರುಗಳ ಅನುಗ್ರಹದಿಂದ ದಾಸರು ತಿರುಪತಿ ಶ್ರೀನಿವಾಸನ ಮುಂದೆ ನಿಂತು, ಭಗವಂತನ ಆ ದಿವ್ಯ ಪಾದಗಳನ್ನೇ ನೋಡುತ್ತಾ ಅವನ ಅನಂತ ಆನಂದ ಮಯ ಮೂರ್ತಿಯನ್ನೇ ನೋಡುತ್ತಾ ಪ್ರಪಂಚವನ್ನು ಮರೆತು ಶ್ರೀಹರಿ ಅನಾಥ ರಕ್ಷಕ ನಿನ್ನ ಪಾದದ ಮೇಲೆ ಬಿದ್ದಿದ್ದೇನೆ ಎಂದು ಸರ್ವಸಮರ್ಪಣ ಭಾವದಿಂದ ಶ್ರೀಹರಿಯ ಪಾದಗಳನ್ನು ಗಟ್ಟಿಯಾಗಿ ಹಿಡಿದು ವಿಸ್ಮರಣೆಯಲ್ಲಿ ಮಲಗಿದ್ದ ವೆಂಕಣ್ಣನ ಅನನ್ಯ ಭಕ್ತಿಗೆ ಮೆಚ್ಚಿ ಶ್ರೀನಿವಾಸನು ಅವರ ನಾಲಿಗೆ ಮೇಲೆ "ಪ್ರಸನ್ನ ವೆಂಕಟ" ಎಂಬ ಬೀಜಾಕ್ಷರ ಬರೆದು ಅಂಕಿತ ಕೊಟ್ಟ ಮೇಲೆ ಅಪರೋಕ್ಷ ಜ್ಞಾನಿಯಾದ ಅವರಿಗೆ ಆ ಕ್ಷಣವೇ, ದೇಹಾದಿ ವಿಷಯಗಳ ಮೋಹ ದೂರವಾಗಿ ಹೊಯ್ತು, "ಅಹಂ - ಮಮಕೇಹ" - ಅಂದರೆ ನಾನು ನನ್ನದೆಂಬ ಮಮತೆ ಅಹಂಕಾರ ದೂರವಾಗಿ ಹೋಯ್ತು."ಬಾಹ್ಯಾಂತ್ರ-ಸ್ವಾತಂತ್ರ ದೇವನಲ್ಲಿ" ಎನ್ನುವಲ್ಲಿ "ಸರ್ವತಂತ್ರ-ಸ್ವತಂತ್ರನಾದ ದೇವ ದೇಹದ ಒಳಗೆ ಹೊರಗೆ ತುಂಬಿ ಹೋದ"-ಎಂದು ದಾಸರು ಅನನ್ಯವಾಗಿ ಶ್ರೀಹರಿಗೆ ಆತ್ಮನಿವೇದನೆ ಮಾಡಿದ್ದಾರೆ.

**ಇನ್ನು ಕೊನೆಯ ನುಡಿಯಲ್ಲಿ -**

ಪೂರ್ವ ಜನುಮ ಪುಣ್ಯ ಪಡಿಯಾಗಿರೆ
ಉರ್ವಿಸುರ ನಿಧಿ ಅಪ್ಪಟರೂಪತಾ ॥
ಪಾರ್ವತಿ ಪ್ರಿಯ ಸಖ ಪ್ರಸನ್ವೆಂಕಟಾ
ಸರ್ವಾಧಿಕ ಫಲ ನೀಡಿ ಹರಿಸಿದಾ ॥3॥

# ಸ್ವರ್ಣ ರಥೋತ್ಸವ

ಎಂಟನೆಯ ದಿನದ ಬ್ರಹ್ಮೋತ್ಸವವೇ 'ರಥೋತ್ಸವ".

"ರಥಸ್ಥಂ ಕೇಶವಂ ದೃಷ್ಟ್ವಾ ಪುನರ್ಜನ್ಮನ ವಿದ್ಯತೇ." ಅಂದರೇ ಬ್ರಹ್ಮೋತ್ಸವ ಸಮಯದಲ್ಲಿ ರಥದಲ್ಲಿ ಕುಳಿತ ಶ್ರೀದೇವಿ ಭೂದೇವಿ ಸಮೇತ ಶ್ರೀ ವೇಂಕಟೇಶ್ವರನನ್ನು ದರ್ಶನ ಮಾಡಿದರೆ ಪುನರ್ಜನ್ಮ ವಿಮುಕ್ತರಾಗಿ ಮುಕ್ತಿ ಸಾಮ್ರಾಜ್ಯವನ್ನು ಪಡೆಯುತ್ತಾರೆಂದು ಶಾಸ್ತ್ರಗಳು ತಿಳಿಸುತ್ತಿವೆ.

ಶ್ರೀವೇಂಕಟೇಶ್ವರನಿಗೆ ನಾಲ್ಕು ರಥಗಳು ಇವೆ. ಕಲ್ಲಿನ ರಥ, ಕಟ್ಟಿಗೆಯ ರಥ, ಬೆಳ್ಳಿಯ ರಥ,ಬಂಗಾರದ ರಥಗಳು ಇವೆಯಾದರೂ ಈಗ ಬಂಗಾರ ರಥದ ಬಳಕೆಯೇ ಜಾಸ್ತಿ ಇದೆ.

ರಥವೆಂದರೆ ಶರೀರ, ಸಾರಥಿ ಎಂದರೆ ಮನಸ್ಸು ಕುದುರೆಗಳು ಇಂದ್ರಿಯಗಳು, ಚಕ್ರಗಳು ಕಷ್ಟ ಸುಖಗಳು, ಒಳಗೆ ಕುಳಿತಿದ್ದ ಪರಮಾತ್ಮನೇ ಜೀವಾತ್ಮ ಇದೇ ರಥೋತ್ಸವದ ಅಂತರಾರ್ಥ. ಸ್ವಾಮಿಯ ರಥದ ಸೇವೆಯಲ್ಲಿ ಪಾಲ್ಗೊಂಡರೆ ಕಷ್ಟಗಳು ದೂರ ವಾಗುತ್ತವೆ.





ಇಲ್ಲಿ ದಾಸರು ಹೇಳುತ್ತಾರೆ - "ಇದು ಪೂರ್ವಜನ್ಮದ ಪುಣ್ಯ ವಿಶೇಷದಿಂದ,ಬ್ರಹ್ಮಾಜ್ಞಾನಿಗಳ ನಿಧಿಯಾದ ಪಾರ್ವತಿಯ ಪ್ರಿಯಸಖ ಮನೋನಿಯಾಮಕರಾದ ರುದ್ರದೇವರ ಬಲದಿಂದ (ಶ್ರೀಪ್ರಸನ್ನ ವೆಂಕಟದಾಸರು ರುದ್ರಾಂಶರೆಂದು ಪ್ರತೀತಿ) ಶ್ರೀವೆಂಕಟೇಶನ ಸಾಕ್ಷಾತ್ಕಾರವಾಗಿ ಅವನೇ ಅಂಕಿತವನ್ನು ಸರ್ವಾಧಿಕ ಫಲವನ್ನು ನೀಡಿ ಹರಿಸಿದ್ದಾನೆ.ಇದರಿಂದ ಅವರ ಜೀವನ ಗತಿಯೇ ಬದಲಾಯಿತು.ಆಕಳನ್ನು ಕಾಯುತ್ತಿದ್ದ, ಗೋಪಾಲಕನಂತಿದ್ದ ಬಾಲಕ ವೆಂಕಣ್ಣ ಪ್ರಸನ್ನವೆಂಕಟದಾಸರಾದರು ಕವಿಯಾದರು ಶ್ರೀಗಲಗಲಿ ಮುದ್ಗಲಾಚಾರ್ಯರ ಮುಖೇನ ವೇದ ಶಾಸ್ತ್ರಗಳ ಅಧ್ಯಯನ ಮಾಡಿದರು. ಭಾಗವತವನ್ನು ಕಾವ್ಯರೂಪದಲ್ಲಿ ಕನ್ನಡದಲ್ಲಿ ರಚಿಸಿ ಶ್ರೀಕೃಷ್ಣನ ಬಾಲ ಲೀಲೆಗಳನ್ನು ಕಣ್ತುಂಬುವಂತೆ ಮನತುಂಬುವಂತೆ ಕೊಂಡಾಡಿದರು" - ಎಂಬ ಭಾವವನ್ನು ಅರಿಯಬಹುದು.

# ಕಾವೇರಿ ಸಂಕ್ರಮಣ



- ಹನುಮಂತ. ಮ. ದೇಶಕುಲಕರ್ಣಿ

ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಅಕ್ಟೋಬರ್ ಮಧ್ಯದಲ್ಲಿ ಹಿಂದೂ ಕ್ಯಾಲೆಂಡರ್ ಪ್ರಕಾರ ತುಲಾ ತಿಂಗಳ ಮೊದಲ ದಿನ ಕಾವೇರಿ ಸಂಕ್ರಮಣವನ್ನು ಆಚರಿಸಲಾಗುತ್ತದೆ. ತಲಕಾವೇರಿ ದೇವಸ್ಥಾನದಲ್ಲಿರುವ ಪುಷ್ಕರಿಣಿ ಸಮೀಪದ ಕುಂಡಿಕೆಯಿಂದ ಕಾವೇರಿ ನದಿ ಉಗಮವಾಗುತ್ತದೆ.

ಕಾವೇರಿ ತೀರ್ಥರೂಪಿಣಿಯಾಗಿ ಒಲಿಯುವ ಪವಿತ್ರ ದಿನದ ಸಾಂಪ್ರದಾಯಿಕ ಆಚರಣೆಯೇ"ಕಾವೇರಿ ತುಲಾ ಸಂಕ್ರಮಣ"ಮತ್ತು ಕಾವೇರಿ ಚಂಗ್ರಾಂದಿ"ಆ ಪವಿತ್ರ ಮುಹೂರ್ತ. ಸೂರ್ಯನು ತುಲಾ ರಾಶಿಯನ್ನು ಪ್ರವೇಶಿಸುವ ದಿನದಂದು ತೀರ್ಥೋದ್ಭವ ಆಗುತ್ತದೆ. ತಲಕಾವೇರಿಯಲ್ಲಿ ಇರುವ ಒಂದು ಸಣ್ಣ ಕುಂಡಿಕೆಯಲ್ಲಿ ಈ ಮುಹೂರ್ತದಲ್ಲಿ ನೀರು ಭೂಮಿಯೊಳಗಿನಿಂದ ಚಿಲುಮೆಯಂತೆ ಮೇಲೆ ಉಕ್ಕಿ ಹರಿಯುತ್ತದೆ.

### ಕೊಡಗಿನ ಕುಲದೇವಿ

ಕೊಡಗಿನವರ ಪಾಲಿನ ಕುಲದೇವಿ ಕಾವೇರಿಮಾತೆಯು ಕೊಡಗಿನ ತಲಕಾವೇರಿ,ಭಾಗಮಂಡಲದಲ್ಲಿ ನದಿಯಾಗಿ ಹರಿದು ಬಲಮುರಿಗೆ ಬರುವಾಗ ಒಮ್ಮೆಗೆ ತನ್ನ ಪ್ರವಾಹದ ದಿಕ್ಕನ್ನು ಬದಲಾಯಿಸುತ್ತಾಳೆ.'ಆ ಸಮಯದಲ್ಲಿ ಅಲ್ಲಿ ಇದ್ದ ಕೊಡವ ಮಹಿಳೆಯರ ಸೀರೆಯ ಮುಂದೆ ಇದ್ದ ನೀರಿಗೆಯು ನೀರಿನ ರಭಸಕ್ಕೆ ಹಿಂದಕ್ಕೆ ತಿರುಗಿತಂತೆ ಅಲ್ಲಿಂದ ಕೊಡವ ಮಹಿಳೆಯರು ಸೀರೆ ಉಡುವಾಗ ನೀರಿಗೆಯನ್ನು ಹಿಂದಕ್ಕೆ ಹಾಕುವ ಬಗ್ಗೆ ಪ್ರತೀತಿ ಇದೆ.ಕಾವೇರಿ ಸಂಕ್ರಮಣವನ್ನು ದೇವಾಲಯಗಳಲ್ಲಿ ಮತ್ತು ಕೊಡವ ಜನರ ಮನೆಗಳಲ್ಲಿ ವಿಶೇಷ ಪೂಜೆಯಿಂದ ಆಚರಿಸಲಾಗುತ್ತದೆ.

### ಕುಂಡಿಗೆ

2X2 ಅಡಿಯ ಒಂದು ಚಿಕ್ಕ ಕೊಳ. ಇದನ್ನು ಕುಂಡಿಗೆ ಎನ್ನುತ್ತಾರೆ. ಇದರ ಪಕ್ಕದಲ್ಲಿ ಉತ್ತರಕ್ಕೆ 4 ಅಡಿ ಎತ್ತರದ ಒಂದು ಮಂಟಪವಿದೆ.ಕುಂಡಿಗೆಯ ಮುಂದೆ ಒಂದು ಕೊಳವಿದೆ. ಕುಂಡಿಗೆಯಿಂದ ಹೊರಟ ನೀರು ಸಣ್ಣ ಕೊಳ ಸೇರಿ ಅಂತರ್ಗಾಮಿಯಾಗಿ ಹರಿದು ಇನ್ನೊಂದು ಕೊಳವನ್ನು ತುಂಬುತ್ತದೆ. ಪುನಃ ನೀರು ಅಂತರ್ಗಾಮಿಯಾಗಿ ಹರಿದು ಕಣಿವೆಯಲ್ಲಿ ಕಾಣಿಸಿ ಕೊಂಡು ಮುಂದೆ ಹರಿಯುತ್ತದೆ.

ನಿಶ್ಚಿತ ಮುಹೂರ್ತದಲ್ಲಿ ಆ ಕುಂಡಿಗೆಯಿಂದ ನೀರು ಉಕ್ಕಿ ಹರಿಯುತ್ತದೆ. ಆ ಸಮಯಕ್ಕೆ ದೇಶದ ಅನೇಕ ಕಡೆಗಳಿಂದ ಹಿಂದೂ ಯಾತ್ರಾರ್ಥಿಗಳು ಇಲ್ಲಿಗೆ ಬರುತ್ತಾರೆ. ಇಲ್ಲಿ ಸ್ನಾನ ಮಾಡುತ್ತಾರೆ.ತುಲಾ ಸಂಕ್ರಮಣದಿಂದ ವೃಶ್ಚಿಕ ಸಂಕ್ರಮಣದ ವರೆಗೆ ತಲಕಾವೇರಿಯ ಬಳಿ ಜಾತ್ರೆ ನಡೆಯುತ್ತದೆ. 300 ಅಡಿ ಎತ್ತರದ ಬ್ರಹ್ಮಗಿರಿಯ ನೆತ್ತಿಯ ಮೇಲೆ ಸಪ್ತರ್ಷಿಗಳು ಹೋಮ ಮಾಡಿದರೆಂದು ಹೇಳಲಾದ ಏಳು ಸಣ್ಣ ಗುಂಡಿಗಳಿವೆ.

### ತೀರ್ಥೋದ್ಭವ

ಜ್ಯೋತಿಷ್ಯಶಾಸ್ತ್ರದ ರೀತಿ ನಿಶ್ಚಿತವಾದ ತುಲಾ ಮುಹೂರ್ತದಲ್ಲಿ ಕುಂಡಿಕೆಯಿಂದ ತೀರ್ಥೋದ್ಭವವಾಗುತ್ತದೆ. ಮುಹೂರ್ತ ಸಮಯವು ಸಮೀಪಿಸಿದಂತೆ ಅರ್ಚಕರು ಶ್ರೀಕಾವೇರಿ ಕುಂಡಿಕೆಯಲ್ಲಿ ಶ್ರೀ ಕಾವೇರಿ ದೇವಿಗೆ ಮಹಾಸಂಕಲ್ಪ, ಪೂಜೆ,ಸಹಸ್ರ ನಾಮಾರ್ಚನೆ, ಮಹಾಪೂಜೆ, ಮಂತ್ರೋಕ್ತವಾಗಿ ವಿಧಿ ಪೂರ್ವಕವಾಗಿ ಮಹಾಮಂಗಳಾರತಿ ಮಾಡುವ ಮೂಲಕ ಕೃಪಾಶೀರ್ವಾದವನ್ನು ಕೋರುತ್ತಾರೆ.

ಆ ಸಮಯಕ್ಕೆ ತೀರ್ಥ ಕುಂಡಿಕೆಯಿಂದ ಪವಿತ್ರ ಜಲವು ಮೇಲುಕ್ಕಿ ಬರುತ್ತದೆ.ಅಷ್ಟರಲ್ಲಿ ಅರ್ಚಕರು ಶ್ರೀಜಲರೂಪಿಣಿ ಕಾವೇರಿಗೆ ಆರತಿಯನ್ನು ಬೆಳಗಿ ಪುಣ್ಯತೀರ್ಥವನ್ನು ಕುಂಡಿಕೆಯಿಂದ ತೆಗೆದು ನೆರೆದಿದ್ದ ಭಕ್ತಸಮೂಹದ ಮುಂದೆ ಎರಚುತ್ತಿದ್ದಂತೆ ಭಕ್ತ ಸಮೂಹ ಜೈ ಜೈ ಮಾತಾ... ಕಾವೇರಿ... ಎನ್ನುತ್ತಾ ತೀರ್ಥೋದ್ಭವವನ್ನು ಕಣ್ತುಂಬಿ ಕೊಳ್ಳುತ್ತಾರೆ. ಕುಂಡಿಕೆಯಿಂದ

ಅದೆಷ್ಟು ತೀರ್ಥ ತೆಗೆದರೂ ಪವಿತ್ರ ಕುಂಡಿಕೆಯಲ್ಲಿ ತೀರ್ಥ ಕಡಿಮೆಯಾಗುವುದೇ ಇಲ್ಲ. ತೀರ್ಥೋದ್ಭವ ಹಾಗೂ ತೀರ್ಥ ಅಕ್ಷಯ ತಲಕಾವೇರಿಯಲ್ಲಿ ಪ್ರತಿವರ್ಷ ಕಂಡು ಬರುವ ದೈವಿಕ ಪವಾಡದ ದೃಶ್ಯವೆಂದೇ ಹೇಳಲಾಗುತ್ತಿದೆ.





## ಪುರಾಣಗಳಲ್ಲಿ ಕಾವೇರಿ

ಉತ್ತರ ಭಾರತದಿಂದ ದಕ್ಷಿಣದೇಶಕ್ಕೆ ಆಗಮಿಸಿದ ಅಗಸ್ತ್ಯ ಋಷಿಗಳು ಕವೇರಮುನಿಗಳ ಬಳಿ ಬಂದಾಗ ದಿವ್ಯಾಂಶ ಸಂಭೂತೆಯಾದ ಕಾವೇರಿಯನ್ನು ನೋಡಿ ತ್ರಿಕಾಲಜ್ಞಾನಿಗಳಾದ ಅವರು ಕಾವೇರಿಯ ಜೀವನೋದ್ದೇಶವನ್ನು ಗ್ರಹಿಸಿಕೊಂಡರು. ಅದರಂತೆ ಅಗಸ್ತ್ಯ ಮಹರ್ಷಿಗಳು ಕಾವೇರಿಯನ್ನು ವಿವಾಹವಾಗಲು ಬಯಸಿದರು. ಅವರ ಅಭಿಲಾಷೆಗೆ ಕಾವೇರಿಯು ಒಪ್ಪಿ ತನ್ನನ್ನು ಯಾವ ಕಾಲಕ್ಕೂ ಒಂದು ಕ್ಷಣವೂ ಬಿಟ್ಟು ಇರಕೂಡದು, ಒಂದು ವೇಳೆ ಬಿಟ್ಟು ಹೋದದ್ದೇಯಾದರೆ ತಕ್ಷಣವೇ ತಾನು ನದಿಯಾಗಿ ರೂಪ ತಳೆದು ಸಮುದ್ರದ ಕಡೆ ಹೊರಟು ಹೋಗುತ್ತೇನೆಂದಳು.



### ಅಶ್ವ ವಾಹನ

ಎಂಟನೇ ದಿನದ ರಾತ್ರಿಗೆ ಶ್ರೀವೇಂಕಟೇಶ್ವರ ಸ್ವಾಮಿ ಅಶ್ವವಾಹನಾರೂಢನಾಗಿ ದರ್ಶನ ನೀಡುತ್ತಾನೆ. ಅಶ್ವವು ಅದೃಷ್ಟದ ಸಂಕೇತ ಮತ್ತು ವೀರತ್ವದ ಪ್ರತೀಕ. ಬ್ರಹ್ಮೋತ್ಸವಗಳಲ್ಲಿ ನಡೆಯುವ ವಾಹನ ಮೆರವಣಿಗೆಗಳಲ್ಲಿ ಕೊನೆಯದಾಗಿ ಅಶ್ವವಾಹನವಿರುತ್ತದೆ. ಅಶ್ವಾರೂಢನಾದ ಶ್ರೀನಿವಾಸನನ್ನು ಸಂದರ್ಶನ ಮಾಡಿದವರಿಗೆ, ಧನ ಕನಕ, ವಸ್ತು, ವಾಹನ, ಗೃಹ ಸೌಖ್ಯಗಳು ಲಭಿಸುತ್ತವೆ. ಜೀವನವು ಅದೃಷ್ಟ ಮಾರ್ಗದಲ್ಲಿ ನಡೆಯುತ್ತದೆ. ಸಂಸಾರವು ಸರಾಗಮಯವಾಗುತ್ತದೆ.

ಅದಕ್ಕೆ ಅಗಸ್ತ್ಯಮಹರ್ಷಿಗಳು ಒಪ್ಪಿ ಋಷ್ಯಾಶ್ರಮದ ಪವಿತ್ರ ನೆಲೆಯಲ್ಲಿ ಶ್ರೀಅಗಸ್ತ್ಯ - ಕಾವೇರಿಯ ವಿವಾಹವು ಬಹಳ ವೈಭವದಿಂದ ನೆರವೇರಿತು. ಹೀಗೆ ದಿನಕಳೆದಂತೆ ಒಂದು ದಿನ ಅಗಸ್ತ್ಯ ಮಹರ್ಷಿಗಳು ಬ್ರಾಹ್ಮೀ ಮುಹೂರ್ತದಲ್ಲಿ ಬ್ರಹ್ಮ ಗಿರಿಯ ತಪ್ಪಲಿನ ಕನಕಗೆ ಸ್ನಾನ ಸಂಧ್ಯಾವಂದನೆಗೆ ತೆರಳುವ ಮುನ್ನ ಕಾವೇರಿಯನ್ನು ಜಲ ರೂಪಿಯಾಗಿ ಪರಿವರ್ತಿಸಿ ತನ್ನ ಕಮಂಡಲುವಿನಲ್ಲಿ ಸೇರಿಸಿ, ಶಿಷ್ಯರಿಗೆ ಜಾಗ್ರತೆಯಿಂದ ಕಾಯ್ದುಕೊಳ್ಳಿ ಎಂದು ಹೇಳಿ ಕಮಂಡಲುವನ್ನು ಬ್ರಹ್ಮ ಕುಂಡಿಕೆಯಲ್ಲಿಟ್ಟು ತೆರಳಿದರು. ಆ ಸಮಯದಲ್ಲಿ ಜಲರೂಪಿಣಿಯಾಗಿದ್ದ ಕಾವೇರಿಯು ಮೇಲುಕ್ಕಿ ಬ್ರಹ್ಮ ಕುಂಡಿಕೆಗೆ ಹರಿದು ನದಿರೂಪಿಯಾಗಿ ಮುಂದೆ ಹರಿದಾಗ ಶಿಷ್ಯರು ತಡೆಯಲು ಮುಂದಾದಾಗ ಕಾವೇರಿಯು ಗುಪ್ತಗಾಮಿನಿಯಾಗಿ ಮುಂದೆ ಸಾಗಿದಳು. ಅತ್ತ ಅಗಸ್ತ್ಯ ಮಹರ್ಷಿಗಳಿಗೆ ತಮ್ಮ ದಿವ್ಯ ದೃಷ್ಟಿ ಮೂಲಕ ಈ ವಿಚಾರ ತಿಳಿದು ಧಾವಿಸಿ ಬಂದು ಕಾವೇರಿಯನ್ನು ನದಿಯಾಗಿ ಹೋಗುವುದು ಬೇಡವೆಂದು ಕೇಳಿಕೊಂಡರು, ಆಗ ಕಾವೇರಿಯು ತಾನು ತನ್ನ ಶರೀರದ ಒಂದಂಶದಲ್ಲಿ ನದಿಯಾಗಿ ತೆರಳಿ ಲೋಕಕಲ್ಯಾಣಕ್ಕಾಗಿಯೂ,ಉಳಿದೊಂದಂಶ ಪತ್ನಿಯಾಗಿ ಉಳಿಯುವೆನೆಂದು ಸಮಾಧಾನ ಹೇಳಿ ತನ್ನ ದಿವ್ಯ ಅವತಾರ ಲೀಲಾ ಕಾರ್ಯವನ್ನು ಮುಂದುವರಿಸಿ ನದಿಯಾಗಿ ಹರಿದು ಪುಣ್ಯಕ್ಷೇತ್ರವಾದ ಭಾಗಮಂಡಲದ ಕನ್ನಿಕಾ ಸುಜ್ಯೋತಿ ನದಿಗಳು ಕಾವೇರಿಯೊಡನೆ ಸಂಗಮವಾಗಿ ಸಂಗಮ ಕ್ಷೇತ್ರವಾಗಿ ರೂಪಗೊಂಡಿತು.

ಮತ್ತೊಂದು ಪುರಾಣ ಕಥೆಯ ಪ್ರಕಾರ ವಿಷ್ಣುಮಾಯಾ ಎಂಬ ಬ್ರಹ್ಮನ ಮಗಳನ್ನು ಕವೇರಮುನಿ ಸಾಕಿಕೊಂಡಿದ್ದಳು, ವಿಷ್ಣುವಿನ ಆಜ್ಞೆಯಂತೆ ಈ ಕನ್ಯೆಯು ದೇಹರೂಪಿಯಾಗಿ 'ಲೋಪಾಯಮುದ್ರಾ' ಹೆಸರಿನಿಂದ ಅಗಸ್ತ್ಯ ಸತಿಯು ನದಿರೂಪಿಯಾಗಿ ಕಾವೇರಿಯಾದಳು. ದಕ್ಷಿಣದಲ್ಲಿ ಜಲಕ್ಷಾಮವಿದೆಯೆಂದು ಸುದ್ದಿ ತಿಳಿದ ಅಗಸ್ತ್ಯನು ತನ್ನ ಪತ್ನಿಯ ಜೊತೆ ಸಹ್ಯಾದ್ರಿಯ ತಪ್ಪಲ ಬ್ರಹ್ಮಗಿರಿಗೆ ಬಂದಾಗ ಜೋರಾದ ಗಾಳಿಬೀಸಿ ಕಮಂಡಲು ಉರುಳಿ ಅದರಲ್ಲಿ ಜಲರೂಪಿಯಾಗಿದ್ದ ಕಾವೇರಿಯು ನದಿಯಾಗಿ ಹರಿದಳೆಂದು ಹೇಳಿದರೆ ಮತ್ತೊಂದು ಕತೆಯಲ್ಲಿ ಶೂರ ಪದ್ಮನೆಂಬ ಅಸುರನು ತನ್ನ ವಿಶೇಷ ಶಕ್ತಿಯಿಂದ ಮಳೆ ಬೀಳುವುದನ್ನು ತಡೆದನಂತೆ





ಇದರಿಂದ ದಕ್ಷಿಣ ಭಾರತದದಲ್ಲಿ ಹಾಹಾಕಾರ ವಾಗಲು ಇಂದ್ರನ ಪ್ರಾರ್ಥನೆಯಂತೆ ಗಣೇಶನು ಕಾಗೆಯ ರೂಪತಳೆದು ಕವೇರ ಋಷಿಯ ಕಮಂಡಲುವನ್ನು ಕೆಡವಿ ಕಾವೇರಿಯ ಪ್ರವಾಹಕ್ಕೆ ಕಾರಣನಾದನೆಂದು ಹೇಳುತ್ತಾರೆ. ಕೊಡಗಿನ ಕಾವೇರಿ ಪುರಾಣದಲ್ಲಿನ ಕಾವೇರಿ ಮಾತೆ ಕಥೆಯನ್ನು ಸವಿವರವಾಗಿ ಕೊಡವಹಾಡಿನಲ್ಲಿ ರಚಿಸಲಾಗಿದೆ.

### ಆಚರಣೆ

ಸಂಕ್ರಮಣದಂದು ಕಾವೇರಿ ಮಾತೆಯು ಪ್ರತಿಯೊಂದು ಮನೆಯನ್ನೂ ಸಂದರ್ಶಿಸುವಳೆಂದು ನಂಬಿಕೆ. ಆದ್ದರಿಂದ ತೀರ್ಥೋದ್ಭವಕ್ಕೆ ಮುಂಚಿತವಾಗಿ ಎಲ್ಲರೂ ತಮ್ಮ ಮನೆ,ವರಾಂಡವನ್ನು ಶುಚಿಗೊಳಿಸುವರು. ಎಲ್ಲಾ ಭತ್ತದ ಗದ್ದೆಗಳು, ಮನೆಯೆದುರು, ಬಾವಿ, ಕೊಟ್ಟಿಗೆಗಳು, ಗೊಬ್ಬರದ ಗುಂಡಿ, ಮುಂತಾದ ಸ್ಥಳಗಳಲ್ಲಿ ಒಂದೊಂದು 'ಬೊತ್ತ್' ನ್ನು ಚುಚ್ಚಿ ನೆಟ್ಟಗೆ ನಿಲ್ಲಿಸುವರು. 'ಬೊತ್ತ್' ಎನ್ನುವದು 'ಪೊಂಗ' ಮರದ ರೆಂಬೆಯನ್ನು ಅಳೆತ್ತರಕ್ಕೆ ಕತ್ತರಿಸಿ, ಅದರ ಒಂದು ಕೊನೆಯನ್ನು ಗೇಣುದ್ದಕ್ಕೆ ಸೀಳಿ, ಅದರಲ್ಲಿ 'ಕೈಬಳ' ಬಳ್ಳಿಯನ್ನು ಸಿಂಬಿ ಸುತ್ತಿ ಸಿಕ್ಕಿಸಿದುದು. ಕೆಲವೆಡೆ ಪೊಂಗ ಮರದ ರೆಂಬೆಯ ಬದಲಿಗೆ ಬಿದಿರಿನ ದುಬ್ಬೆಯನ್ನು ಉಪಯೋಗಿಸುವರು.

ತೀರ್ಥೋದ್ಭವವಾದ ಮರುದಿನ ಎಲ್ಲಾ ಕೊಡವರ ಮನೆಗಳಲ್ಲಿ ಕಾವೇರಿಯ ಸಾಂಕೇತಿಕ ಮೂರ್ತಿಯನ್ನು ನಿರ್ಮಿಸಿ ಪೂಜಿಸುವರು. ಇದಕ್ಕೆ ಕಣಿ ಪೂಜಿಸುವುದು ಎಂದು ಹೆಸರು. ಬಹುಶಃ ಕನ್ಯಾ ಎನ್ನುವುದು ಕಣಿ ಎಂದಾಗಿ ಕಣಿ ಎಂದು ಅಪಭ್ರಂಶವಾಗಿದೆ. ಕನ್ಯಾ ಎಂದರೆ ಪಾರ್ವತಿ. ಕಾವೇರಿಯು ಪಾರ್ವತಿಯ ಅವತಾರವೆನ್ನುವರು. ಈ ಪೂಜೆಯ ಹಿಂದಿನ ಸಂಜೆ ಹೂಗಳನ್ನು ತಂದು ಇಬ್ಬನಿಯಲ್ಲಿಟ್ಟಿರುತ್ತಾರೆ.

### ಪವಿತ್ರಸ್ನಾನ

ಯಾರು ಕಾವೇರಿಯ ಪರಮ ಪವಿತ್ರವಾದ ತೀರ್ಥದಲ್ಲಿ ಸ್ನಾನಮಾಡುವರೋ ಅವರ ಜನ್ಮಾಂತರ ಪಾಪಗಳೆಲ್ಲ ನಾಶವಾಗುವುದು, ಸೂರ್ಯನು ತುಲಾರಾಶಿಯನ್ನು ಪ್ರವೇಶಿಸುವ ತೀರ್ಥೋದ್ಭವದ ಸಮಯದಲ್ಲಿ ತೀರ್ಥಸ್ಥಾನ ಮಾಡುವುದರಿಂದ ಅಶ್ವಮೇಧಯಾಗ ಫಲವು ಹಾಗೂ ಕಾವೇರಿ ಜಲದಲ್ಲಿ ಒಂದು ತಿಂಗಳು ಎಡೆಬಿಡದೆ ಸ್ನಾನ ಪೂಜಾದಿ ಕೈಂಕರ್ಯವನ್ನು ಮಾಡುವುದರಿಂದ ಮಂಗಳಕರ ದಿವ್ಯಗತಿ ಹೊಂದುವರೆಂಬ ನಂಬಿಕೆಯೂ ಇದೆ.

ತಲಕಾವೇರಿಗೆ ಹೋಗಲು ಸಾಧ್ಯವಾಗದವರು ಹರಿಶ್ಚಂದ್ರ, ಬಲಮುರಿ ಹಾಗೂ ಗುಯ್ಯ ಮೊದಲಾದ ಸ್ಥಳಗಳಿಗೆ ಹೋಗಿ ಕಾವೇರಿಯಲ್ಲಿ ಸ್ನಾನ ಮಾಡಿ ಪೂಜೆ ಸಲ್ಲಿಸುವರು. ಈ ನೀರಿನಲ್ಲಿ ಪವಿತ್ರಸ್ನಾನ ಮಾಡಲು ಸಾವಿರಾರು ಭಕ್ತರು ತಲಕಾವೇರಿ ಮತ್ತು ಭಾಗಮಂಡಲಕ್ಕೆ ಆಗಮಿಸುತ್ತಾರೆ. ಸ್ಥಳೀಯರು ಪವಿತ್ರವೆಂದು ಪರಿಗಣಿಸಿ ಈ ನೀರನ್ನು ಸಂಗ್ರಹಿಸಿ ಸಂರಕ್ಷಿಸುತ್ತಾರೆ.

ಸಾಧಾರಣವಾಗಿ ಸುದರ್ಶನಚಕ್ರ ಸ್ವಾಮಿಗೆ ಚಕ್ರಸ್ನಾನ ಮುಹೂರ್ತ ಶ್ರೀನಿವಾಸನ ಜನ್ಮ ನಕ್ಷತ್ರವಾದ ಶ್ರವಣಾ ನಕ್ಷತ್ರವೇ ಆಗಿರುತ್ತದೆ. ಬ್ರಹ್ಮೋತ್ಸವದ ಕೊನೆಯ ದಿನ (ಒಂಭತ್ತನೆಯ ದಿನ ) ಸುದರ್ಶನ ಚಕ್ರಕ್ಕೆ ಪುಣ್ಯ ಪುಷ್ಕರಿಣಿಯಲ್ಲಿ ಅವಭೃತ ಸ್ನಾನ ಮಾಡಿಸುತ್ತಾರೆ. ಸಹಜವಾಗಿ ಮಹಾಯಾಗ ಮಾಡಿದಾಗ ಕೊನೆಯಲ್ಲಿ ಪವಿತ್ರ ಅವಭೃತ ಸ್ನಾನವನ್ನು ಮಾಡಿಸುತ್ತಾರೆ. ಬ್ರಹ್ಮೋತ್ಸವ ಮಹಾಯಾಗವು ಮುಗಿದಿದ್ದರಿಂದ ಸುದರ್ಶನ ಮೂರ್ತಿಗೆ ಚಕ್ರಸ್ನಾನ ನಡೆಯುತ್ತದೆ.



ಚಕ್ರಸ್ನಾನ

# ಶ್ರೀನಿವಾಸ ಕಲ್ಯಾಣ



– ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ
97393 88300

ತಿರುಪತಿ ತಿಮ್ಮಪ್ಪನೇ ಶ್ರೀನಿವಾಸ. ಶ್ರೀನಿವಾಸನಿಗೆ ಚೋಳ ರಾಜರ ಕತ್ತಿಯಿಂದ ಕತ್ತರಿಸಲು ತಲೆ ಮತ್ತು ಗದ್ದದ ಭಾಗಕ್ಕೆ ಗಾಯವಾದಾಗ ರಕ್ತವೂ ಸುರಿಯುತ್ತದೆ. ಔಷಧಿಗೋಸ್ಕರ ಹುಡುಗಾಟ ನಡೆಸಿದಾಗ ಒಬ್ಬ ಮಹಿಳೆ ಕೃಷ್ಣ ಹೆಸರು ಹೇಳುವುದನ್ನು ಕೇಳಿಸಿ ಕೊಂಡು ಅಲ್ಲಿ ಇರುವ ಮನೆಗೆ ಹೋದಾಗ ವಕುಳಮಾಳಿಕಾ ಎಂಬ ಮಹಿಳೆಯನ್ನು ಕಾಣುತ್ತಾನೆ. ಅವಳು ಶ್ರೀನಿವಾಸನ ಗಾಯ ನೋಡಿ ಚಿಕಿತ್ಸೆ ನೀಡಿ ಸಂತೈಸುತ್ತಾಳೆ.

ಕೃಷ್ಣನ ವಿವಾಹ ಕಂಡಿಲ್ಲವೆಂದು ತಾಯಿಯಾದ ಯಶೋದೆ ಕಣ್ಣೀರ ಹಾಕಿದಾಗ ಶ್ರೀಕೃಷ್ಣ ಮುಂದಿನ ಜನ್ಮದಲ್ಲಿ ನಿನ್ನ ಆಸೆ ಈಡೇರಿಸುವೆ ಎಂದು ಪ್ರಮಾಣ ಮಾಡಿದ್ದನು. ಅದರಂತೆ ಯಶೋದೆಯೇ ಮುಂದಿನ ಜನ್ಮದಲ್ಲಿ ವಕುಳಾಮಾಲಿಕೆ ಮಾತೆಯಾಗಿ ಹುಟ್ಟಿ ಶ್ರೀನಿವಾಸನ ತಾಯಿಯಾಗಿ ಪದ್ಮಾವತಿಯ ಜೊತೆ ಶ್ರೀನಿವಾಸನ ವಿವಾಹವನ್ನು ಮಾಡಿಸುತ್ತಾಳೆ.

**ಪದ್ಮಾವತಿಯ ಭೇಟಿ:** ಆಕಾಶರಾಜನು ಭೂಮಿಯನ್ನು ಉಳುವಾಗ ಅಲ್ಲಿ ಒಂದು ಪೆಟ್ಟಿಗೆ ದೊರೆಯುತ್ತದೆ. ಅದರಲ್ಲಿ ಒಂದು ಹೆಣ್ಣು ಮಗು, ಕಮಲದ ಹೂವು ಸಾವಿರ ದಳದ ಮೇಲೆ ಮಲಗಿರುವುದನ್ನು ಕಂಡು ಆ ಮಗುವಿಗೆ ಪದ್ಮಾವತಿಯೆಂದು ನಾಮಕರಣ ಮಾಡುತ್ತಾರೆ. ಅತ್ಯಂತ ಸುಂದರ ಯುವತಿಯಾಗಿ ಪದ್ಮಾವತಿ ರಾಜನ ಅರಮನೆಯಲ್ಲಿ ಬೆಳೆದಳು ಶ್ರೀನಿವಾಸನು ವಕುಳಮಾತೆ ಆಶ್ರಮದ ಹತ್ತಿರ ಬೇಟೆಯಾಡಲು ಬಂದಾಗ ಆನೆಯೊಂದು ಸ್ತ್ರೀಯನ್ನು ಅಟ್ಟಿಸಿಕೊಂಡು ಬರಲು ಶ್ರೀನಿವಾಸ ಬಾಣದೊಂದಿಗೆ ಸ್ತ್ರೀಯನ್ನು ರಕ್ಷಿಸುತ್ತಾನೆ. ಆಗ ಪದ್ಮಾವತಿಗೂ ಶ್ರೀನಿ ವಾಸನಿಗೂ ಪ್ರೀತಿ ಉದ್ಭವವಾಗುತ್ತದೆ.

ಮುಂದೆ ಶ್ರೀನಿವಾಸನು ಶಾಸ್ತ್ರ ಹೇಳುವ ಸ್ತ್ರೀ ವೇಷಧಾರಿಯಾಗಿ ಆಕಾಶರಾಜನ ಆಸ್ಥಾನಕ್ಕೆ ಬರಲು ತಾನು ನೋಡಿ ಪ್ರೀತಿಸಿದ ಸ್ತ್ರೀಯೆಂದು ತಿಳಿಯುವುದು. ಶ್ರೀನಿವಾಸನ ಪದ್ಮಾವತಿಯ ಮುಂದಿನ ಭವಿಷ್ಯ ನುಡಿಯುತ್ತಾನೆ. ಕಾಡಿನಲ್ಲಿ ಸಿಕ್ಕ ಯುವಕನ ಜೊತೆ ಆದ ಪ್ರೀತಿ ರಾಜನಿಂದ ತಿಳಿದು ಆ ಯುವಕ ಪದ್ಮಾವತಿಗೆ ವಿವಾಹ ಮಾಡಲು ಹೇಳುತ್ತಾರೆ. ಶ್ರೀನಿವಾಸ ಪದ್ಮಾವತಿಯರ ವಿವಾಹ ವಿಷಯ ತಿಳಿದು ದೇವತೆಗಳೆಲ್ಲ ಸಂತೋಷಪಡುತ್ತಾರೆ. ಶ್ರೀನಿವಾಸನ ಮುಂದೆ ದೇವಾನು ದೇವತೆಗಳು ಪ್ರತ್ಯಕ್ಷರಾಗಿ ಶ್ರೀನಿವಾಸನ ಮದುವೆಗೆ ಬರುವುದಾಗಿ ಮತ್ತು ಶ್ರೀನಿವಾಸನಿಗೆ ಕುಬೇರನಿಂದ ಮದುವೆಗೆ ಆಗುವ ಹಣ ಸಂಪತ್ತು ಭರಿಸುವ ವಿಚಾರ ಕೇಳುವುದಕ್ಕಾಗಿ ಹೇಳುತ್ತಾರೆ. ಆಕಾಶರಾಜ ಮದುವೆ ಆಮಂತ್ರಣ ಶ್ರೀನಿವಾಸನಿಗೆ ನೀಡಿದಾಗ ಶ್ರೀನಿವಾಸ ತನ್ನ ತಾಯಿಯೆಂದು ಗೌರವಿಸುವ ವಕುಳ ಮಾಲಿಕ ಮಾತೆಗೆ ತೋರಿಸುತ್ತಾನೆ. ಕುಬೇರನನ್ನು ಭೇಟಿಯಾದ ಶ್ರೀನಿವಾಸ ಕಲಿಯುಗದ ಅಂತ್ಯಕ್ಕೆ ನೀನು ಕೊಟ್ಟ ಸಾಲ ಹಿಂತಿರುಗಿಸುವೆನೆಂದು ಹೇಳಿದಾಗ ಆ ದುಡ್ಡಿಗೆ ಬ್ರಹ್ಮ, ಶಿವ ಇದಕ್ಕೆ ಸಾಕ್ಷಿಯಾಗಿ ಎರಡು ಆರಳೀಮರ ತಾಳಿ ನಿಲ್ಲುತ್ತಾರೆ. ಈಗಲೂ ಪುಷ್ಕರಣೀ ಬಾವಿಯ ದಡದಲ್ಲಿ ಈ ಅರಳೀ ಮರ ಕಾಣಬಹುದು.

**ಶ್ರೀನಿವಾಸ ಪದ್ಮಾವತಿ ವಿವಾಹ:** ಶ್ರೀನಿವಾಸನು ಪದ್ಮಾವತಿಯನ್ನು ಮದುವೆಯಾಗಲು ತನ್ನ ವಾಹನ ಗರುಡನ ಮೇಲೆ ಪ್ರಯಣ ಬೆಳಸಿದನು. ದೇವತೆಗಳೆಲ್ಲ ಒಟ್ಟಾಗಿ ಮದುವೆಗೆ ಬಂದು ಪುಷ್ಪಾರ್ಚನೆ ಮಾಡಿದರೆ ಋಷಿ ಮುನಿಗಳು ಆಶೀರ್ವಾದ ನೀಡುತ್ತಾರೆ. ಶ್ರೀನಿವಾಸ ಪದ್ಮಾವತಿಯರ ಕಲ್ಯಾಣೋತ್ಸವ ವಿಜೃಂಭಣೆಯಿಂದ ನೆರವೇರುತ್ತದೆ.

**ಬ್ರಹ್ಮೋತ್ಸವ :** ಪರಮಾತ್ಮ ತಿರುಪತಿಯ ಪ್ರಯಾಣದ ಉತ್ಸವ ಶ್ರವಣಾ ನಕ್ಷತ್ರದಂದು ಬ್ರಹ್ಮ ದೇವರ ರಥ ಎಳೆಯುವುದರ ಮುಖಾಂತರ ಆಚರಿಸುವುದರಿಂದ ಇದನ್ನು ಬ್ರಹ್ಮೋತ್ಸವವೆಂದು ಕರೆಯುತ್ತಾರೆ. ವಿಜಯ ದಶಮಿ ಶ್ರವಣಾ ನಕ್ಷತ್ರದಂದು ಬ್ರಹ್ಮೋತ್ಸವ ನಡೆಸುವ ಸಂಪ್ರದಾಯ. ತೊಂಡಮಾನ ರಾಜನ ಮುಖಾಂತರ ಬ್ರಹ್ಮ ದೇವರು ಹಲವಾರು ರಥದೊಂದಿಗೆ ಛತ್ರ, ಚಾಮರ, ವ್ಯಂಜನ ವ್ಯವಸ್ಥೆ ಮಾಡಿದ್ದಲ್ಲದೇ ಸಕಲ ದೇವತೆಗಳೂ, ರಾಜ ಸ್ವರೂಪಿಯಾದವರೂ, ಋಷಿ ಮುನಿಗಳೂ ಉಪಸ್ಥಿತಿ ಆಗ ಇದ್ದುದರಿಂದ ಇಂದಿಗೂ ಎಲ್ಲದೇವತೆಗಳೂ ಉಪಸ್ಥಿತಿ ಹೊಂದಿರುತ್ತಾರೆ ಎಂಬ ಪ್ರತೀತಿ ಇದೆ. ಬ್ರಹ್ಮೋತ್ಸವ ಭೇಟಿ ನೀಡುವ ಜನರಿಗೆ ತಮ್ಮ ಎಲ್ಲ ಅಭೀಷ್ಟ ಪೂರ್ಣಗೊಳ್ಳಲಿ ಈಡೇರಲಿ ಎಂದು ಬ್ರಹ್ಮ ದೇವರು ಶ್ರೀನಿವಾಸನನ್ನು ಆಶೀರ್ವದಿಸಿ ಪ್ರಾರ್ಥಿಸಿದನು. ನವರಾತ್ರಿ ಶುಭದಿನದಂದು ನಡೆಯುವ ಬ್ರಹ್ಮೋತ್ಸವವು ಎಲ್ಲರಿಗೂ ಭಗವಂತ ಆಶೀರ್ವಾದ ನೀಡಿ ಹರಸಲಿ .

ಚಿತ್ರಕಥೆ

# ಗರುಡವಾಹನ

ಕಥೆ : ತೆಲುಗು ಮೂಲ : ಶ್ರೀನಿವಾಸದೀಕ್ಷಿತರು
ಅನುವಾದ : ಶ್ರೀಮತಿ
ಚಿತ್ರಗಳು : ಟಿ. ಶಿವಾಜಿ




ಸಾಹಸದಿಂದ ಅಮೃತವನ್ನು ತಂದು ಕೊಟ್ಟಿದ್ದಾನೆ ಗರುಡನು ಕರ್ದಮಳು ...
ಇನ್ನು ನಿಮಗೆ ನನ್ನ ದಾಸ್ಯದಿಂದ ವಿಮುಕ್ತಿ ದೊರೆತಿದೆ.
ಧನ್ಯರಾದೆವು.
ಅಷ್ಟರಲ್ಲಿ ಇಂದ್ರನು ವೇಗದಿಂದ ಆಗಮಿಸಿ, ಅಮೃತ ಕಳಸವನ್ನು ಕರ್ದಮಗಳಿಂದ ಕಸಿದುಕೊಂಡು ಓಡಿ ಹೋಗಿದ್ದಾನೆ. ವಿಷಾದದಿಂದ ಕರ್ದಮ.....
ಅಯ್ಯೋ! ನನ್ನ ಅಮೃತ... ನನ್ನ ಅಮೃತ
ವಿಷ್ಣುವು ಗರುಡನ ಮುಂದೆ ಪ್ರತ್ಯಕ್ಷನಾಗಿದ್ದಾನೆ.
ಗರುಡಾ! ನಿನ್ನ ಮಾತೃಭಕ್ತಿಗೆ ಮೆಚ್ಚಿದ್ದೇನೆ. ಯಾವುದಾದರೂ ವರವನ್ನು ಬೇಡಿಕೋ
ಸ್ವಾಮಿ! ನಾಗಗಳನ್ನು ನನ್ನ ಆಹಾರವಾಗಿ ಪ್ರಸಾದಿಸು.
ಮತ್ತೊಂದು ವರವನ್ನು ಸಹಾ ಬೇಡಿಕೋ
ನಿನ್ನ ವಾಹನವಾಗಿರುವಂತೆ ಅನುಗ್ರಹಿಸು ಪರಮಾತ್ಮ.
ತಥಾಸ್ತು ವೈನತೇಯಾ!
ಧನ್ಯನಾದೆನು ದೇವಾ!
ಆ ದಿನದಿಂದ ವಾಹನರೂಪದಲ್ಲಿ ವಿಷ್ಣುವನ್ನು ಸೇವಿಸುತ್ತಿದ್ದಾನೆ ಗರುಡನು

## ಕ್ವಿಜ್

# ರಸಪ್ರಶ್ನೆ

ಅ) ತಿರುಮಲೆಗೆ ಇರುವ ಮತ್ತೊಂದು ಹೆಸರೇನು?
1. ಭೂವೈಕುಂಠ 2. ಭೂಕೈಲಾಸ
3. ಸಿಂಹಾಚಲ 4. ಶ್ರೀಶೈಲ

ಆ) ತಿರುಮಲೆಯಲ್ಲಿ ಶ್ರೀವೆಂಕಟೇಶ್ವರನಿಗಿಂತಲೂ ಮೊದಲೇ ಇದ್ದ ಶ್ರೀ ಮಹಾವಿಷ್ಣುವಿನ ಮತ್ತೊಂದು ರೂಪ ಯಾವುದು?
1. ಶ್ರೀ ಕೃಷ್ಣ 2.ಆದಿವರಾಹಸ್ವಾಮಿ
3.ನರಸಿಂಹಸ್ವಾಮಿ 4. ಹಯಗ್ರೀವ

ಇ) ತಿರುಮಲೆಯಲ್ಲಿನ ಪುಷ್ಕರಿಣಿಯಲ್ಲಿ ಯಾವ ದೇವಿಗೆ ಮಹತ್ವವನ್ನು ಕಲ್ಪಿಸಿಕೊಡಲಾಗಿದೆ?
1. ಶ್ರೀಲಕ್ಷ್ಮೀದೇವಿ 2. ಶ್ರೀ ಸರಸ್ವತಿದೇವಿ
3. ಭೂದೇವಿ 4. ಶ್ರೀದೇವಿ

ಈ) ತಿರುಮಲೆಯ ದೇವಸ್ಥಾನದ ಉತ್ತರ ದಿಕ್ಕಿನಲ್ಲಿ ಸಜೀವ ಸಮಾಧಿಯಾದ ಶ್ರೀನಿವಾಸನ ಭಕ್ತೆ ಯಾರು?
1. ಮೀರಾಬಾಯಿ 2. ಕವಯಿತ್ರಿ ಮೊಲ್ಲ
3. ತರಿಗೊಂಡ ವೆಂಗಮಾಂಬ 4. ಸತಿಸಕ್ಕೂ ಬಾಯಿ


ಉ) ತಿರುಮಲೆಯ ಶ್ರೀನಿವಾಸನ ಮಾವ ಎಂದು ಕರೆಸಿಕೊಳ್ಳುವ ಭಕ್ತ ಯಾರು?
1.ಅನ್ನಮಯ್ಯ 2. ರಾಮಾನುಜರು
3. ಶ್ರೀಪುರಂದರದಾಸರು 4. ಕನಕದಾಸರು

ಊ) ತಿರುಮಲೆಯಲ್ಲಿ ಬ್ರಹ್ಮೋತ್ಸವಗಳು ಯಾವ ಮಾಸದಲ್ಲಿ ನಡೆಯುತ್ತವೆ?
1. ಕಾರ್ತಿಕ 2. ಮಾರ್ಗಶಿರ
3. ಅಶ್ವೀಜ 4. ಮಾಘ

ಋ) ತಿರುಮಲೆಯ ಗರ್ಭಗುಡಿಯ ಹೊಸ್ತಿಲನ್ನು ಏನೆಂದು ಕರೆಯುತ್ತಾರೆ?
1 .ಜಾಬಾಲಿ 2.ರಾಮುಳವಾರಿ ಮೇಡ
3. ಮಂಟಪ 4.ಕುಲಶೇಖರಪಡಿ

ಉತ್ತರಗಳು: ಅ) 1 ಆ) 2 ಇ) 2 ಈ) 3 ಉ) 1 ಊ) 3 ಋ) 4

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಪಕ್ಕದಲ್ಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...

## ನಿಮಗಿದು ಗೊತ್ತಾ ಮಕ್ಕಳೇ ?

1.ಶ್ರೀವೆಂಕಟೇಶ್ವರ ಸ್ವಾಮಿಯವರಿಗೆ ಲಾಲಿ ಹಾಡನ್ನು ಬರೆದವರಾರು?

2.ಶ್ರೀವೆಂಕಟಟೇಶ್ವರ ಸ್ವಾಮಿಯವರಿಗೆ ಮುತ್ತಿನ ಆರತಿಯನ್ನು ನೀಡಿದವರು ಯಾರು?

3.ತಿರುಮಲೆ ಬ್ರಹ್ಮೋತ್ಸವದಲ್ಲಿ ಅವಭೃಥಸ್ನಾನವನ್ನು ಯಾವ ನಕ್ಷತ್ರ ದಿನದಂದು ನಿರ್ವಹಿಸುತ್ತಾರೆ?

4.ಆದಿಕಾವ್ಯವೆಂದು ಯಾವ ಗ್ರಂಥಕ್ಕೆ ಹೆಸರು?

5.ಮಹಾಭಾರತವನ್ನು ಹೀಗೆಯೂ ಕರೆಯುತ್ತಾರೆ?

6. ಸಮುದ್ರಲಂಘನೆಯಲ್ಲಿ ಹನುಮಂತನು ಏರಿದ ಪರ್ವತದ ಹೆಸರೇನು?

7. ಹನುಮ ಉಲ್ಲಂಘಿಸಿದ ಸಮುದ್ರದ ದೂರವೆಷ್ಟು ?

1. ತಾಳ್ಳಪಾಕ ಅನ್ನಮಾಚಾರ್ಯರು
2.ತರಿಗೊಂಡ ವೆಂಗಮಾಂಬ
3. ಶ್ರವಣಾನಕ್ಷತ್ರ
4.ರಾಮಾಯಣ
5.ಪಂಚಮವೇದ

## ಮಕ್ಕಳೇ ಇದನ್ನು ಹೊಂದಿಸಿ ಬರೆಯಿರಿ :

| | |
|---|---|
| 1. ಬಲರಾಮ | ಅ) ಕುಂತಿದೇವಿ ಪುತ್ರ |
| 2. ಅರ್ಜುನ | ಆ) ಗಾಂಧಾರಿ ಪುತ್ರ |
| 3.ದುರ್ಯೋಧನ | ಇ)ರೋಹಿಣಿ ದೇವಿ |
| 4.ರಾವಣ | ಈ) ದೇವಕಿ ಪುತ್ರ |
| 5.ಕೃಷ್ಣ | ಉ) ಕೈಕಸಿ ಪುತ್ರ |

ಉತ್ತರಗಳು : 1) ಇ 2) ಅ 3) ಆ 4) ಉ 5) ಈ

## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಡು ಅ ಆ ಗ

ಸೆ ಗೇ ತಿ ತಿ

ಉತ್ತರಗಳು:

ಅತಿ ಆಸೆ ಗತಿಗೇಡು



Printed by Sri P. Ramaraju, M.A., Special Officer (Press & Publications), T.T.D. Press, Tirupati and Published by Dr. K. Radharamana, M.A., M.Phil., Ph.D. on behalf of Tirumala Tirupati Devasthanams and Published at Tirupati - 517 507. Editor : Dr. V. G. Chokkalingam, M.A., Ph.D.



## ತಿರುಮಲೆ
## ಶ್ರೀವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು
## 2021 ಅಕ್ಟೋಬರ್ 07 ರಿಂದ 15 ರ ವರೆಗೆ





**14-10-2021**
**ಗುರುವಾರ**
**ಹಗಲು : ರಥೋತ್ಸವ**

**14-10-2021**
**ಗುರುವಾರ**
**ರಾತ್ರಿ : ಅಶ್ವವಾಹನ**

SAPTHAGIRI (KANNADA) ILLUSTRATED MONTHLY
Published by Tirumala Tirupati Devasthanams
Printing on 25-09-2021

